
ರಂಜನ ಬೋಧನೆ ಪ್ರಚೋದನೆ

ಲಂಕೇಶ್

ಜೂನ್ 15, 2011 ಪುಟ 20 ರೂ. 14/-

ಮಾಸ್ತಿ ನೆನಪು




ಸ್ವಾಮಿಗೆ ಅನಾರೋಗ್ಯ

ಮಠದ ಸೊತ್ತು ಪಾಪಿ ಪಾಲು?

ಅಮ್ಮ



ಗುಮ್ಮ



ಆಸ್ನೋಟಿಕರ್ ವಿಚಿತ್ರ ವಿಜಯೋತ್ಸವ

ಕಿರಣ್ 'ಪೂಜಾ' ಪುರಾಣ





ಮಾಸ್ತಿ ಇನ್ನಿಲ್ಲ

ಬೆಂಗಳೂರಿನ ಬಸವನಗುಡಿ ರಸ್ತೆ ಸ್ವಲ್ಪ ಬಣಗುಟ್ಟಲಿದೆ.

ಮಾಸ್ತಿ ಇಲ್ಲಿ ಪರಿಚಿತ ವ್ಯಕ್ತಿಯಾಗಿದ್ದರು. ತೆಳ್ಳನೆಯ ದೇಹ, ತೊಡೆಯನ್ನು ಮುಟ್ಟುವಷ್ಟು ಉದ್ದನೆಯ, ಮುಚ್ಚಿದ ಕಾಲರ್‌ಗಳ ಕೋಟು, ಹಳೆಯ ಕಾಲದ ರಟ್ಟಿನ ಟೋಪಿ, ಸುಕ್ಕುಮುಖದಲ್ಲಿ ಮಿನುಗುವ ಕಣ್ಣುಗಳ ನಡುವೆ ಅಷ್ಟೇನೂ ಚೂಪಲ್ಲದ ಮೂಗು, ಅದರ ಮೇಲೆ ಹಣೆಯಲ್ಲಿ ನಾಮ. ಹದಿನೈದು ವರ್ಷದ ಕೆಳಗೆ ಚುರುಕಾಗಿ ನಡೆಯುತ್ತಿದ್ದ ಕಾಲುಗಳು ಕ್ರಮೇಣ ನಿಧಾನವಾದರೂ ತಮ್ಮ ಸೆಡವು ಕಳೆದುಕೊಳ್ಳಲಿಲ್ಲ, ಸ್ನೇಹದಿಂದ ಬಾಚಿಕೊಳ್ಳುತ್ತಿದ್ದ ಕೈಗಳ ಪ್ರೀತಿ ಕಡಿಮೆಯಾಗಲಿಲ್ಲ, ಸಂಜೆ ಬಸವನಗುಡಿಯ ತಗ್ಗಿನ ಪಶ್ಚಿಮದ ತಮ್ಮ ಮನೆಯಿಂದ ಹೊರಟು ಗಾಂಧಿಬಜಾರಿನ ಹತ್ತಿರದ ಕ್ಲಬ್ಬಿಗೆ ಹೋಗುತ್ತಿದ್ದರು. ಅವರ ಸ್ನೇಹಿತ ಬೆಳ್ಳಾವೆ ವೆಂಕಟನಾರಣಪ್ಪ ಸ್ಥಾಪಿಸಿದ ಕ್ಲಬ್ ಅದು. ತಮಾಷೆಯೆಂದರೆ, ತೀರಾ ಋಜು ಸ್ವಭಾವದ, 'ಕ್ಲಬ್ ಸ್ಪಿರಿಟ್' ಅಷ್ಟೇನೂ ಇಲ್ಲದಿದ್ದ ಸಂಪ್ರದಾಯಸ್ಥ ಮನುಷ್ಯ ಬೆಳ್ಳಾವೆ ಈ ಕ್ಲಬ್ ಶುರುಮಾಡಲು ಕಷ್ಟಪಟ್ಟು ಎಂದೋ ತೀರಿಕೊಂಡರು; ಅದರ ಸದಸ್ಯರಾಗಿ ಮಾಸ್ತಿ ದಶಕಗಳನ್ನೇ ಕಳೆದರು. ಅಲ್ಲಿ ಮಾಸ್ತಿ ಏನು ಮಾಡುತ್ತಿದ್ದರು? ದಿನಾಲೂ ಇಸ್ಪೀಟಾಡುತ್ತಾರೆ ಎಂದು ಬಲ್ಲವರು ಹೇಳುತ್ತಿದ್ದರು.

ಆ ಕ್ಲಬ್ಬಿನಲ್ಲಿ ಇದ್ದ ಒಂದೇ ಒಂದು ತಮಾಷೆ ಈ ಇಸ್ಪೀಟು. ಬಿಲಿಯರ್ಡ್ಸ್, ಟೇಬಲ್‌ಟೆನ್ನಿಸ್, ಬ್ಯಾಡ್‌ಮಿಂಟನ್ ಮುಂತಾದ ಆಟಗಳಾಗಲಿ, ಮದ್ಯಪಾನವಾಗಲಿ ಇಲ್ಲದಿದ್ದ ಈ ಕ್ಲಬ್ಬಿನಲ್ಲಿ ಊಟವಿದ್ದರೂ ಪುಳಿಯೋಗರೆ, ಮೊಸರನ್ನ, ಚಪಾತಿ, ಕೋಸಂಬರಿಗಳು ಮಾತ್ರ ಇರಲು ಸಾಧ್ಯವಿತ್ತು. ಇಸ್ಪೀಟೆಂದರೆ ಚುರುಕಾಗುವ ನನ್ನ ಮನಸ್ಸು ಕೆಲವೊಮ್ಮೆ ಮಾಸ್ತಿಯವರ ಜೊತೆ ಆಡುವ ಚಂಚಲತೆ ಪಡೆದರೂ ಆ ಕ್ಲಬ್ಬಿಗೆ ಮೆಂಬರಲ್ಲದ ನಾನು ಅಂಥ ಆಸೆಗಳನ್ನು ಕುಡಿಯಲ್ಲಿಯೇ ಚಿವುಟಿ ಹಾಕಿದೆ. ಯಾರಾದರೂ ಸ್ನೇಹಿತರೊಂದಿಗೆ ಎಂದಾದರೊಮ್ಮೆ ಆ ಕ್ಲಬ್ಬಿಗೆ ಹೋದರೆ ಗಮನಿಸುತ್ತಿದ್ದೆ— ಮಾಸ್ತಿ ಯಥಾಪ್ರಕಾರ ಅಲ್ಲಿರುತ್ತಿದ್ದರು. ತೊಂಭತ್ತೈದಕ್ಕೆ ಕಾಲಿಟ್ಟ ಮಾಸ್ತಿ ಕೇವಲ ಆರು ತಿಂಗಳ ಕೆಳಗೆ ರಾತ್ರಿ ಎಂಟೂವರೆಗೆ ಹೊರಗೆ ಬಂದರು. ಸುತ್ತ ನೋಡಿದರು, ಜನ ಹರಟುತ್ತ ಕುಡಿಯುತ್ತ, ಸೇದುತ್ತ ಕೂತಿದ್ದರು. ಹಲವು ವರ್ಷಗಳಿಂದ ಮದ್ಯಪಾನ, ಧೂಮಪಾನ, ಮಾಂಸಾಹಾರ ಇತ್ಯಾದಿಗಳನ್ನು ಒಪ್ಪಿಕೊಂಡ ಈ ಕ್ಲಬ್ ಆಧುನಿಕವಾಗತೊಡಗಿತ್ತು; ಈ ಬಗ್ಗೆ ಮಾಸ್ತಿಯವರು ಏನೆಂದುಕೊಂಡರೋ ಯಾರೂ ಹೇಳಲಿಲ್ಲ, ಅವತ್ತು ರಾತ್ರಿ ಹೊರಗೆ ಬಂದ ಮಾಸ್ತಿ ಆಕಾಶದತ್ತ ನೋಡುತ್ತಾ ಸುತ್ತ ಗಮನಿಸಿದರು. ತಂಗಾಳಿ, ಶುಭ್ರಮುಗಿಲಲ್ಲಿ ಮಿನುಗುತ್ತಿದ್ದ ನಕ್ಷತ್ರಗಳು, ಮೂಗುತಿಯಂತೆ ತೇಲುತ್ತಿದ್ದ ಅರ್ಧಚಂದ್ರ. ನಾನು ಮಾಸ್ತಿಯವರತ್ತ ನೋಡುತ್ತಾ ಕೂತಿದ್ದೆ. ಈಚೆಗೆ ನಡೆಯುವುದನ್ನು ನಿಲ್ಲಿಸಿದ್ದ ಮಾಸ್ತಿ ಕಾರಿನಲ್ಲಿ ಕೂತು ಹೋದರು.

ಎರಡು ವರ್ಷದ ಹಿಂದೆ ಜ್ಞಾನಪೀಠ ಪ್ರಶಸ್ತಿ ಪಡೆದ ಮಾಸ್ತಿ ಈಗ ಹೊರಟುಹೋಗಿದ್ದಾರೆ. ಸತ್ತವರೆಲ್ಲರ ಬಗ್ಗೆ ಸಂತಾಪದ ಲೇಖನ ಬರೆಯುವಂತೆ ಮಾಸ್ತಿಯವರ ಬಗ್ಗೆಯೂ ಬರೆಯುವ ಅಗತ್ಯವಿಲ್ಲವಾದ್ದರಿಂದ ಇಲ್ಲಿ ಕೆಲವು ಟಿಪ್ಪಣಿಗಳನ್ನು ಮಾತ್ರ ಮಾಡಬಹುದು. ಉದಾಹರಣೆಗೆ, ಮುಪ್ಪನ್ನೇ ನೋಡಿ. ಎಲ್ಲರೂ ಬಾಲ್ಯ, ಯೌವನ, ನಡುವಯಸ್ಸು, ಮುಪ್ಪು ಪಡೆಯುವುದು ನಿಜವಾದರೂ ಇವೆಲ್ಲವೂ ಪ್ರತಿಯೊಬ್ಬನಲ್ಲೂ ಖಾಸಗಿಯಾಗಿ, ಆತನನ್ನು ಆತನದೇ ಆದ ರೀತಿಯಲ್ಲಿ ಕಾಡಿ ಪ್ರಚೋದಿಸುತ್ತವೆ. ತೊಂಬತ್ತೈದರ ಮಾಸ್ತಿಯಲ್ಲಿದ್ದಿರಬಹುದಾದ ಅನ್ನಿಸಿಕೆಗಳು ಅವರೊಂದಿಗೆ ಹೋಗಿವೆ.

ಆದರೆ ಸಾಹಿತಿಯ ಅನ್ನಿಸಿಕೆಗಳು ಹಾಗೆ ಪೂರ್ತಿ ಹೊರಟುಹೋಗುವುದಿಲ್ಲ, ಆತನ ಬರವಣಿಗೆಯೇ ಅವನ ಗುಪ್ತ ಜೀವನದ ದಾಖಲೆ. ಐದುಸಾವಿರ ವರ್ಷ ಇರುವ ಒಂದು ಮರ ತನ್ನ ಸುತ್ತಣ ಆಗುಹೋಗುಗಳನ್ನು ಪಡೆದು ಇಟ್ಟುಕೊಳ್ಳುತ್ತದಂತೆ; ತೊಂಬತ್ತೈದರ ಮಾಸ್ತಿಯಲ್ಲಿ ಎಷ್ಟೆಲ್ಲ ದಾಖಲೆಗೊಂಡಿರಬಹುದು! ಮಾಸ್ತಿಯವರು ಹುಡುಗರಾಗಿದ್ದಾಗ ಇವರಂತಹ ಇನ್ನೊಬ್ಬ ವ್ಯಕ್ತಿ ಸರ್ ಎಂ. ವಿಶ್ವೇಶ್ವರಯ್ಯ ಹರೆಯದಲ್ಲಿದ್ದರು. ನವರತ್ನ ರಾಮರಾಯರು ಎಡತೊರೆಯಲ್ಲೋ, ತಿರುಮಕೂಡಲು ನರಸೀಪುರದಲ್ಲೋ ತಹಸೀಲ್ದಾರರಾಗಿದ್ದರು. ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದಿದ್ದರು. ಭಾರತೀಯ ಸಮಾಜವೆಂಬ ಬೃಹತ್ ಬಂಡೆಯನ್ನು ಮೀಟಲು ಯತ್ನಿಸುತ್ತಿದ್ದ ಗಾಂಧೀಜಿ ಸರಕಾರಿ ನೌಕರಿಯಲ್ಲಿದ್ದ ಅನೇಕರಿಗೆ ಕುತೂಹಲಕರ ತಲೆನೋವಾಗಿದ್ದರು. ನವರತ್ನ ರಾಮರಾಯರ 'ನೆನಪು'ಗಳಲ್ಲಿ ನಾವು ಗಮನಿಸುವಂತೆ, ಆಗ ಉನ್ನತ ನೌಕರಿಯಲ್ಲಿದ್ದ ಎಲ್ಲರೂ ಬ್ರಾಹ್ಮಣರು. ಇವರಲ್ಲಿ ಇರುತ್ತಿದ್ದ ಸ್ನೇಹ, ಮನಸ್ತಾಪಗಳೆಲ್ಲ ಕುಟುಂಬದ ವ್ಯಾಜ್ಯಗಳಂತೆ ಇರುತ್ತಿದ್ದವು. ಸ್ವಾತಂತ್ರ್ಯಕ್ಕಾಗಿ ನಡೆದ ಗಲಾಟೆ ಈ ಸಂಧಿಕಾಲದಲ್ಲಿ ವಿಚಿತ್ರ ಮುಖಾಮುಖಿಗಳನ್ನು ಏರ್ಪಡಿಸಿತ್ತು; ಬ್ರಿಟಿಷರಿಂದ ಅಧಿಕಾರ ಪಡೆಯಬೇಕೆಂದಿದ್ದ (ಆಗಲೇ ಸ್ಥಾನಮಾನಗಳಲ್ಲಿದ್ದ) ಬ್ರಾಹ್ಮಣರುಗಳು ಆಗತಾನೆ ವಿದ್ಯೆಯನ್ನು ಪಡೆದುಕೊಳ್ಳುತ್ತಿದ್ದ ಶೂದ್ರರಲ್ಲಿ ಸಂಶಯಗಳನ್ನು ಹುಟ್ಟಿಸಿದ್ದರು. ಗಾಂಧೀಜಿ ಈ ಸಂಶಯಕ್ಕೀಡಾದ ಜನರ ಪ್ರತಿನಿಧಿಯಂತೆ ಕಾಣುತ್ತಿದ್ದರು.

ಜೂನ್ 6ಕ್ಕೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ತೀರಿಕೊಂಡು 25 ವರ್ಷಗಳಾಗುತ್ತವೆ. ಮಾಸ್ತಿ ನೆನಪಿನಲ್ಲಿ 1986ರಲ್ಲಿ ಪಿ.ಲಂಕೇಶರು ಬರೆದ ಲೇಖನ ಇಲ್ಲಿದೆ...

ತಮ್ಮ ಸುತ್ತಣ ಈ ಎಲ್ಲ ಅಲ್ಲೋಲಕಲ್ಲೋಲಗಳು ಮಾಸ್ತಿಯವರ ಆತ್ಮವನ್ನು ಅಷ್ಟಾಗಿ ತಟ್ಟಲಿಲ್ಲ, ಬದಲಾಗುತ್ತಿದ್ದ ಸಮಾಜದಲ್ಲಿದ್ದ ಮಾಸ್ತಿಗೆ ಹೊಚ್ಚಹೊಸದಾಗಿ ವಿದ್ಯೆ ಕಲಿತು ಬಂದ, ಕಲಿಯಲಾರದೆ ವಿಷಣ್ಣರಾದ, ವಿದ್ಯೆಯಿಂದಾಗಿಯೇ ತಬ್ಬಲಿಗಳಂತೆ ಆದ, ವಿದ್ಯೆಯಿಂದಾಗಿಯೇ ತಮ್ಮ ಅವಮಾನವನ್ನು ತೀವ್ರತರ ರೀತಿಯಲ್ಲಿ ಅನುಭವಿಸುವ ದುಃಖಕರ ಸವಲತ್ತು ಪಡೆದ ಜನ ಹೇಗೆ ಕಾಣುತ್ತಿದ್ದರು? ಇದು ಮಾಸ್ತಿಯವರನ್ನು ಕೇಳತಕ್ಕ ಪ್ರಶ್ನೆಯಲ್ಲ, ಏಕೆಂದರೆ, ಅಧಿಕಾರಿಯಾಗಿದ್ದು ಬದುಕನ್ನು ಬಿಡುಗಣ್ಣಿನಿಂದ ನೋಡುತ್ತಿದ್ದ ಮಾಸ್ತಿ ಬರೆಯುವುದನ್ನು ಹವ್ಯಾಸ ಮಾಡಿಕೊಂಡಿದ್ದರು; ಇವರ ಹವ್ಯಾಸವೇ ಅರ್ಥಪೂರ್ಣ ವೃತ್ತಿಯೆನ್ನುವ ಮಟ್ಟಿಗೆ ಕಲೆಯಾಗಿ ನಿಂತಿತು.

ಮಾಸ್ತಿಯವರ ಕಣ್ಣುಮುಂದೆಯೇ ಅನೇಕ ಸಾಹಿತ್ಯ ಶೈಲಿಗಳು ಬಂದು ಹೋದವು. ಕುವೆಂಪು ಅವರಿಗೂ, ಮಾಸ್ತಿಗೂ ಶೂದ್ರತಪಸ್ವಿಯ ಬಗ್ಗೆ ವಾಗ್ವಾದ ಆಯಿತು. ಮಹಾಭಾರತದಲ್ಲಿ ಸುರಕ್ಷಿತ ದೂರದಲ್ಲಿದ್ದ ಏಕಲವ್ಯ ಶಂಭೂಕರು ಕಲಿಯುಗದಲ್ಲಿ ಖುದ್ದು ಕಾಣಿಸಿಕೊಂಡರೆ ಮಾಸ್ತಿಯವರಿಗೆ ಹೇಗಾಗಬೇಡ; ಮಾಸ್ತಿ ಪ್ರಾಮಾಣಿಕವಾಗಿಯೇ ತಮ್ಮ ಆಘಾತವನ್ನು ಹೇಳಿಕೊಂಡು ಕುವೆಂಪು ಅವರಿಂದ ಛೇಡಿಸಿಕೊಂಡರು. ಆಮೇಲೆ ಪ್ರಗತಿಶೀಲ ಸಾಹಿತಿಗಳ ದಾಳಿ ಶುರುವಾಯಿತು. ಸಮತಾವಾದ, ನಗ್ನಸತ್ಯದ ಬಗ್ಗೆ ಮಾತಾಡುತ್ತಾ ಎಮಿಲಿಜೋಲಾ, ಮೊಪಾಸಾ, ಜಾಕ್ ಲಂಡನ್, ಮ್ಯಾಕ್ಸಿಂ ಗಾರ್ಕಿಗಳನ್ನು ಆದರ್ಶವಾಗಿರಿಸಿಕೊಂಡ ಅ.ನ.ಕೃ. ಗುಂಪಿಗೆ ನಾಮ ಹಾಕಿಕೊಂಡು ಸರ್ಕಾರಿ ಚಾಕರಿಯಲ್ಲಿದ್ದು ರಾಜಸೇವಾಸಕ್ತ ಬಿರುದು ಪಡೆದಿದ್ದ ಮಾಸ್ತಿ ಕಂದಾಚಾರದ ಸಾಕಾರಮೂರ್ತಿಯಂತೆ ಕಂಡರು. 'ಉದಯರಾಗ'ದ ಕಲಾವಿದ ಹೋಟೆಲ್ ಮಾಣಿಗೆ ಮಾಸ್ತಿಯವರ 'ಸುಬ್ಬಣ್ಣ' ಕತೆಯ ಸಂಗೀತಗಾರನನ್ನು ಹೋಲಿಸಿದರೆ ಮಾಸ್ತಿಯವರ ಸ್ಥಿಮಿತ, ಪಕ್ವ ಪ್ರತಿಭೆ ಹೇಗೆ ಗೆಲ್ಲುತ್ತದೆಂಬುದು ಗೊತ್ತಾಗುತ್ತದೆ.

ಈ ಮಧ್ಯೆ ನಿರಂಜನ, ಕಟ್ಟೀಮನಿಯವರ ಹೊಸ ಬ್ರ್ಯಾಂಡಿನ ಕಮ್ಯುನಿಸಂ ಶುರುವಾಯಿತು; ಪ್ರಗತಿಶೀಲರ ಗುಂಪು ಒಡೆದಂತೆ ಕಂಡುಬಂದು ಪುರೋಗಾಮಿ ಬ್ರಾಂಚೊಂದು ಉದ್ಘಾಟಿತವಾಯಿತು. ಇದರ ಜೊತೆಯಲ್ಲೇ ನವ್ಯಕಾವ್ಯ, ನವ್ಯ ಸಾಹಿತ್ಯ ಚಿಗುರೊಡೆದು, ಜನಪ್ರಿಯ ಲೇಖಕರು, ಸಿದ್ಧಾಂತ ಸಿಂಧುಗಳಾದ ಅಗ್ನಿಭಕ್ಷಕರೆಲ್ಲ ಚಿಲ್ಲರೆಯವರೆಂಬಂತೆ ಪರಿಗಣಿತರಾಗತೊಡಗಿದರು. ಇದು ಕೂಡ ಮಾಸ್ತಿಯವರನ್ನು ವಿಚಲಿತರನ್ನಾಗಿ ಮಾಡಲಿಲ್ಲ.

ಇಪ್ಪತ್ತನೆಯ ಶತಮಾನ ಬಲಿಯತೊಡಗಿದಂತೆ ಒಂದು ಕೊನೆಯಲ್ಲಿ ಊರ ಪಟೇಲರು, ಮತ್ತೊಂದು ಕೊನೆಯಲ್ಲಿ ರಾಜ್ಯದ ದಿವಾನರು ಸ್ಥಳ ಪಲ್ಲಟ ಹೊಂದಿದರು. ಸ್ವಾತಂತ್ರ್ಯದೊಂದಿಗೇ ರಾಜರು, ಫರಂಗಿಯವರು ಹೋಗಿ ಪ್ರಜಾಪ್ರಭುತ್ವ ಬಂತು. ಜಾತಿಗಳು, ವರ್ಗಗಳು ಪರಸ್ಪರ ಸಂಘರ್ಷಿಸುವುದು, ಹೊಸ ಹೊಂದಾಣಿಕೆ, ಹೊಸ ದಿಗ್ಭ್ರಮೆ ಕಂಡುಕೊಳ್ಳುವುದು ಶುರುವಾಯಿತು.

ಇವೆಲ್ಲದರ ನಡುವೆ ಮಾಸ್ತಿ ಜೀವ ಹಿಡಿದುಕೊಂಡಿದ್ದರು. ತಮ್ಮ ಬೇರುಗಳನ್ನು ಮಣ್ಣಿನಲ್ಲಿ ಬಿಟ್ಟುಕೊಂಡಿದ್ದರು. ಇದು ಬಂಡೆಯ ಸಂದಿನ ಹಿಡಿಮಣ್ಣಿನಲ್ಲಿ ಚಿಗುರೊಡೆವ ಮಾವಿನಂತಿರಬಹುದು. ಆಲದ ಪೊಟರೆಯಲ್ಲಿ ಬಿದ್ದ ಬೀಜದಿಂದ ಹುಟ್ಟಿದ ಅರಳಿಯಂತಿರಬಹುದು, ಆದರೆ ಲೇಖಕನಿಗೆ ಬೇಕೇಬೇಕಾದ ನೆಲ, ಜಲ ಅವರಿಗೆ ದೊರೆತಿತ್ತು, ಅವರ ಕತೆ, ಕಾವ್ಯ, ಕಾದಂಬರಿ, ನಾಟಕ ಯಾವುದೂ ಬದುಕಿನ ಉತ್ಸವದ ವಿವರ ತೋರುವುದಿಲ್ಲ, ಉತ್ಸವದಲ್ಲಿ ಭಾಗಿಯಾದವರ ಸ್ಥಾನಮಾನ, ಸ್ಪಂದನವನ್ನು ಮಾತ್ರ ತೋರುತ್ತದೆ.

ಜನ ನವ್ಯರ ಪ್ರಯೋಗ, ಪ್ರಗತಿಶೀಲರ ಕೂಗು ಕೇಳಿಯಾದ ಮೇಲೆ ಮಾಸ್ತಿಯತ್ತ ನೋಡಿದರು. ಅಲ್ಲಿದ್ದ ಮೆಲುದನಿ, ಸ್ಪಷ್ಟತೆ, ಅನ್ಯೋನ್ಯ ಮತ್ತು ಜೀವನೋತ್ಸಾಹಕ್ಕೆ ಬೆರಗಾದರು.

(14ನೇ ಪುಟಕ್ಕೆ)

ಅತ್ತ-ಇತ್ತ

ತೆಂಡೂಲ್ಕರ್ ಯಾರು ಅಂತ ಗೊತ್ತಿಲ್ಲ

ಇತ್ತೀಚೆಗೆ ಧರ್ಮಶಾಲಾದಲ್ಲಿ ದಲೈ ಲಾಮಾ ಅವರು ಕಿಂಗ್ಸ್ ಇಲೆವನ್ ಪಂಜಾಬ್ ಮತ್ತು ಡೆಕ್ಕನ್ ಚಾರ್ಜರ್ಸ್ ನಡುವಿನ ಐಪಿಎಲ್ ಪಂದ್ಯವನ್ನು ನೋಡಲು ಹೋಗಿದ್ದಾಗ ಪತ್ರಕರ್ತರೊಬ್ಬರು "ನಿಮಗೆ ಸಚಿನ್ ತೆಂಡೂಲ್ಕರ್ ಬಗ್ಗೆ ಗೊತ್ತಾ?" ಎಂದು ಅವರನ್ನು ಕೇಳಿದರಂತೆ. ಅದಕ್ಕೆ ದಲೈ ಲಾಮಾ ಅವರು ಕೊಟ್ಟ ಉತ್ತರ: "ಇಲ್ಲ, ಅವರು ಯಾರು?"

-ಪತ್ರಿಕಾ ವರದಿ

ಅವತ್ತು ದಾಳಿ ಇವತ್ತು ಧನ

ಕ್ರೈಸ್ತ ಸಮುದಾಯದ ಅಭಿವೃದ್ಧಿಗೆ ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ 50 ಕೋಟಿ ರೂಪಾಯಿ ಅನುದಾನ ಕೊಟ್ಟಿದ್ದೇನೆ. ಕ್ರೈಸ್ತರ ಕಲ್ಯಾಣ ಮಂಡಳಿಯನ್ನು ಸದ್ಯದಲ್ಲೇ ರಚಿಸಲಾಗುತ್ತದೆ.

-ಮುಖ್ಯಮಂತ್ರಿ ಯಡಿಯೂರಪ್ಪ

ಇದೊಂದು ತಯಾರಿಯೇ?

ಜೀವಾವಧಿ ಶಿಕ್ಷೆಗೆ ಗುರಿಯಾಗಿರುವವರೊಂದಿಗೆ ಹೆಚ್ಚು ಬೆರೆಯುತ್ತಿರುವ ಎ. ರಾಜಾ ಅವರ ಪೂರ್ವಾಪರಗಳನ್ನು ವಿಚಾರಿಸಿಕೊಳ್ಳುತ್ತಿದ್ದಾರೆ.

-ತಿಹಾರ್ ಜೈಲು ಅಧಿಕಾರಿ

ಹಾಗಾದರೆ ಹೈಕೋರ್ಟ್ ತಡೆಯಾಜ್ಞೆ ಯಾಕೆ?

ಭೂಹಗರಣದ ತನಿಖೆಯನ್ನು ಲೋಕಾಯುಕ್ತರೇ ಮುಂದುವರಿಸಲಿದ್ದು ಅವರ ಅಧಿಕಾರ ಮೊಟಕು ಮಾಡುವ ಯತ್ನ ಮಾಡಿಲ್ಲ,

-ಕೇಂದ್ರಕ್ಕೆ ಯಡ್ಡಿ ಪತ್ರ

2ಜಿ ಹಳ್ಳಕ್ಕೆ ಮಾರನ್

2006 ರಲ್ಲಿ ಸಂಪರ್ಕ ಸಚಿವರಾಗಿದ್ದ ದಯಾನಿಧಿ ಮಾರನ್, ಏರ್‌ಸೆಲ್ ಮಾತೃಸಂಸ್ಥೆ ಮ್ಯಾಕ್ಸಿಸ್‌ಗೆ ತರಂಗಗುಚ್ಛ ದೊರಕಿಸಲು ಸಹಕರಿಸಿದ್ದರು. ಇದರಿಂದಾಗಿ ದೇಶದ ಬೊಕ್ಕಸಕ್ಕೆ ಸುಮಾರು 600 ಕೋಟಿ ರೂಪಾಯಿ ನಷ್ಟವಾಗಿತ್ತು,

-ತೆಹೆಲ್ಕಾ ತನಿಖಾ ವರದಿ

ಛೀ, ಸುಳ್ಳಿ!

ರೆಡ್ಡಿ ಸೋದರರನ್ನು ಕರ್ನಾಟಕದಲ್ಲಿ ಸಚಿವರನ್ನಾಗಿಸಿದ ವಿಷಯ ಕುರಿತಂತೆ ಉಂಟಾದ ವಿವಾದಕ್ಕೆ ಮಾಧ್ಯಮಗಳೇ ಕಾರಣ.

-ಸುಷ್ಮಾ ಸ್ವರಾಜ್

ಯಾರ ಕಲ್ಯಾಣ ಯಡ್ಡಿಯವರೇ?

ಎರಡು ವರ್ಷದ ಅಧಿಕಾರದ ಅವಧಿಯಲ್ಲಿ ರಾಜ್ಯವನ್ನು 'ಕಲ್ಯಾಣ ಕರ್ನಾಟಕ'ವಾಗಿ ರೂಪಾಂತರಗೊಳಿಸುವುದು ನನ್ನ ಆಶಯ.

-ಯಡಿಯೂರಪ್ಪ

ನೀವು ಕೊಟ್ಟ ಆಮಿಷವೇನು?

"ಅವರೆಲ್ಲರೂ (ಭಿನ್ನಮತೀಯರು) ಒಳ್ಳೆಯ ಶಾಸಕರೇ. ಆದರೆ ಅವರೆಲ್ಲರಿಗೆ ಹಣದ ಮತ್ತು ಮಂತ್ರಿಗಿರಿಯ ಆಮಿಷವನ್ನು ತೋರಿಸಿ ಕುಮಾರಸ್ವಾಮಿ ಅವರನ್ನು ದಾರಿ ತಪ್ಪಿಸಿದ್ದರು. ಈಗ ಅದೆಲ್ಲ ಅವರಿಗೆ ಅರ್ಥವಾಗಿ ಯಡಿಯೂರಪ್ಪನವರೇ ತಮ್ಮ ನಾಯಕ ಎಂದು ಒಪ್ಪಿಕೊಂಡಿದ್ದಾರೆ.

-ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ

ಪತನದ ಹಾದಿಯಲ್ಲಿ ಪಾಕ್

ಔರಂಗಜೇಬ್ ತನ್ನ ಸಾಮ್ರಾಜ್ಯವನ್ನು ಗಟ್ಟಿಗೊಳಿಸಲು ಮೂಲಭೂತವಾದಿ ಇಸ್ಲಾಂ ಅನ್ನು ಪ್ರೋತ್ಸಾಹಿಸಿದ. ಆದರೆ ಅದು ಲಕ್ಷಾಂತರ ದಂಗೆಗಳಿಗೆ ಕಾರಣವಾಗಿ ಮೊಘಲ್ ಸಾಮ್ರಾಜ್ಯವೇ ಪತನವಾಯಿತು. ಅದೇ ವೃತ್ತಾಂತ ಇವತ್ತು ಪಾಕಿಸ್ತಾನದಲ್ಲಿ ನಡೆಯುತ್ತಿದೆ. ಯಾವ ಉಗ್ರವಾದಿ ಇಸ್ಲಾಂ ಅನ್ನು ಪಾಕಿಸ್ತಾನ ಪ್ರೋತ್ಸಾಹಿಸಿತ್ತೋ ಅದೇ ಉಗ್ರವಾದಿ ಇಸ್ಲಾಂ ಇವತ್ತು ಪಾಕಿಸ್ತಾನವನ್ನೇ ನಾಶಗೊಳಿಸುತ್ತಿದೆ.

-ಸುಶಾಂತ್ ಸರೀನ್, ಸಾಮಾಜಿಕ ತಜ್ಞ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

ಇವತ್ತಿನ ರಾಜಕಾರಣಿಗಳು ನಾದಿರ್ ಷಾನನ್ನೇ ಮೀರಿಸುತ್ತಾರೆ. ಇವರು ಜನರಿಂದ ಮತ ಪಡೆಯುವುದು ಆಡಳಿತವನ್ನು ನಡೆಸುವುದಕ್ಕಲ್ಲ, ಬದಲಾಗಿ ಲೂಟಿ ಮಾಡಲು.

-ಮಾಜಿ ಪೊಲೀಸ್ ಅಧಿಕಾರಿ ಪ್ರಕಾಶ್ ಸಿಂಗ್

ಎ.ಆರ್. ರೆಹಮಾನ್‌ನಂತರ ಭಾರತದಿಂದ ರಫ್ತಾಗಿರುವ ಪ್ರತಿಭಾವಂತ ಸಂಗೀತಗಾರ ಯಾರೆಂದರೆ, ಅದು ಲುಂಗಿ ತೊಟ್ಟು, ಕಾಲಿಗೆ ಗೆಜ್ಜೆ ಹಾಕಿಕೊಂಡಿರುವ ಮೈಸೂರಿನ ರಘು ದೀಕ್ಷಿತ್.

-ಪತ್ರಿಕಾ ವರದಿ

ತಮಿಳುನಾಡಿನ ವಿಶ್ವವಿದ್ಯಾಲಯಗಳು ಇಲ್ಲಿಯತನಕ ಮಾಜಿ ಮುಖ್ಯಮಂತ್ರಿ ಎಂ. ಕರುಣಾನಿಧಿಯವರಿಗೆ 600 ಡಾಕ್ಟರೇಟ್ ಗೌರವವನ್ನು ದಯಪಾಲಿಸಿವೆ.

-ಪತ್ರಿಕಾ ವರದಿ

ಪತ್ರಿಕೆಗಳು ತನ್ನ ಬಗ್ಗೆ ಚೆನ್ನಾಗಿ ಬರೆಯಲಿ ಎಂಬ ಉದ್ದೇಶದಿಂದ ಇತ್ತೀಚೆಗೆ ಉತ್ತರ ಭಾರತದ ರಾಜ್ಯವೊಂದರ ಮುಖ್ಯಮಂತ್ರಿ ಹನ್ನೆರಡು ಪತ್ರಕರ್ತರಿಗೆ ಅತ್ಯುತ್ತಮವಾದ ಎಸಿಗಳನ್ನು ಉಡುಗೊರೆಯಾಗಿ ನೀಡಿದರು. ಆದರೂ ಆ ಪತ್ರಕರ್ತರು ಮುಖ್ಯಮಂತ್ರಿಯ ಬಗ್ಗೆ ಕೆಟ್ಟದಾಗಿಯೇ ಬರೆದರು. ಕಾರಣ ಹುಡುಕಿದಾಗ ಗೊತ್ತಾಗಿದ್ದೇನೆಂದರೆ ಆ ಎಸಿಗಳನ್ನು ಪ್ರತಿಷ್ಠಾಪಿಸಲು ಬರಬೇಕಾಗಿದ್ದ ಮೆಕ್ಯಾನಿಕ್ ಪತ್ರಕರ್ತರ ಮನೆಗಳಿಗೆ ಹಾಜರಾಗಿರಲಿಲ್ಲ ಮತ್ತು ಎಸಿಗಳ ಡಬ್ಬಾದಲ್ಲಿ ಗ್ಯಾರಂಟಿ ಕಾರ್ಡ್‌ಗಳು ಇರಲಿಲ್ಲ.

-ಪತ್ರಿಕಾ ವರದಿ

ಕ್ರಿಕೆಟ್ ಆಟದ ದೇವತಾಪುರುಷ ಸಚಿನ್ ತೆಂಡೂಲ್ಕರ್ ತಾನೊಬ್ಬ ನಟ ಹೊರತು ಕ್ರಿಕೆಟಿಗನಲ್ಲ ಎಂದು ಆದಾಯ ತೆರಿಗೆ ಇಲಾಖೆಗೆ ಘೋಷಿಸಿದ್ದಾರೆ. ಟಿವಿ ಜಾಹೀರಾತುಗಳಲ್ಲಿ ನಟಿಸುವ ತಾನು ಅದರಿಂದ ಹೆಚ್ಚು ಆದಾಯ ಪಡೆಯುವುದರಿಂದ ತಾನು ಕಟ್ಟಬೇಕಿರುವ ಎರಡು ಕೋಟಿ ರೂಪಾಯಿಗಳ ತೆರಿಗೆಯನ್ನು ಕಡಿತಗೊಳಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

-ಪತ್ರಿಕಾ ವರದಿ

"ಆದಷ್ಟು ಬೇಗ ಗುಣಮುಖರಾಗಿ ಥಲೈವಾ (ನಾಯಕ). ನನಗೆ ಗೊತ್ತು ಐಶ್ವರ್ಯಳ ಮಗಳೂ ನಿಮ್ಮ ಜೊತೆ ಹೀರೋಯಿನ್ ಆಗಿ ನಟಿಸಲಿದ್ದಾಳೆ."

-ರಜನಿಕಾಂತ್ ಅಭಿಮಾನಿ

'ಆಡುಕುಲಂ' ಚಿತ್ರದಲ್ಲಿನ ನಟನೆಗಾಗಿ ಧನುಷ್‌ಗೆ 'ಅತ್ಯುತ್ತಮ ನಟನೆಗಾಗಿ ರಜನೀಕಾಂತ್ ಪ್ರಶಸ್ತಿ' ದೊರಕಿದೆ. ಆದರೆ ಧನುಷ್‌ನ ಮಾವ ರಜನೀಕಾಂತ್‌ಗೆ ಈ ತನಕ ಯಾವುದೇ ರಾಷ್ಟ್ರ ಪ್ರಶಸ್ತಿ ಲಭಿಸಿಲ್ಲ,

-ಪತ್ರಿಕಾ ವರದಿ

ಯೋಜನಾ ಆಯೋಗದ ಅಯೋಗ್ಯರ ಬಡತನ ವ್ಯಾಖ್ಯಾನ!

“ಭಾರತದ ನಗರ ನಿವಾಸಿಗಳು ದಿನಕ್ಕೆ 20 ರೂಪಾಯಿಗಳನ್ನು ದುಡಿಯುತ್ತಿದ್ದು, ಗ್ರಾಮೀಣ ಪ್ರದೇಶದ ಜನರು ದಿನಕ್ಕೆ 15 ರೂಪಾಯಿಗಳನ್ನು ದುಡಿಯುತ್ತಿದ್ದರೆ ಅಂತಹವರು ಬಡತನ ರೇಖೆಗಿಂತ ಕೆಳಗೆ ಬರುವುದಿಲ್ಲ” ಎಂದು ಭಾರತ ಯೋಜನಾ ಆಯೋಗ ಇತ್ತೀಚೆಗೆ ಘೋಷಿಸಿದೆ. ಅಂದರೆ ನಗರದಲ್ಲಿ ತಿಂಗಳಿಗೆ ಕೇವಲ ಆರು ನೂರು ರೂಪಾಯಿ ಪಗಾರ ಮತ್ತು ಹಳ್ಳಿಗಳಲ್ಲಿ 450 ರೂಪಾಯಿ ಸಂಬಳ ಗಳಿಸುತ್ತಿದ್ದರೆ ಸಾಕು ಯಾರೇ ಆಗಲಿ, ಆರಾಮದ ಜೀವನ ನಡೆಸಬಹುದು ಎಂಬ ನಿಲುವು ಎಸಿ ರೂಮ್‌ಗಳಲ್ಲಿ ಕೂರುವ, ಐಷಾರಾಮಿ ಕಾರ್‌ಗಳಲ್ಲಿ ಓಡಾಡುವ, ತಿಂಗಳಿಗೆ ಲಕ್ಷಾಂತರ ರೂಪಾಯಿಗಳ ಆದಾಯವನ್ನು ಹೊಂದಿರುವ ಯೋಜನಾ ಆಯೋಗದ ಬೃಹಸ್ಪತಿಗಳದ್ದು!

ಯೋಜನಾ ಆಯೋಗದ ಅಯೋಗ್ಯರ ನೀಚಬುದ್ಧಿಯನ್ನು ವರ್ಣಿಸಲು ಪದಗಳೇ ಸಿಗದಷ್ಟು ಕೋಪ ನನ್ನ ನೆತ್ತಿಗೇರಿದೆ. ಇವತ್ತು ನಮ್ಮ ನಗರಗಳಲ್ಲೇ ಆಗಲಿ, ಹಳ್ಳಿಗಳಲ್ಲೇ ಆಗಲಿ ಒಂದು ಚಿಕ್ಕ ಸಂಸಾರವನ್ನು ನೆಮ್ಮದಿಯಿಂದ ನಿರ್ವಹಿಸಲು, ಸಂಸಾರದ ಎಲ್ಲರಿಗೂ ಆರೋಗ್ಯಕರ ಆಹಾರ, ವಿದ್ಯೆ, ನೆಟ್ಟಗಿನ ಬಟ್ಟೆ ಕೊಡಿಸಲು ಎಷ್ಟು ಹಣ ಬೇಕಾಗುತ್ತದೆಂದು ಆ ದರಿದ್ರಗಳಿಗೆ ಅರಿವಾದರೂ ಇದೆಯೇ? ಅದರಲ್ಲೂ ಈಗ ಎಲ್ಲಾ ಪದಾರ್ಥಗಳ ಬೆಲೆ ಗಗನಕ್ಕೇರುತ್ತಿರುವಾಗ?

ಇತ್ತೀಚೆಗೆ ‘ಇಂಡಿಯಾ ಟುಡೆ’ ಪತ್ರಿಕೆಯವರು ಬೆಲೆ ಏರಿಕೆ ಬಗ್ಗೆ ಇದೇ ಯೋಜನಾ ಆಯೋಗದ ಡೆಪ್ಯೂಟಿ ಚೇರ್ಮನ್ ಮಾಂಟೆಕ್ ಸಿಂಗ್ ಅಹ್ಲುವಾಲಿಯಾನನ್ನು ಪ್ರಶ್ನಿಸಿದಾಗ ಆತ ಎಂತಹ ಉತ್ತರ ಕೊಟ್ಟಿದ್ದಾನೆ ಗೊತ್ತಾ? “ನಿಜ, ಇತ್ತೀಚೆಗೆ ಹಾಲು ಮತ್ತು ತರಕಾರಿಗಳ ಬೆಲೆ ಏರಿದೆ. ಆದರೆ ಇದೆಲ್ಲ ನಮ್ಮ ಆರ್ಥಿಕ ಸಮೃದ್ಧಿ ಮತ್ತು ಖರೀದಿಸುವ ತಾಕತ್ತಿನ ಸಂಕೇತವಾಗಿದೆ” ಎಂದಿದ್ದಾನೆ ಆ ಮುಠ್ಠಾಳ. ಅಷ್ಟೇ ಅಲ್ಲ, ಇದೇ ಹಣದುಬ್ಬರ ಲಕ್ಷಾಂತರ ಭಾರತೀಯರನ್ನು ಸಾವಿನ ಅಂಚಿಗೆ ದೂಡುತ್ತಿದ್ದರೂ, ‘ಇಂಡಿಯಾ ಟುಡೆ’ ಪ್ರಕಾರ ಈ ಬೆಲೆ ಏರಿಕೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಹೆಮ್ಮೆ ಇದೆಯಲ್ಲದೆ, ತನ್ನ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದಾಗಿ ಜನರ ಕೈಯಲ್ಲಿ ಅಪಾರ ಹಣ ಹರಿದಾಡುತ್ತಿದ್ದು ಅವರೆಲ್ಲ ಹೆಚ್ಚು ವಸ್ತುಗಳನ್ನು ಖರೀದಿಸುತ್ತಿರುವುದರಿಂದ ಆಹಾರ ಬೆಲೆ ಏರುತ್ತಿದೆ ಎಂಬ ತರ್ಕ ಅದರದ್ದಾಗಿದೆ.

ಜಾಗತಿಕವಾಗಿ ಆಹಾರ ಬೆಲೆ ಏರುತ್ತಿರುವುದಕ್ಕೆ ಕಾರಣ ಚೀನಿಯರು ಮತ್ತು ಭಾರತೀಯರು ಹೆಚ್ಚು ತಿನ್ನುತ್ತಿರುವುದೇ ಕಾರಣ ಎಂದಿದ್ದ ಅಮೆರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್‌ನ ಅವಿವೇಕತನಕ್ಕೂ, ಹಣದುಬ್ಬರದಿಂದ ನಮ್ಮ ಜನರಿಗೆ ಒಳ್ಳೆಯದಾಗುತ್ತಿದೆ ಎಂದು ಅಹ್ಲುವಾಲಿಯಾ ತರಹದ ಹುಚ್ಚರಿಗೂ ಏನು ವ್ಯತ್ಯಾಸ?

ಇವತ್ತು ನಮ್ಮ ರಾಜ್ಯದಲ್ಲೇ ಹಾಲಿನ ಬೆಲೆ ಲೀಟರ್‌ಗೆ 23 ರೂಪಾಯಿ. ಮೂವತ್ತು ರೂಪಾಯಿಗಿಂತ ಕಡಿಮೆ ಬೆಲೆಗೆ ಮನುಷ್ಯರು ತಿನ್ನುವಂತಹ ಅಕ್ಕಿ ಸಿಗುವುದಿಲ್ಲ, ಕೆಜಿ ರಾಗಿ ಬೆಲೆ 18 ರೂಪಾಯಿ ಆಗಿದ್ದರೆ, ಗೋಧಿ ಬೆಲೆ 20 ರೂಪಾಯಿ. ಇದೆಲ್ಲದರೊಂದಿಗೆ ಮನೆ ಬಾಡಿಗೆ, ನೀರು, ವಿದ್ಯುತ್, ಶಾಲೆ-ಕಾಲೇಜಿನ ಶುಲ್ಕ, ಆರೋಗ್ಯ ಬಟ್ಟೆ ಇತ್ಯಾದಿಗಳನ್ನು ಲೆಕ್ಕ ಹಾಕಿದರೆ ತಂದೆತಾಯಿ ಮತ್ತು ಇಬ್ಬರು ಮಕ್ಕಳಿರುವ ಚಿಕ್ಕ ಕುಟುಂಬಕ್ಕೆ, ಹಾಸಿಗೆ ಇದ್ದಷ್ಟು ಕಾಲುಚಾಚಿ ಬದುಕುವುದಕ್ಕೆ ಕನಿಷ್ಠವೆಂದರೂ ತಿಂಗಳಿಗೆ ಎಂಟು ಸಾವಿರ ರೂಪಾಯಿಗಳ ಆದಾಯ ಇರಲೇಬೇಕಾಗಿದೆ. ಇದರಲ್ಲಿ ಆಕಸ್ಮಿಕ ವೆಚ್ಚಗಳನ್ನು ಲೆಕ್ಕ ಹಾಕಿಲ್ಲ.

ನಿಜವಾಗಲೂ ಸಾಮಾನ್ಯ ಜನರು ಹೇಗೆ ಬದುಕುತ್ತಿದ್ದಾರೆ ಎಂದು ವಿಚಾರಿಸಲು ನಮ್ಮ ಮನೆ ಕೆಲಸಕ್ಕೆ ಬರುವ ಯಶೋಧಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿದೆ.

ಎಂದೂ ಆಕೆಯನ್ನು ಹೆಚ್ಚು ಮಾತನಾಡಿಸದ ನಾನು ಇದ್ದಕ್ಕಿದ್ದಂತೆ ಆಕೆಯ ಆದಾಯ, ಅವಳ ಮಗನಿಗೆ ಬರುವ ಸಂಬಳ, ತಿಂಗಳ ವೆಚ್ಚಗಳ ಬಗ್ಗೆ ಕೇಳಿದಾಗ ಕುತೂಹಲಗೊಂಡ ಯಶೋಧ “ಯಾಕೆ ಅಕ್ಕ ಅದೆಲ್ಲ?” ಎಂದಳು. “ಇಲ್ಲ, ನೀನು ತಿಂಗಳಿಗೆ 600 ರೂಪಾಯಿಗಳಿಗಿಂತ ಹೆಚ್ಚು ದುಡಿಯುತ್ತಿದ್ದರೆ ನೀನು ಬಡವಿ ಅಲ್ಲ, ಆದ್ದರಿಂದ ನಿನ್ನಂಥವರಿಗೆ ರೇಷನ್ ಕಾರ್ಡು ಇತ್ಯಾದಿಗಳನ್ನು ನೀಡುವ ಅಗತ್ಯ ಇಲ್ಲ, ಅಂತ ಭಾರತ ಸರ್ಕಾರ ಹೇಳಿದೆ. ಅದಕ್ಕೇ ಕೇಳಿದೆ” ಎಂದು ಆಕೆಗೆ ಅರ್ಥವಾಗುವ ರೀತಿಯಲ್ಲಿ ಸಂಕ್ಷಿಪ್ತವಾಗಿ ಹೇಳಿದೆ.


ಯಶೋಧ

ಅದನ್ನು ಕೇಳಿ ಯಶೋಧಳಿಗೆ ನಗಬೇಕೋ, ಅಳಬೇಕೋ ಗೊತ್ತಾಗಲಿಲ್ಲ, “ತಿಂಗಳಿಗೆ ಆರುನೂರು ರೂಪಾಯಿ ದುಡಿದರೆ ನಾನು ಬಾಡಿಗೆ ಕಟ್ಟಲೋ, ಗಂಜಿ ಕುಡಿದು ಬದುಕಲೋ” ಎಂದಳು ಯಶೋಧ.

ಸುಮಾರು 38 ವರ್ಷ ವಯಸ್ಸಿನ ಯಶೋಧಳ ಮನೆಯಲ್ಲಿ ಆಕೆ, ಅವಳ ಮಗ, ಮಗಳು, ಸೊಸೆ ಮತ್ತು ಮೊಮ್ಮಗ ಇದ್ದಾರೆ. ನನ್ನ ಮತ್ತು ಇನ್ನೊಂದು ಮನೆಯಲ್ಲಿ ಕೆಲಸ ಮಾಡುತ್ತಿರುವ ಯಶೋಧ ತಿಂಗಳಿಗೆ 2,500 ರೂಪಾಯಿಗಳನ್ನು ದುಡಿಯುತ್ತಾಳೆ. ಅವಳ ಮಗ ಕಾರ್ ಡ್ರೈವರ್ ಆಗಿದ್ದು ತಿಂಗಳಿಗೆ 6000 ರೂಪಾಯಿಗಳ ಸಂಬಳ ಪಡೆಯುತ್ತಾನೆ. ಯಶೋಧಳ ಮಗಳು ಇನ್ನೂ ಶಾಲೆಯಲ್ಲಿ ಓದುತ್ತಿದ್ದು ಸೊಸೆ ಇತ್ತೀಚೆಗೆ ಮಗುವಿಗೆ ಜನ್ಮ ನೀಡಿರುವುದರಿಂದ ಮನೆಯಲ್ಲಿದ್ದಾಳೆ.

ಈ ಐವರ ಕುಟುಂಬ ಒಂದು ಹಾಲ್, ಚಿಕ್ಕ ಕೊಠಡಿ ಮತ್ತು ಅಡುಗೆ ಮನೆ (ಒಟ್ಟು ವಿಸ್ತೀರ್ಣ 12x12 ಅಡಿ) ಇರುವ ಮನೆಯಲ್ಲಿ ವಾಸಿಸುತ್ತಿದ್ದು ಅದರ ತಿಂಗಳ ಬಾಡಿಗೆಯೇ ಎರಡು ಸಾವಿರ ರೂಪಾಯಿ. ನೀರು, ಕರೆಂಟ್ ಎಂದು 500 ರೂಪಾಯಿ ಹೋಗುತ್ತದೆ. ರೇಷನ್ ಅಂಗಡಿಯಲ್ಲಿ ಸಿಗುವ ಅಕ್ಕಿ, ಗೋಧಿ, ರಾಗಿ, ಬೇಳೆ, ಸಕ್ಕರೆ ಮತ್ತು ಬಟ್ಟೆ ಸೋಪಿಗೆ ಒಂದು ಸಾವಿರಕ್ಕಿಂತಲೂ ಹೆಚ್ಚು ವೆಚ್ಚವಾಗುತ್ತದೆ. ಆದರೆ ಐವರು ಕುಟುಂಬಕ್ಕೆ ರೇಷನ್ ಅಂಗಡಿಯಿಂದ ಸಿಗುವಷ್ಟು ದವಸ ಧಾನ್ಯ ಸಾಕಾಗುವುದಿಲ್ಲವಾದ್ದರಿಂದ ಅಂಗಡಿಯಲ್ಲಿ ಖರೀದಿಸಲು ಇನ್ನೊಂದು ಸಾವಿರ ಕೈಬಿಡುತ್ತದೆ. ಬರೀ ಅಕ್ಕಿದ್ದರೆ ಸಾಕೆ? ಹಾಲು, ತರಕಾರಿ ಇತ್ಯಾದಿಗಳಿಗೆ ಮಗಳ ಶಾಲೆ ಫೀಸು, ಸಮವಸ್ತ್ರ ಪುಸ್ತಕ, ಶೂ, ಸಾಕ್ಸ್ ಇತ್ಯಾದಿಗಳಿಗೂ ಹಣ ಬೇಕೇಬೇಕು.

ಬೆಂಗಳೂರಿನಂತಹ ನಗರದಲ್ಲಿ ಸೌದೆ ಸಿಗುವುದು ಕಷ್ಟವಾದ್ದರಿಂದ ಯಶೋಧ ಕಷ್ಟಪಟ್ಟು ಒಂದು ಗ್ಯಾಸ್ ಸ್ಟೌವ್ ಖರೀದಿಸಿದ್ದಾಳೆ. ಆಕೆಯ ಮನೆಗೆ ತಿಂಗಳಿಗೆ ಒಂದು ಗ್ಯಾಸ್ ಸಿಲಿಂಡರ್ ಬೇಕೇಬೇಕು. ಅದರ ಬೆಲೆ 360 ರೂಪಾಯಿ.

ಆಕೆಯ ಮಗ ಕೆಲಸಕ್ಕೆ ಸರಿಯಾದ ಸಮಯಕ್ಕೆ ಹೋಗಬೇಕೆಂದರೆ ಆತ ಸರ್ಕಾರಿ ಬಸ್‌ಗಳನ್ನು ಅವಲಂಬಿಸುವಂತಿಲ್ಲ, ಆದ್ದರಿಂದ ಆತ ಸಾಲ ಮಾಡಿ ಒಂದು ಮೋಟಾರ್ ಸೈಕಲ್ ಖರೀದಿಸಿದ್ದಾನೆ. ಈಗ ಅದರ ತಿಂಗಳ ಕಂತು ಕಟ್ಟಬೇಕಿದೆಯಲ್ಲದೆ ಮೋಟರ್ ಬೈಕನ್ನು ಓಡಿಸಲು ಅತ್ಯಗತ್ಯವಾದ ಪೆಟ್ರೋಲ್ ಬೆಲೆ ಲೀಟರ್‌ಗೆ 70 ರೂಪಾಯಿ ಆಗಿದೆ.

ಇನ್ನು ಹಬ್ಬಹರಿದಿನಗಳಲ್ಲಿ ಒಂದಿಷ್ಟು ಸಿಹಿ ಊಟ, ವರ್ಷಕ್ಕೆರಡು ಬಾರಿ ಮನೆಯವರಿಗೆಲ್ಲ ಹೊಸ ಬಟ್ಟೆ, ವರ್ಷಕ್ಕೊಮ್ಮೆ ತವರುಮನೆಗೆ ಭೇಟಿ, ಇಂತಹ ಮನುಷ್ಯ ಸಹಜ ಸಂಭ್ರಮಕ್ಕೆಂದು ಕಾಸು ವೆಚ್ಚವಾಗುತ್ತದೆ....

ಅತಿವೃಷ್ಟಿಯಿಂದ ತಮ್ಮದೆಲ್ಲವನ್ನು ಕಳೆದುಕೊಂಡು ಇವತ್ತಿಗೂ ನಿರ್ಗತಿಕರಾಗಿ ಶೆಡ್ಡುಗಳಲ್ಲಿ ವಾಸಿಸುತ್ತಿರುವ ನಮ್ಮ ಉತ್ತರ ಕರ್ನಾಟಕದ ಜನರ ಬದುಕಿಗೆ ಹೋಲಿಸಿದರೆ ನಮ್ಮ ಯಶೋಧ ‘ನೆಮ್ಮದಿ’ಯಿಂದ ಜೀವಿಸುವಂತೆ ಕಾಣಿಸುತ್ತದೆ. ಯಾಕೆಂದರೆ ಯಶೋಧೆಯ ಮನೆಯಲ್ಲಿ ಟಿವಿ ಇದೆ, ಗ್ಯಾಸ್ ಸ್ಟವ್ ಇದೆ, ಹೊರಗಡೆ ಒಂದು ಮೋಟಾರ್ ಬೈಕ್ ನಿಂತಿದೆ.....!

ಈ ಹೋಲಿಕೆ ಬಗ್ಗೆ ಒಂದೆರಡು ನಿಮಿಷ ಯೋಚಿಸಿದ ನಾನು “ಕಷ್ಟ ಇದೆ, ಆದರೂ ತಿಂಗಳಲ್ಲಿ ಒಂದಿಷ್ಟಾದರೂ ಹಣವನ್ನು ಉಳಿತಾಯ ಮಾಡುತ್ತೀಯಾ?” ಎಂದು ಕೇಳಿದೆ.

“ಹೇಗೆ ಉಳಿತಾಯ ಮಾಡೋದು ಅಕ್ಕಾ? ಎರಡು ವರ್ಷಗಳ ಹಿಂದೆ ನನಗೆ ಕಿಡ್ನಿ ಸಮಸ್ಯೆ ಆಗಿತ್ತು, ಆಗ ಆಪರೇಷನ್‌ಗೆ ಅಂತ ಒಂದು ಲಕ್ಷ ರೂಪಾಯಿ ಸಾಲ ಮಾಡಿದ್ದೆ. ಇವತ್ತಿಗೂ ಆ ಸಾಲದ ಮೇಲಿನ ಬಡ್ಡಿ ಕಟ್ಟುತ್ತಿದ್ದೇನೆ. ಅಸಲು ಹಾಗೆ ಉಳಿದಿದೆ” ಎಂದ ಯಶೋಧ ವ್ಯಂಗ್ಯದ ನಗೆ ನಕ್ಕಳು.....

ಬೆನ್ನು ಬಗ್ಗಿಸಿ, ಬೆವರು ಸುರಿಸಿ ದುಡಿಯುವ ಯಶೋಧೆಯ ಬದುಕೇ ಇಷ್ಟೊಂದು ಸಮಸ್ಯೆಗಳಿಂದ ಕೂಡಿರುವಾಗ ಆಕೆಗಿಂತ ಕೆಟ್ಟ ಪರಿಸ್ಥಿತಿಯಲ್ಲಿ ಬದುಕುತ್ತಿರುವ ನಮ್ಮ ದೇಶದ ಲಕ್ಷಾಂತರ ಬಡವರ ಬದುಕು ಇನ್ನೆಷ್ಟು ಕಷ್ಟಕಾರ್ಪಣ್ಯಗಳಿಂದ ಕೂಡಿರಬೇಕು ಯೋಚಿಸಿ.

ಪ್ರತಿ ದಿನ ನಮ್ಮ ಮನೆ, ಬಟ್ಟೆ, ಪಾತ್ರೆಗಳನ್ನು ಸ್ವಚ್ಛ ಮಾಡುವ ಯಶೋಧೆಯ ಅಗತ್ಯಗಳ ಬಗ್ಗೆ ನಾನು ವಿಚಾರಿಸಿದಂತೆ ಯೋಜನಾ ಆಯೋಗದ ಡೆಪ್ಯೂಟಿ ಚೇರ್ಮನ್ ಅಹ್ಲುವಾಲಿಯಾ ಕೂಡ ತಮ್ಮ ಮನೆ ಕೆಲಸದಾಕೆಯನ್ನೋ, ತಮ್ಮ ಐಷಾರಾಮಿ ಕಾರ್ ಅನ್ನು ಪ್ರತಿದಿನ ತೊಳೆಯುವ ವ್ಯಕ್ತಿಯನ್ನೋ ವಿಚಾರಿಸಿದ್ದರೆ “ದಿನಕ್ಕೆ 20 ರೂಪಾಯಿ ಆದಾಯ ಪಡೆದವರು ಬಡತನ ರೇಖೆಗಿಂತ ಕೆಳಗೆ ಬರುವುದಿಲ್ಲ” ಎಂಬಂತಹ ಕ್ರೂರ ನಿರ್ಧಾರಕ್ಕೆ ಬರುತ್ತಿರಲಿಲ್ಲ.




• ಗೌರಿ ಲಂಕೇಶ್
editorlankesh@gmail.com

ಅದೆಲ್ಲ ಅವರಿಗೆ ಗೊತ್ತಿಲ್ಲ ಎಂದೇನಲ್ಲ, ಆದರೂ ಅಹ್ಲುವಾಲಿಯಾ, ಗೃಹ ಸಚಿವ ಪಿ. ಚಿದಂಬರಂ, ಪ್ರಧಾನಮಂತ್ರಿ ಮನಮೋಹನ್ ಸಿಂಗ್ ತರಹದ ‘ಜಗದ್ವಿಖ್ಯಾತ ಆರ್ಥಿಕ ತಜ್ಞ’ರು ಇಂತಹ ನೀಚ ನಿಲುವುಗಳನ್ನು ತೆಗೆದುಕೊಳ್ಳುವುದಕ್ಕೆ ಕಾರಣ ಇದೆ. ಅದೇನೆಂದರೆ ಭಾರತದಲ್ಲಿ ಬಡವರ ಸಂಖ್ಯೆ ಹೆಚ್ಚಿದೆ ಎಂದು ಅವರು ಒಪ್ಪಿಕೊಂಡರೆ ಆ ಬಡವರಿಗೆಲ್ಲ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ನೀಡಬೇಕಾಗುತ್ತದೆ. ಹಾಗೆ ನೀಡಿದರೆ ನಮ್ಮ ದೇಶದ ‘ಅಭಿವೃದ್ಧಿ ದರ’ ಕುಸಿಯುತ್ತದೆ!

ಇಂತಹ ‘ಕಳಂಕ’ ಅವರೆಲ್ಲರಿಗೆ ಬೇಡವಾಗಿದೆ. ಬದಲಾಗಿ ದಿನಕ್ಕೆ ಕೇವಲ 20 ರೂಪಾಯಿ ಗಳಿಸುವವನು ಬಡವನಲ್ಲ ಎಂದು ಒಂದೆಡೆ ಘೋಷಿಸುತ್ತಾ, ಇನ್ನೊಂದೆಡೆ ಅಂಬಾನಿ, ಮಿತ್ತಲ್, ಟಾಟಾರಂತಹ ಬಿಲಿಯಾಧಿಪತಿಗಳಿಗೆ ರಿಯಾಯಿತಿಗಳನ್ನು ಕೊಡುತ್ತಾ ಭಾರತ ‘ಪ್ರಜ್ವಲಿಸುತ್ತಿದೆ’ ಎಂಬ ‘ಶೋ’ ಕೊಡುವುದರಲ್ಲೇ ಅವರಿಗೆ ‘ಖ್ಯಾತಿ’ ಸಿಗುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬಡವರು ಹೆಚ್ಚಿನ ಸಂಖ್ಯೆಯಲ್ಲಿ ಆದಷ್ಟು ಬೇಗ ಸಾವನ್ನಪ್ಪುತ್ತಾ, ಅಂಬಾನಿ ತರಹದ ತಿಮಿಂಗಲಗಳು ಆದಷ್ಟು ಕೊಬ್ಬುತ್ತಾ ಹೋದರೆ ಸಿಂಗ್ ಮತ್ತವರ ಪಟಾಲಂ ಸಂತೃಪ್ತಗೊಳ್ಳುತ್ತದೆ....

ಈಗ ಎಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶದಲ್ಲಿ ಒಂದೆಡೆ ಲಕ್ಷಾಂತರ ಜನರು ಹಸಿವಿನಿಂದ ಬಳಲುತ್ತಿದ್ದರೆ ನಮ್ಮ ಸರ್ಕಾರಿ ಗೋದಾಮುಗಳಲ್ಲಿರುವ ಸಾವಿರಾರು ಟನ್‌ಗಟ್ಟಲೆ ಧವಸ ಧಾನ್ಯಗಳು ಹೆಗ್ಗಣಗಳ ಪಾಲಾಗುತ್ತಿವೆ. ಆದರೂ ಈ ದವಸಧಾನ್ಯಗಳನ್ನು ಬಡವರಿಗೆ ಅತಿಕಡಿಮೆ ದರದಲ್ಲಿ ಹಂಚಲು ಸರ್ಕಾರ ಸಿದ್ಧವಿಲ್ಲ.

ಭಾರತದ ಬಡವರಿಗೆ ಸಲ್ಲಬೇಕಿರುವ ಧಾನ್ಯಗಳನ್ನು ತಿಂದು ಕೊಬ್ಬುತ್ತಿರುವ ಹೆಗ್ಗಣಗಳಿಗೂ ಸಿಂಗ್-ಚಿದಂಬರಂ-ಅಹ್ಲುವಾಲಿಯಾ ತರಹದ ಮತಿಗೇಡಿಗಳಿಗೂ ವ್ಯತ್ಯಾಸ ಇದೆಯಾ.....?



ಕಾರವಾರ ಅಯೋಗ್ಯ ಅಸ್ನೋಟಿಕರ್‌ನ ವಿಕೃತ ವಿಜಯೋತ್ಸವ!

ಕೇವಲ ತಡಿಯ ಕಾರವಾರ-ಅಂಕೋಲೆಯ ರಗಳೆ ರಾಜಕೀಯ ಮತ್ತೆ ಮಗ್ಗುಲು ಬದಲಿಸಿದೆ. ಮೂರು ವರ್ಷದ ಹಿಂದೆ ಅನಾಚಾರಿ ಪೋರ ಆನಂದ ಅಸ್ನೋಟಿಕರ್ ಕಾಂಗ್ರೆಸ್‌ನಿಂದ ಶಾಸಕನಾದ ಹದಿನೈದೇ ದಿನಕ್ಕೆ ತಳಿ ತಪ್ಪಿದ್ದ. ಈ ಕ್ಷೇತ್ರದ ಆಡಳಿತ-ರಾಜಕಾರಣ ಇವತ್ತಿಗೂ ಅಯೋಮಯವಾಗೇ ಇದೆ! ಎಮ್ಮೆಲ್ಲೆಯಾದ ಬರೀ ನಲ್ವತ್ತೈದು ದಿನಕ್ಕೆ ಮಾಡಿಸಿಕೊಂಡ ಆಪರೇಷನ್ (ಕ-ಮಲ) ಗಾಯವಿನ್ನೂ ಮಾಯದೆ ಅಸ್ನೋಟಿಕರ್ ನೋವಿಂದ ಆಕ್ರಂದಿಸುತ್ತಲೇ ಇದ್ದಾನೆ. ಈ ಅಸಹ್ಯ ಗೀಳಿನ ಅಡ್ಡ ಪರಿಣಾಮ ಮಾತ್ರ ಅಮಾಯಕ ಕ್ಷೇತ್ರವಾಸಿಗಳ ಮೇಲಾಗುತ್ತಿರುವುದು ಘೋರವಾಗಿದೆ!

ಗರ್ಭಗುಡಿ ಸಂಸ್ಕೃತಿಯ ಬಿಜೆಪಿಯಲ್ಲಿ ಆನಂದ ಅಸ್ನೋಟಿಕರ್‌ಗೆ ಮೂರು ಕಾಸಿನ ಬೆಲೆ-ನೆಲೆಯಿರಲಿಲ್ಲ. ರೆಡ್ಡಿ-ಯಡ್ಡಿ ಒಡ್ಡಿದ ಮಂತ್ರಿಗಿರಿ ಅಧಿಕಾರ, ಬೇಲೇಕೇರಿ ಮತ್ತು ಬೆಂಗಳೂರಿನ ಕೋಟಿ-ಕೋಟಿಯ ಜಾಗದ ಆಮಿಷಕ್ಕೆ ಬಿಜೆಪಿ ಪಾಲಾಗಿದ್ದ ಈ ಎಡವಟ್ಟು ಹುಡುಗ ನಾಮಕಾವಸ್ತೆ ಮಂತ್ರಿಯಂತಾಗಿ ಹೋಗಿದ್ದ. ಆತನ ಒಂದೇ ಒಂದು ಮಾತು ಬೆಂಗಳೂರು ಲೆವೆಲ್‌ನಲ್ಲಿರಲಿ, ಸ್ವಕ್ಷೇತ್ರ ಕಾರವಾರದಲ್ಲೇ ನಡೆಯುತ್ತಿರಲಿಲ್ಲ. ಆನಂದನ ಹಣಿಯಲಿಕ್ಕೆ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ತನ್ನ ವೈದಿಕವಾದಿ ಕರಾಮತ್ತು ಮಾಡತೊಡಗಿದ್ದರು. ಬೇಕಂತಲೇ ನೌಕಾನೆಲೆ ನಿರಾಶ್ರಿತರ ಸಮಸ್ಯೆ, ಕಾಳಿ ನದಿಯಿಂದ ತೆಗೆವ ಉಸುಕು ಸಾಗಾಣಿಕೆ ಸಮಸ್ಯೆ, ಜಲ್ಲಿಕಲ್ಲಿನ ಕ್ವಾರಿ ಸಮಸ್ಯೆ, ಮಳೆ ಸಂತ್ರಸ್ತರ ಸಮಸ್ಯೆ, ಜಿಲ್ಲಾ ಆಸ್ಪತ್ರೆ-ಇಂಜಿನಿಯರಿಂಗ್ ಕಾಲೇಜ್ ಸಮಸ್ಯೆ.... ಹೀಗೆ ಸಕಲ ಸಮಸ್ಯೆಗಳೂ ಉಲ್ಬಣಿಸುವಂತೆ ಮಾಡಿದರು.


ಸಾಲದ್ದಕ್ಕೆ ಅಸ್ನೋಟಿಕರ್‌ನ ಕಣ್ಣೆದುರೇ ಜಿಲ್ಲಾ ಕೇಂದ್ರ ಕಾರವಾರದಲ್ಲಿದ್ದ ವಿವಿಧ ಇಲಾಖೆಗಳ ಮಹತ್ವದ ಕಚೇರಿಗಳನ್ನು ಸ್ವಕ್ಷೇತ್ರ ಶಿರಸಿಗೆ ದಾದಾಗಿರಿಯಿಂದ ಹೊತ್ತೊಯ್ಯತೊಡಗಿದರು ಕಂತ್ರಿ ಕಾಗೇರಿಜೀ! ಇಷ್ಟೆಲ್ಲ ಅಪಮಾನ-ಅನ್ಯಾಯವಾಗುತ್ತಿದ್ದರೂ ಪೊಕ್ಕು ಮಂತ್ರಿ ಅಸ್ನೋಟಿಕರ್ ಅಸಹಾಯಕತೆಯಿಂದ ಕೈ-ಮೈ ಪರಚಿಕೊಳ್ಳೋದು ಬಿಟ್ಟು ಇನ್ನೇನೂ ಮಾಡಲಾಗಲಿಲ್ಲ. ಹೇಡಿ ಅಸ್ನೋಟಿಕರ್ ಜನರ ಕಣ್ಣಲ್ಲಿ ಹಾಸ್ಯಾಸ್ಪದನಾಗಿ ಹೋದ. ಕಾಗೇರಿಯ ಈ ಕಿರುಕುಳ ತಾಳಲಾರದೆ ಗಾಡ್‌ಫಾದರ್ ರೆಡ್ಡಿ, ಸಿಎಂ ಯಡ್ಡಿ ಎದುರು ಅಲವತ್ತುಕೊಂಡರೂ ಯಾರೂ ಕೇರ್ ಮಾಡಲಿಲ್ಲ. ಇದರಿಂದ ಕೆರಳಿದ ಅವಸರದ ಅಸ್ನೋಟಿಕರ್ ಸಿಎಂ ಶತ್ರು ಗ್ಯಾಂಗ್ ಸೇರಿಕೊಂಡುಬಿಟ್ಟ! ಯಡ್ಡಿ ನಮ್ಮ ನಾಯಕನಲ್ಲ ಎಂದು ಬಂಡೆದ್ದ ಬಣದ ಮುಂಚೂಣಿಯಲ್ಲಿ ಮಿಂಚತೊಡಗಿದ.

ಆ ನಂತರ ಅಸ್ನೋಟಿಕರ್ ಮತ್ತು ಸಂಗಡಿಗರು ಅನರ್ಹ-ಅರ್ಹ ಆದದ್ದು, ಅಂತಿಮವಾಗಿ ಯಡ್ಡಿ ಪಾದಕ್ಕೆ ಬಿದ್ದು ಬದ್ಧತೆ-ಸ್ವಂತಿಕೆ-ಮಾನಮರ್ಯಾದೆ ಯಾವುದೂ ಇಲ್ಲವೆಂದು ಸ್ವಯಂ ಸಾಬೀತು ಪಡಿಸಿಕೊಂಡಿದ್ದೆಲ್ಲ ಈಗ ಇತಿಹಾಸ. ವಿಷಯ ಅದಲ್ಲ; ಏಳು ತಿಂಗಳು ಪಕ್ಕ ಹುಚ್ಚುನಾಯಿಯಂತೆ ಕ್ಷೇತ್ರ ಬಿಟ್ಟು ಎಲ್ಲೆಲ್ಲೋ ಅಂಡಲೆದ ಅಸ್ನೋಟಿಕರ್ ಸುಪ್ರೀಂಕೋರ್ಟ್ ತೀರ್ಪು ಬರುತ್ತಿದ್ದಂತೆಯೇ ಬಹದ್ದೂರ್‌ನ ಗೆಟಪ್ಪಿನಲ್ಲಿ ಕಾರವಾರ- ಅಂಕೋಲೆಗೆ ವಕ್ಕರಿಸಿದ ಗಲೀಜು ಸ್ಟೈಲ್-ಹೊರಡಿಸಿದ ವಿಕೃತ ವಿಜಯೋತ್ಸವ ಮೆರವಣಿಗೆ ಇದೆಯಲ್ಲ, ಅದೆಲ್ಲ ಕ್ಷೇತ್ರ ವಾಸಿಗಳಲ್ಲಿ ಹೇಸಿಗೆ ಮೂಡಿಸಿಬಿಟ್ಟಿತು.




ಸುಪ್ರೀಂಕೋರ್ಟ್‌ನಲ್ಲೂ 'ಅರ್ಹತೆ' ಸಿಗುವ ಭರವಸೆ ಅಸ್ನೋಟಿಕರ್‌ಗೆ ಇರಲಿಲ್ಲ. ಸುಪ್ರೀಂ ತೀರ್ಪು ಹೊರಬೀಳುವ ಒಂದು ವಾರದ ಮುಂಚೆ ಕಾರವಾರಕ್ಕೆ ಬಂದಿದ್ದ ಅಸ್ನೋಟಿಕರ್ ತನ್ನ ಬೆಂಬಲಿಗರನ್ನು ಕರೆದು ತಾನು ಕಾಂಗ್ರೆಸ್ ಸೇರಿ ಬೈ ಎಲೆಕ್ಷನ್‌ಗೆ ನಿಲ್ತೇನೆ; ತನಗೆ ಕಾಂಗ್ರೆಸ್‌ನ ಟಾಪ್ ಲೀಡರ್‌ಗಳ ಅಭಯಾಶೀರ್ವಾದ ಸಿಕ್ಕಿದೆ ಎಂದ್ಹೇಳಿ ಹೋಗಿದ್ದ. ಸರ್ವೋಚ್ಚ ನ್ಯಾಯಾಲಯದಲ್ಲಿ ಶಾಸಕತ್ವ ಅನಿರೀಕ್ಷಿತವಾಗಿ ಸಿಕ್ಕಿದ್ದೇ ತಡ, ಅಸ್ನೋಟಿಕರ್‌ಗೆ ಕಾರವಾರ-ಅಂಕೋಲೆಯಲ್ಲಿ ಆರ್ಭಟದಿಂದ ಪ್ರತ್ಯಕ್ಷವಾಗಿ ಪ್ರವರ ತೋರಿಸುವ ಹುಕ್ಕಿ ಬಂದುಬಿಟ್ಟಿತು! ಎರಡೂ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿನ ತನ್ನ ಬಂಟರಿಗೆ ಒಂದಿಷ್ಟು ಕಾಸು ಬಿಸಾಕಿ ಅದ್ದೂರಿ ಮೆರವಣಿಗೆ ಅರೇಂಜ್ ಮಾಡಿಸಿಕೊಂಡೇ ಬಿಟ್ಟ.

ಅಸ್ನೋಟಿಕರ್ ತನಗೆ ತಾನೇ ಮಾಡಿಸಿಕೊಂಡ ಮೆರವಣಿಗೆ ಅದೆಷ್ಟು ಬುರ್ನಾಸ್ ಆಗಿತ್ತೆಂದರೆ, ಕುದುರೆ ಸಾರೋಟು, ಒಂಟೆ, ಆರ್ಕೆಸ್ಟ್ರಾಗಳು, ತರಹೇವಾರಿ ವೇಷಧಾರಿಗಳೆಲ್ಲ ಆತನ ಹಿಂದೆ ಮುಂದಿದ್ದರು. ಗಲ್ಲಿ ಗಟಾರದಲ್ಲೆಲ್ಲ ಹೊಕ್ಕು ಹೊರಬಂದ ಅಸ್ನೋಟಿಕರ್ ಪಟಾಲಂ ಕಂಡ-ಕಂಡ ದೇವಸ್ಥಾನಕ್ಕೆಲ್ಲ ಹೋಗಿ ಬಂತು. ಕಟ್ಟೆ-ಎತ್ತರದ ಜಾಗ ಸಿಕ್ಕಲೆಲ್ಲ ಅಸ್ನೋಟಿಕರ್ ಮತ್ತೆ ಸಿಎಂ ಯಡ್ಡಿ-ಜಿಲ್ಲಾ ಮಂತ್ರಿ ಕಾಗೇರಿಗೆ ಮೂದಲಿಸಿಬಿಟ್ಟ! "ನನ್ನ ಕ್ಷೇತ್ರ ಕಡೆಗಣಿಸಿದ್ದಕ್ಕೆ ಸಿಟ್ಟು ಬಂದು ಬಂಡಾಯ ಎದ್ದಿದ್ದೇನೇ ಹೊರತು ಅಧಿಕಾರಕ್ಕಲ್ಲ... ಬಿಜೆಪಿ ವಿರುದ್ಧ ದಂಗೆ ಎದ್ದದ್ದರಲ್ಲಿ ನಮ್ಮ ಗುರಿ ಯಡ್ಡಿ ಇಳಿಸುವುದಾಗಿತ್ತು...." ಎಂದು ಬಹಿರಂಗವಾಗೇ ಅಸ್ನೋಟಿಕರ್ ಬೊಬ್ಬಿರಿವಾಗ ಆತನ ಅಕ್ಕಪಕ್ಕ ಜಿಲ್ಲಾ ಬಿಜೆಪಿ ಅಧ್ಯಕ್ಷ ಪ್ರಸಾದ್ ಕಾರವಾರಕರ್, ಕ್ಷೇತ್ರಾಧ್ಯಕ್ಷ ಅರುಣ ನಾಡಕರ್ಣಿ ನಿಂತು ಕಣ್ಣು-ಬಾಯಿ ಬಿಟ್ಟು ನೋಡಿದ್ದು ಮೋಜಾಗಿತ್ತು.




ಗಣಪತಿ ಉಳ್ವೇಕರ್

ಇದಕ್ಕಿಂತ ತಮಾಷೆಯೆಂದರೆ ಅಸ್ನೋಟಿಕರ್‌ನ ಶಾಸಕತ್ವ ಹೋಗಿ ಉಪಚುನಾವಣೆ ಬಂದರೆ ತಾವೇ ಬಿಜೆಪಿ ಕ್ಯಾಂಡಿಡೇಟ್ ಎಂದು ಒಳಗೊಳಗೆ ಮಸಲತ್ತು ಮಾಡುತ್ತಿದ್ದ ಕಾರವಾರಕರ್ ನಗರಸಭೆ ಅಧ್ಯಕ್ಷ ಗಣಪತಿ ಉಳ್ವೇಕರ್, ಕೆಡಿಎ ಅಧ್ಯಕ್ಷ ಆರ್.ಜಿ.ನಾಯ್ಕ, ಮಾಜಿ ತಾಪಂ ಅಧ್ಯಕ್ಷ ಚಂದ್ರಹಾಸ ಕೋಠಾರಕರ್, ಉಲ್ಲಾಸ್ ರೇವಣಕರ್‌ನಂಥವರೂ ಅಸ್ನೋಟಿಕರ್‌ಗೆ ಭೋಪರಾಕ್ ಹಾಕಿ ತುಂಡುಗುಪ್ಪಳ ಹೊಡೆದದ್ದೇ ಹೊಡೆದದ್ದು. ಈ ಬಿಜೆಪಿ ಟಿಕೆಟ್ ಆಕಾಂಕ್ಷಿಗಳೆಲ್ಲ ಅಸ್ನೋಟಿಕರ್‌ನ ಅಂತರಂಗದ ಆಪ್ತರೆಂಬ ಪ್ರತೀತಿಯಲ್ಲಿದ್ದವರೇ. ಅಸ್ನೋಟಿಕರ್ ಹಳ್ಳಕ್ಕೆ ಬಿದ್ದನೆಂದು ಆತನ ತಲೆ ಮೇಲೆ ಕಲ್ಲು ಹಾಕಿ ಎಮ್ಮೆಲ್ಲೆ ಆಗಲು ಹೊರಟವರೆಲ್ಲ ವಿಕೃತ ವಿಜಯೋತ್ಸವದಲ್ಲಿ ಕಳಾಹೀನರಾಗಿ ಕಂಡುಬಂದಿದ್ದು ಕಾರವಾರದ ಅನೈತಿಕ ರಾಜಕಾರಣ ಮತ್ತು ಬಿಜೆಪಿಯ ದಿವಾಳಿಕೋರತನಕ್ಕೆ ಜೀವಂತ ಸಂಕೇತದಂತಿತ್ತು!!



ಕಾಗೇರಿ



ಯಡ್ಡಿ

ಅಷ್ಟಕ್ಕೂ ಈ ಅಡ್ನಾಡಿ ಅಸ್ನೋಟಿಕರ್ ಹೊರಟ ವಿಜಯೋತ್ಸವದ ಮೆರವಣಿಗೆಯ ಅರ್ಥವಾದರೂ ಏನು? ತಮ್ಮನ್ನು ಬರೋಬ್ಬರಿ ಏಳು ತಿಂಗಳು ಸತಾಯಿಸಿದ ಸಿಎಂ ಯಡ್ಡಿಜೀಯನ್ನು ಮಣ್ಣು ಮುಕ್ಕಿಸಿದ ಖುಷಿಯ-ಸೇಡಿನ ಮೆರವಣಿಗೆ ತಾನೇ ಇದು?! ಎಂಥ ವಿರೋಧಾಭಾಸ-ಎಡಬಿಡಂಗಿತನ ನೋಡಿ. "ನನ್ನ ಬೆಂಬಲ ನಿಮಗೆ... ನನ್ನನ್ನು ಮತ್ತೆ ಮಂತ್ರಿ ಮಾಡಿ... " ಎಂದ್ಹೇಳಿ ಬೆಂಗಳೂರಲ್ಲಿ ಯಡ್ಡಿಗೆ ಉದ್ದಂಡ ನಮಸ್ಕಾರ ಹಾಕಿ ಬಂದಿರುವ ಅಸ್ನೋಟಿಕರ್ ಇತ್ತ ಕಾರವಾರ-ಅಂಕೋಲೆಯಲ್ಲಿ ಯಡ್ಡಿ ಮತ್ತು ಬಿಜೆಪಿಯನ್ನು ಸೋಲಿಸಿ ಮತ್ತೆ ಶಾಸಕತ್ವ ಸಂಪಾದಿಸಿದ್ದಕ್ಕೆ ಆನಂದೋತ್ಸವ-ಅದ್ದೂರಿ ಮೆರವಣಿಗೆ ನಡೆಸಿದ್ದಾನೆ. ಈ ಏಳು ತಿಂಗಳು ಅಸ್ನೋಟಿಕರ್‌ನಿಂದ ಬಾಯಿಗೆ ಬಂದಂತೆ ಬೈಸಿಕೊಂಡಿದ್ದ ಬಿಜೆಪಿ ಭೂಪರೆಲ್ಲ ಆ ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ. ಕಂಕುಳಲ್ಲಿ ಕತ್ತಿ ಇಟ್ಟುಕೊಂಡು ಕೈಯಿಂದ ಅಸ್ನೋಟಿಕರ್‌ಗೆ ಸಲಾಮು ಹಾಕುತ್ತಿರುವ ಕಾರವಾರ ನ.ಸ. ಅಧ್ಯಕ್ಷ ಗಣಪತಿ ಉಳ್ವೇಕರ್ ಶಾಸಕತ್ವ ಉಳಿಸಿಕೊಂಡಿದ್ದಕ್ಕೆ ಆತನನ್ನು ನಗರ ಸಭೆಗೆ ಕರೆದು ನೆನಪಿನ ಕಾಣಿಕೆ ಕೊಟ್ಟು-ಗಂಧದ ಹಾರ ಹಾಕಿ ಸನ್ಮಾನಿಸಿ ಕಳಿಸಿದ್ದಾರೆ. ಅಸ್ನೋಟಿಕರ್‌ನ ಹಿತಶತ್ರು ಉಳ್ವೇಕರ್ ಸನ್ಮಾನದ ನಾಟಕಕ್ಕೆ ಬಳಸಿದ ಹಣ ಯಾರದು? ನ.ಸ. ಹಣದಿಂದ ಅಸ್ನೋಟಿಕರ್‌ನ ಸನ್ಮಾನಿಸುವ ಜರೂರತ್ತಿತ್ತೇ?

ಅನಾಚಾರಿ ಅಸ್ನೋಟಿಕರ್, ಭಂಡ ಬಿಜೆಪಿಗರ ಮತ್ತು ಅಸ್ನೋಟಿಕರ್‌ನ ಕಟ್ಟಾ ಬೆಂಬಲಿಗರೆಂದು ಪೋಸು ಕೊಡುತ್ತಲೇ ಆತನಿಗೆ ಮೋಸ ಮಾಡುತ್ತಿರುವ ಮಸಲತ್ತುಗಾರರ ಅಸಂಗತ-ಅಸಹ್ಯ ಪ್ರಹಸನ ಕಂಡು ಕಾರವಾರ-ಅಂಕೋಲೆಯ ಜನ ನಗಬಾರದ ಕಡೆಯಿಂದೆಲ್ಲ ನಗುತ್ತಿದ್ದಾರೆ. ಅಸ್ನೋಟಿಕರ್‌ನ ಶಾಸಕತ್ವಕ್ಕೆ ಸಿಂಧುತ್ವ ಸಿಕ್ಕಿರುವುದರಿಂದ ಆತನ ತೆವಲು ತೀರಬಹುದೇ ಹೊರತು ಕ್ಷೇತ್ರಕ್ಕೇನೂ ಒಳಿತಾಗದೆಂದು ಜನ ಮಾತಾಡಿಕೊಳ್ಳುತ್ತಿದ್ದಾರೆ. ಅನೈತಿಕ ರಾಜಕಾರಣದ ಪಿತಾಮಹ ಯಡ್ಡಿಗೆ ತನ್ನ ಕೊಳಕು ಕುರ್ಚಿ ಉಳಿಸಿಕೊಳ್ಳಲು ಅಸ್ನೋಟಿಕರ್‌ನ ಅನಿವಾರ್ಯತೆ ಎಷ್ಟಿತ್ತೋ ಅಷ್ಟೇ ಯಡ್ಡಿಯ ಅವಶ್ಯಕತೆ ತನ್ನ ಅಕ್ರಮ ಆಸ್ತಿ, ದೋನಂಬರ್ ದಂಧೆ ಕಾಪಾಡಿಕೊಳ್ಳಲು ಅಸ್ನೋಟಿಕರ್‌ಗಿತ್ತು.

ಅನರ್ಹತೆ ಅವಧಿಯಲ್ಲಿ ಅಜ್ಞಾತವಾಸ ಅನುಭವಿಸಿದ ಅಸ್ನೋಟಿಕರ್‌ಗೆ ಕ್ಷೇತ್ರದ ಮೇಲಿನ ಹಿಡಿತವೇ ತಪ್ಪಿಹೋಗಿತ್ತು. ಅಧಿಕಾರ ಇದ್ದಾಗ ಆತನ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದವರೆಲ್ಲ ದೂರಾಗಿದ್ದರು. ಸದಾ ಗಿಜಿಗುಡುತ್ತಿದ್ದ ಆತನ ಮನೆ ಬಣಗುಡುತ್ತಿತ್ತು. ಅಧಿಕೃತ ಕಚೇರಿಗೆ ಬೀಗ ಜಡಿಯಲಾಗಿತ್ತು. ಜಿ.ಪಂ.-ತಾ.ಪಂ.ಚುನಾವಣೆಯಲ್ಲೂ ಅಸ್ನೋಟಿಕರ್‌ನ 'ಅಪ್ಪನ ಅಭಿಮಾನಿ ಬಳಗ' ಸೋತು ಸುಣ್ಣವಾಗಿತ್ತು. ಅತ್ತ ಸಿಎಂ ಯಡ್ಡಿ-ಮಂತ್ರಿ ಕಾಗೇರಿ-ಪಕ್ಕ ಚೆಡ್ಡಿ ಬಳಗ ಅಸ್ನೋಟಿಕರ್‌ನ ದಂಧೆ-ಆಸ್ತಿಗೆ ಕೈಹಾಕಿ ಅಲುಗಿಸಲಾರಂಭಿಸಿತ್ತು. ಬೇಲೇಕೇರಿ, ಬೆಂಗಳೂರಿನ ಡಾಲರ್ಸ್ ಕಾಲೋನಿ, ಅರ್ಕಾವತಿ ಬಡಾವಣೆಯಲ್ಲಿ ಸರ್ಕಾರ ಕೊಟ್ಟಿದ್ದ ಕೋಟ್ಯಾಂತರ ರೂ. ಮೌಲ್ಯದ ಜಾಗ ಯಡ್ಡಿ ಸರ್ಕಾರ ಅನಾಮತ್ತಾಗಿ ಕಸಿದುಕೊಂಡಿತ್ತು. ಅಸ್ನೋಟಿಕರ್ ಕಂಗಾಲಾಗಿ ಹೋಗಿದ್ದ. ಅಸ್ನೋಟಿಕರ್‌ನ ಕತೆ ಮುಗಿದೇ ಹೋಯ್ತೆಂಬ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ತೀರ್ಪು ಆತನನ್ನು ಮತ್ತೆ ಹುಲಿಯಾಗಿಸಿಬಿಟ್ಟಿದೆ! ಈಗಾಗಲೇ ಆತ ಜಿಲ್ಲಾ ಮಂತ್ರಿ ಕಾಗೇರಿ ಎದುರು ನಿಂತು ತೊಡೆತಟ್ಟಲಾರಂಭಿಸಿದ್ದಾನೆ. ಆರೆಸ್ಸೆಸ್ ಲಾಬಿಯ ಕಾಗೇರಿ ಪೆದ್ದು ಅಸ್ನೋಟಿಕರ್‌ನ ಶೇಪ್‌ಔಟ್ ಮಾಡಲು ಸ್ಕೆಚ್ ಹಾಕುತ್ತಿದ್ದಾನೆ. ಈ ಭಂಡರ ಪವರ್ ಪಾಲಿಟಿಕ್ಸ್‌ನಲ್ಲಿ ಅಮಾಯಕ ಕಾರವಾರ-ಅಂಕೋಲಿಗರಿಗೆ ಕಷ್ಟ-ನಷ್ಟವಾಗುತ್ತಿರುವುದು ದುರಂತ! ಯಡ್ಡಿಯ ಆಪರೇಷನ್ ಕ-ಮಲದ ತೆವಲಿಂದ ಬಂಜರಾಗಿರುವ ಕಾರವಾರ-ಅಂಕೋಲ ಕ್ಷೇತ್ರದಲ್ಲಾಗಿರುವ ಅನ್ಯಾಯ-ಅರಾಜಕತೆ-ವಿಕೃತಿ ಒಂದೇ ಎರಡೇ...?

• ನಹುಶಃ

ಕ್ಯಾಪ್ಟನ್ ರಂಗ ಎಲ್ಲಿ?



ಸುವರ್ಣ ನ್ಯೂಸ್ ಚಾನೆಲ್‌ನಿಂದ ಆಚೆ ಬಂದಾಗಿನಿಂದ ಎಚ್.ಆರ್. ರಂಗನಾಥ್ ಬಗ್ಗೆ ಸುದ್ದಿ ಕೇಳಿಬರುತ್ತಿಲ್ಲ. ಹಾಗೆ ನೋಡಿದರೆ ವಿಶ್ವೇಶ್ವರ ಭಟ್ ವಿಜಯ ಕರ್ನಾಟಕ ಬಿಟ್ಟಾಗ, ಶಿವಸುಬ್ರಮಣ್ಯ ಕನ್ನಡಪ್ರಭ ತೊರೆದಾಗ ಕನ್ನಡ ಮೀಡಿಯಾಗಳಲ್ಲಿ ತಿಂಗಳುಗಟ್ಟಲೇ ಇಬ್ಬರೂ ಸುದ್ದಿಯಲ್ಲಿದ್ದರು. ಆದರೆ ಕ್ಯಾಪ್ಟನ್ ರಂಗ ಸುವರ್ಣ ಬಿಟ್ಟಾಗ ಅದು ಕೊಂಚ ಸುದ್ದಿಯಾಯಿತಾದರೂ ಆಮೇಲೆ ಜನ ಅವರನ್ನು ಏಕ್‌ದಂ ಮರೆತೇ ಬಿಟ್ಟರೇನೋ ಎಂಬಂತಾಗಿ ಹೋಗಿದೆ.

out of sight is out of mind...ಎನ್ನುವಂತೆ.

ಅದಿರಲಿ, ಹಾಗೆ ವಿಚಾರಿಸಿ ನೋಡಿದಾಗ ನಮಗೆ ತಿಳಿದುಬಂದ ಕೆಲ ಹೊಸ ವಿಷಯಗಳನ್ನು ಇಲ್ಲಿ ಕೊಡುತ್ತಿದ್ದೇವೆ.

ವಿಜಯ ಕರ್ನಾಟಕದ ಸಂಪಾದಕರಾಗಲು ಯತ್ನಿಸಿ ವಿಫಲರಾಗಿದ್ದಾರೆ ರಂಗನಾಥ್!

ವಿಜಯ ಕರ್ನಾಟಕವು ವಿಶ್ವೇಶ್ವರ ಭಟ್‌ರನ್ನು ಕಳಿಸಿದ ನಂತರ ಟೈಮ್ಸ್ ಗ್ರೂಪಿನ ಹಿರಿಯ. ಈ ರಾಘವನ್ ಪತ್ರಿಕೆಯ ಪೂರ್ಣ ಹೊಣೆ ಹೊತ್ತಿದ್ದಾರೆ. ಈಗ ವಿಜಯ ಕರ್ನಾಟಕ ಹಾಗೂ ವಿಜಯ ನೆಕ್ಸ್ಟ್ ಎರಡೂ ರಾಘವನ್‌ರ ಉಸ್ತುವಾರಿಯಲ್ಲಿವೆ. ಇವುಗಳ ಪೈಕಿ ವಿಜಯ ಕರ್ನಾಟಕದ ಸಂಪಾದಕರಾಗಲು ಯೋಚಿಸಿದ ರಂಗನಾಥ್ ಇತ್ತೀಚೆಗೆ ಮುಂಬೈಗೂ ಹೋಗಿ ಟೈಮ್ಸ್ ಆಫ್ ಇಂಡಿಯಾದ ದೊಣೆಗಳನ್ನು ಕಂಡುಬಂದಿದ್ದಾರೆ. ಹೋದ ಕೆಲಸ ಹಣ್ಣೋ-ಕಾಯೋ ಎಂದೇನೂ ಕಾಯುವ ಅಗತ್ಯವಿಲ್ಲ. ಟೈಮ್ಸ್ 'ನೋ' ಎಂದಿದೆ. ಅದಕ್ಕೆ ಕಾರಣ ಗೊತ್ತಿಲ್ಲ.

ಇದಾದನಂತರ ಟಿವಿ5 ಚಾನೆಲ್ ಸುತ್ತಾ ಈಗ ರಂಗ ಹೆಸರು ಕೇಳಿ ಬರುತ್ತಿದೆ. ಇದೊಂದು ತೆಲುಗು ಚಾನೆಲ್. ಟಿವಿ5ನ ಕನ್ನಡ ಅವತರಣಿ ಶುರು ಮಾಡಿಸಿ ತಾನದರ ಹೆಡ್ ಆಗುವುದು ಅಥವಾ ಟಿವಿ5 ಕನ್ನಡದ ಪಾರ್ಟನರ್ ಆಗಿಯೇ ಬಿಡುವ ಲೆಕ್ಕಾಚಾರವೂ ರಂಗ ಅವರಿಗಿತ್ತು. ಅದಕ್ಕೂ ಮೊದಲು ತಾನೇ ಒಂದು ಸ್ವಂತ ಟಿವಿ ಚಾನೆಲ್ ಶುರು ಮಾಡಿಯೇ ಬಿಟ್ಟರೆ ಹೇಗೆಂಬ ಯೋಚನೆಯೂ ಇತ್ತಂತೆ.

ಬೆಂಗಳೂರಿನ ನಿತೀಶ್ ಬಿಲ್ಡರ್ಸ್‌ನ ಪಾಲುದಾರಿಕೆ, ಮೈಸೂರಿನಲ್ಲಿ ರೆಸಾರ್ಟ್ ಮಾಲೀಕತ್ವ, ಬನ್ನೇರುಘಟ್ಟ ರೋಡಿನಲ್ಲಿ ಹನ್ನೆರಡೆಕರೆ ಲ್ಯಾಂಡ್, ಬಂಡೀಪುರ ಬಳಿ ದೊಡ್ಡ ತೋಟ ಇರುವುದಾದರೆ ಸಾಮಾನ್ಯವಾಗಿ ಪತ್ರಕರ್ತರ‍್ಯಾರೂ ಜೀವನ ನಡೆಸಲು ಹೆದರಬೇಕಾಗುವುದಿಲ್ಲ ಅಲ್ಲವೇ?

ಅದಿರಲಿ,

ಪುನಃ ರಂಗನಾಥ್ ವಿಚಾರಕ್ಕೆ ಬರುವುದಾದರೆ ಸಾಮಾನ್ಯವಾಗಿ ಲೈಮ್‌ಲೈಟಿನಲ್ಲಿದ್ದ ಪತ್ರಕರ್ತರ‍್ಯಾರೂ ಬಹಳ ಕಾಲ ತೆರೆಮರೆಯಲ್ಲಿರಲು ಇಷ್ಟಪಡುವುದಿಲ್ಲ.

ರಂಗನಾಥ್ ಸದ್ಯದಲ್ಲೇ ಕನ್ನಡ ಮೀಡಿಯಾದ ರಂಗಸ್ಥಳದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅದು ಪತ್ರಿಕೆಯ, ಟಿವಿ ಚಾನೆಲ್ಲಾ, ಸ್ವಂತದ್ದಾ-ಪಾಲುದಾರಿಕೆಯದ್ದಾ? ಕೇವಲ ಹೆಡ್ ಆಗಿಯಾ? ಎಂಬುದು ಗೊತ್ತಾಗಲು ಸ್ವಲ್ಪ ಸಮಯಬೇಕಷ್ಟೆ.



ಮೂಕ ಸಂಗಾತಿ ಮಲ್ಲಿಯ ನೆನಪಲ್ಲಿ...

ಚಿಕ್ಕ ಮರಿ ಆಗಿದ್ದಾಗಿನಿಂದ ಸುಮಾರು ಹದಿಮೂರು ವರ್ಷ ನನ್ನ ಸಂಗಾತಿ ಆಗಿದ್ದ, ತನ್ನ ಕೊನೆ ಉಸಿರು ಇರುವವರೆಗೂ ನನ್ನ ಜೊತೆಗಿದ್ದ, ಬದುಕಿನಲ್ಲಿ ನಾನು ಕಂಡ ಏರುಪೇರು, ಕಷ್ಟ ಸುಖ, ಮುರಿದುಬಿದ್ದ ಸಂಬಂಧಗಳು, ಚಿಗುರಿದ ಸ್ನೇಹಗಳು... ಎಲ್ಲದಕ್ಕೂ ಮೂಕಸಾಕ್ಷಿಯಾಗಿದ್ದ, ಯಾವುದೇ ಬಯಾಸ್ ಇಲ್ಲದೆ ನನಗೆ ಪ್ರೀತಿ ಕೊಟ್ಟು ಹೋಗಿದ್ದಕ್ಕೆ ಥ್ಯಾಂಕ್ಯೂ ಮಲ್ಲಿ!

ನಾವು ಚಿಕ್ಕವರಾಗಿದ್ದಾಗ ಬಸವನಗುಡಿಯ ಮನೆಯೊಂದರ ಮೊದಲನೆ ಮಹಡಿಯಲ್ಲಿ ವಾಸಿಸುತ್ತಿದ್ದೆವು. ನಮ್ಮ ಮನೆ ಓನರ್ ಕೆಳಗಿನ ಮನೆಯಲ್ಲಿ ಇದ್ದರು. ಅವರ ಹತ್ತಿರ ಒಂದು ಆಲ್ಸೇಷನ್ ನಾಯಿ ಇತ್ತು. ಅಮ್ಮ ನನಗೆ ಕುಡಿಯಲು ಕೊಡುತ್ತಿದ್ದ ಹಾರ್ಲಿಕ್ಸ್‌ನಲ್ಲಿ ಅರ್ಧ ಕುಡಿದು ಮಿಕ್ಕಿದ್ದನ್ನು ಆ ನಾಯಿಗೆ ಕದ್ದುಮುಚ್ಚಿ ಹಾಕುತ್ತಿದ್ದೆ. ಅದು ಲಚಕ್‌ಲಚಕ್ ಅಂತ ಕುಡಿಯುತ್ತಿತ್ತು. ಅಷ್ಟು ಅವಸರದಿಂದ ಕುಡಿಯುವುದನ್ನು ನೋಡಿ 'ಪಾಪ, ಓನರ್ ಎಷ್ಟು ಜಿಪುಣ, ಅದಕ್ಕೆ ಸರಿಯಾಗಿ ಹಾಲು ಕೊಡೊಲ್ಲ' ಅಂತ ಬೈದುಕೊಳ್ಳುತ್ತಿದ್ದೆ. ಆಗ ನಾಯಿಗಳು ಹಸಿವಿಲ್ಲದಿದ್ದರೂ ರುಚಿಯಾದ್ದನ್ನು ಕೊಟ್ಟರೆ ತಿನ್ನುತ್ತವೆ ಅಂತ ನನಗೆ ಗೊತ್ತಿರಲಿಲ್ಲ.

ಚಿಕ್ಕವಳಾಗಿದ್ದಾಗಲೇ ನನಗೂ ಒಂದು ನಾಯಿ ಬೇಕು ಅಂತ ತುಂಬಾ ಕನಸು ಕಂಡಿದ್ದೆ. ನನ್ನ ತಮ್ಮ ಅಜಿತು ಮತ್ತು ನಾನು ನಮ್ಮ ಮನಸ್ಸಿನಲ್ಲೇ ಒಂದು ಕೆನಲ್ ಕೂಡ ಕಟ್ಟಿದ್ವಿ. ಆದರೆ ಅಪ್ಪನಿಗೆ ಆಗ ನಾಯಿ ಕಂಡರೆ ಆಗುತ್ತಿರಲಿಲ್ಲ. ಕೆಳಗಿನ ಮನೆಯ ನಾಯಿ ಅಡ್ಡ ಬಂದರೆ "ಇಂದ್ರಾ ಬಾರೇ, ಈ ನಾಯಿಯನ್ನು ಓಡ್ಸು, ಹಚ್ಚಾ ಹಚ್ಚಾ" ಅಂತ ದೂರದಿಂದಲೇ ಸಹಾಯಕ್ಕೆ ಅಪ್ಪ ಕೂಗುತ್ತಿದ್ದರು. ಅವರಿಗೆ ಮೊದಮೊದಲು ನಾಯಿ ಅಂದರೆ ಭಯ. ಅದಕ್ಕೆ ನಮ್ಮ ಮನೆಯಲ್ಲಿ ನಾಯಿ ಸಾಕೋದಕ್ಕೆ ಬಿಟ್ಟಿರಲಿಲ್ಲ.

ಒಮ್ಮೆ ಅಪ್ಪ, ಗೌರಿ ಮತ್ತು ಅಜಿತು ಮೂಡಿಗೆರೆಗೆ ಹೋಗಿ ತೇಜಸ್ವಿ ಅವರಿಂದ ಒಂದು ಕಾಕರ್ ಸ್ಪೇನಿಯಲ್ ಮರಿಯನ್ನು ತಗೊಂಡುಬಂದರು. ಅದು ನಾನು ಸಾಕಿ ಬೆಳೆಸಿದ ಮೊದಲ ನಾಯಿ. ಅದಕ್ಕೆ ಅಪ್ಪ ಪಿಕಾಸೋ ಅಂತ ಹೆಸರಿಟ್ಟರು. ನಾವು ಶಾರ್ಟಾಗಿ ಅದಕ್ಕೆ ಪಿಕಿ ಅಂತ ಕರೀತಿದ್ವಿ. ಪಿಕಿ ನಮ್ಮ ಫ್ಯಾಮಿಲಿಯ ಸದಸ್ಯನಾದ ನಂತರ ಅಪ್ಪನಿಗೆ ನಾಯಿಗಳ ಬಗ್ಗೆ ಅತಿಯಾದ ಪ್ರೀತಿ, ವ್ಯಾಮೋಹ ಶುರುವಾಯಿತು. ಅಪ್ಪನ ಪ್ರೀತಿಯ ನಾಯಿಗಳಾದ ರಾಜ, ಸ್ಟೆಫಿ, ಚೆನ್ನಿ ಬಗ್ಗೆ ನಿಮ್ಮೆಲ್ಲರಿಗೂ ಗೊತ್ತು.

ಅಂದಿನಿಂದ ಇಂದಿನವರೆಗೂ ನಾನು ಎಷ್ಟೋ ನಾಯಿಗಳನ್ನು ಸಾಕಿದ್ದೇನೆ, ಪ್ರೀತಿಸಿದ್ದೇನೆ, ಹಲವುಗಳಿಂದ ಕಚ್ಚಿಸಿಯೂ ಕೊಂಡಿದ್ದೇನೆ. ನಾನು ಒಬ್ಬಳೇ ಇದ್ದಾಗ ನನ್ನ ನಾಯಿಯ ಜೊತೆ ಮಾತನಾಡುತ್ತಿದ್ದೆ. ನನ್ನ ದುಃಖವನ್ನು ಅದರೊಂದಿಗೆ ಹಂಚಿಕೊಳ್ಳುತ್ತಿದ್ದೆ. ಅದಕ್ಕೆ ಎಷ್ಟರಮಟ್ಟಿಗೆ ಅರ್ಥವಾಗುತ್ತಿತ್ತೋ ಗೊತ್ತಿಲ್ಲ. ಆದರೆ ತುಂಬಾ ತಾಳ್ಮೆಯಿಂದ, ತನಗೆ ಎಲ್ಲಾ ಅರ್ಥವಾಗುತ್ತಿದೆ ಎಂಬಂತೆ ಮಿಕ ಮಿಕ ಕಣ್ಣುಬಿಟ್ಟುಕೊಂಡು ನೋಡುತ್ತಿದ್ದವು. ಕೆಲವೊಮ್ಮೆ ನನ್ನ ಕಣ್ಣೀರನ್ನೂ ನೆಕ್ಕುತ್ತಿದ್ದವು. ಹೀಗೆ ನಾವು ಪ್ರೀತಿಸಿ ಬೆಳೆಸಿದ ನಾಯಿ ರೋಗದಿಂದಲೋ ಅಥವಾ ವೃದ್ಧಾಪ್ಯದಿಂದಲೋ ಸತ್ತಾಗ ಆಗುವ ದುಃಖ ನಾಯಿಪ್ರೇಮಿಗಳಿಗೆ ಮಾತ್ರ ಅರ್ಥವಾಗುತ್ತೆ.


ನನ್ನ ಮಗಳು ಇಶಾ ನನ್ನ ಜೀವನದಲ್ಲಿ ಬಂದಾಗಿಂದ ನಾಯಿಗಳ ಬಗೆಗಿನ ನನ್ನ ಕಾಳಜಿ ಸ್ವಲ್ಪ ಕಡಿಮೆ ಆಯಿತು. ನನ್ನ ನಾಯಿಯ ಕೂದಲನ್ನು ಬ್ರಶ್ ಮಾಡುವುದು, ಪ್ರತೀವಾರ ಅದಕ್ಕೆ ಸ್ನಾನ ಮಾಡಿಸುವುದು ಇಂತಹ ಜವಾಬ್ದಾರಿಗಳನ್ನು ನನ್ನ ಮನೆ ಹುಡುಗಿಗೆ ಬಿಟ್ಟು ಇಶಾಳ ಕಡೆಗೆ ಗಮನ ಹರಿಸಿದೆ. ಇಶಾಳಿಗೂ ನಾಯಿ, ಬೆಕ್ಕು, ಕುರಿ, ಇತರೆ ಪ್ರಾಣಿಗಳೆಂದರೆ ಬಹಳ ಪ್ರೀತಿ. ಮೊನ್ನೆ ನಾವು ಬ್ಯಾಂಕಾಕ್‌ಗೆ ಹೋದಾಗ ಅಲ್ಲಿರುವ ಒಂದು ಝೂನಲ್ಲಿ ಜನರು ಹುಲಿ ಮರಿಗಳಿಗೆ ಹಾಲು ಕುಡಿಸಬಹುದಿತ್ತು. ನಾವು ಹಾಲು ಕುಡಿಸುತ್ತಿರುವಾಗ ಝೂನವರು ನಮ್ಮ ಫೋಟೊ ತೆಗೆಯುತ್ತಾರೆ.

ಇಶಾಳಿಗೆ ಫೋಟೋ ತೆಗೆಸಿಕೊಳ್ಳುವುದು ಮುಖ್ಯವಾಗಿರಲಿಲ್ಲ, ಬದಲಾಗಿ ಆ ಹುಲಿಮರಿಯೊಂದಿಗೆ ಆಟವಾಡುವುದು ಅವಳಿಗೆ ಬೇಕಾಗಿತ್ತು. ಅವಳು ಹುಲಿಮರಿಗೆ ಹಾಲು ಕುಡಿಸಿದ ನಂತರ ಅದನ್ನು ಹಿಡಿದುಕೊಂಡು ಆಟವಾಡಲು ಶುರುಮಾಡಿದಳು. ಆದರೆ ಝೂನವರು ಮರಿಯನ್ನು ವಾಪಸ್ ಕೊಡು ಅಂತ ಕೇಳಿದರು. ಆಗ ಇಶಾ "ಇಷ್ಟೇನಾ? ನಾನಿನ್ನೂ ಆಟಾಡ್ಬೇಕು" ಅಂತ ಅಳಲು ಶುರು ಮಾಡಿದಳು. "ಅದು ಹುಲಿ. ನಮ್ಮ ಮನೆಯಲ್ಲಿರೋ ನಿನ್ನ ಬೆಕ್ಕಿನ ಮರಿ ಕೋಲಾ ತರ ಅಲ್ಲ ಅಥವಾ ನಮ್ಮ ನಾಯಿ ಮಲ್ಲಿ ತರ ಅಲ್ಲ, ಸುಮ್ಮನೆ ಬಾ" ಅಂದೆ.

ಈ ಮಲ್ಲಿ ಹನ್ನೆರಡು ವರ್ಷಗಳ ಹಿಂದೆ ನನ್ನ ಜೀವನವನ್ನು ಪ್ರವೇಶಿಸಿದಳು. ಆಲ್ಸೇಷನ್ ತಳಿ. ನನ್ನ ಬಗ್ಗೆ ಆಕೆ ಎಷ್ಟು ಪೊಸೆಸಿವ್ ಅಂದರೆ ಅವಳೊಂದಿಗೆ ಬೇರೆ ಯಾವ ನಾಯಿಯನ್ನೂ ಸಾಕಲು ಬಿಡಲೇ ಇಲ್ಲ. ಮಲ್ಲಿ ಜೊತೆನೇ ಕರೆದುಕೊಂಡು ಬಂದಿದ್ದ ವಿಲ್ಡರ್ ಎಂಬ ನಾಯಿ ನನ್ನ ಹತ್ತಿರ ಬರಲು ಮಲ್ಲಿ ಬಿಡುತ್ತಿರಲಿಲ್ಲ. ವಿಲ್ಡರ್ ಸತ್ತು ಹೋದ ಮೇಲೆ ಮಲ್ಲಿ ಏಕಾಂಗಿ ಆಗುತ್ತಾಳೆಂದು ಸಿಂಬ ಎಂಬ ಇನ್ನೊಂದು ನಾಯಿಯನ್ನು ತಂದೆ. ಆಧರೆ ಆತನನ್ನು ಕಚ್ಚಿ ಹಿಂಸಿಸುತ್ತಿದ್ದಳು ಮಲ್ಲಿ. ಅದೂ ಕೂಡ ಸತ್ತು ಹೋಯಿತು.

ಕೊನೆಗೆ ಮಲ್ಲಿ ಇರುವತನಕ ಬೇರೆ ನಾಯಿಯ ಕತೆ ಬೇಡವೆಂದು ನಿರ್ಧರಿಸಿದೆ. ಮಲ್ಲಿ ನನ್ನ ಜೊತೆ ದಿಲ್‌ಖುಷ್ ರಾಣಿ ಥರ ಇದ್ದಳು. ನನ್ನ ದಿನಚರಿ ಶುರುವಾಗುತ್ತಿದ್ದದ್ದೇ ಮಲ್ಲಿ ಜೊತೆ. ನಾವಿಬ್ಬರೂ ಪ್ರತಿ ದಿನ ಬೆಳಗ್ಗೆ ಐದು ಕಿಲೋಮೀಟರ್ ವಾಕಿಂಗ್ ಹೋಗುತ್ತಿದ್ದೆವು. ಅವಳಿಗೆ ವಾಕಿಂಗ್ ಎಷ್ಟು ಇಷ್ಟ ಅಂದರೆ ವೇಗವಾಗಿ ನಡೆದು ನನಗೂ ಬೆವರು ಇಳಿಸುತ್ತಿದ್ದಳು. ನಾನು ಗರ್ಭಿಣಿ ಆಗಿದ್ದಾಗಲೂ ಅವಳಿಗೆ ವಾಕಿಂಗ್ ಮಾಡಿಸುತ್ತಿದ್ದೆ. ಆದರೆ ಎರಡು ಬಾರಿ ಆಕೆ ರಭಸದಿಂದ ಚೈನ್ ಎಳೆದು ನನ್ನನ್ನು ಬೀಳಿಸಿದ್ದಳು. ಅದನ್ನು ನೋಡಿದ ಅಮ್ಮ "ಇನ್ಮೇಲೆ ಮಲ್ಲಿಯನ್ನು ವಾಕಿಂಗ್‌ಗೆ ಕರೆದುಕೊಂಡು ಹೋಗ್ಬೇಡ. ಹೊಟ್ಟೆಯಲ್ಲಿರೋ ಮಗೂಗೆ ಏನಾದ್ರೂ ಹೆಚ್ಚುಕಡಿಮೆ ಆದ್ರೆ ಕಷ್ಟ" ಎಂದು ನನಗೆ ಚೆನ್ನಾಗಿ ಬೈದಿದ್ದರು. ಆದರೂ ನಾನು ಅವಳೊಂದಿಗೆ ಹೋಗುತ್ತಿದ್ದೆ.

ಮಲ್ಲಿ ತುಂಬಾ ಮೂಡಿಯಾಗಿದ್ದಳು. ಬೇರೆ ನಾಯಿಗಳನ್ನೇ ನನ್ನ ಹತ್ತಿರ ಬಿಡದಿದ್ದ ಮಲ್ಲಿ ಎಲ್ಲಿ ಇಶಾ ಪಾಪುಗೆ ಹೆಚ್ಚುಕಡಿಮೆ ಮಾಡುತ್ತಾಳೋ ಎಂಬ ಭಯ ಗೌರಿ ಮತ್ತು ಅಮ್ಮನಿಗೆ. ಅದರಲ್ಲೂ ರಾಮದಾಸ್ ಅವರ ಪ್ರೀತಿಯ ನಾಯಿ ಅವರ ಮಗಳು ಸ್ನೇಹ ಚಿಕ್ಕವಳಾಗಿದ್ದಾಗ ಕಚ್ಚಿದ್ದು ಗೌರಿಯ ಗಾಬರಿಗೆ ಕಾರಣವಾಗಿತ್ತು.



ಇಶಾ ಹುಟ್ಟಿದಾಗ ಮಲ್ಲಿಗೆ ಆರು ವರ್ಷ. ಆಗ ಮಲ್ಲಿಯ ಮೂಡಿ ಬಿಹೇವಿಯರ್ ನೋಡಿ ಅಮ್ಮ ಮತ್ತು ಗೌರಿ "ಮಲ್ಲಿಯನ್ನು ಇನ್ನು ಮುಂದೆ ಕಟ್ಟಿಹಾಕು ಇಲ್ಲ ಅಂದರೆ ಬೇರೆ ಯಾರಿಗಾದರೂ ಕೊಟ್ಟುಬಿಡು" ಅಂದರು. ನನಗೂ ಆಕೆ ಇಶಾಳಿಗೆ ಏನಾದರು ಮಾಡಿದರೆ ಎಂಬ ಭಯವಿತ್ತು. ಆದರೆ ಅವಳನ್ನು ಯಾರೋ ಅನಾಮಿಕರಿಗೆ ಕೊಡುವ ಮನಸ್ಸು ಬರಲಿಲ್ಲ. ಸದ್ಯ ಮಲ್ಲಿ ಇಶಾಳಿಗೆ ಏನನ್ನೂ ಮಾಡಲಿಲ್ಲ. ಬದಲಾಗಿ ಇಶಾ ಮಲ್ಲಿಯನ್ನು ಪ್ರೀತಿಸಿದಳು. ಮಲ್ಲಿ ಕೂಡ ಇಶಾಳಿಗೆ ಪ್ರೀತಿಯನ್ನೇ ಕೊಟ್ಟಳು. ಹೀಗೆ ಏಳು ವರ್ಷ ಸಾಗಿತು.

ಮಲ್ಲಿಗೆ ಕ್ರಮೇಣ ವಯಸ್ಸಾಯಿತು. ಅವಳ ಹಿಂದಿನ ಕಾಲುಗಳಲ್ಲಿ ಶಕ್ತಿ ಕುಸಿಯುತ್ತಾ ಹೋಯಿತು. ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ, ಕಣ್ಣು ಮಂಜಾದರು ಆಯ್ತು, ಆದರೂ ನನ್ನ ಜೊತೆ ಕಷ್ಟಪಟ್ಟು ವಾಕಿಂಗ್‌ಗೆ ಬರುತ್ತಿದ್ದಳು. ಮೊದಲಿನ ಐದು ಕಿಲೋಮೀಟರ್ ವಾಕ್ ಮೂರಕ್ಕೆ ಇಳಿಯಿತು. ಆಮೇಲೆ ಮೂರರಿಂದ ಒಂದು ಕಿಲೋಮೀಟರ್. ಕೊನೆಗೆ ನಾಲ್ಕು ಹೆಜ್ಜೆ ಹಾಕಲೂ ಅವಳಿಗೆ ಕಷ್ಟವಾಗಲಾರಂಭಿಸಿತು. ಹೋದ ವಾರ ಅವಳಿಗೆ ಎದ್ದೇಳುವುದು ಕಷ್ಟವಾಗಿ ಒಂದು ಮೂಲೆ ಹಿಡಿದಳು. ಆಕೆಯನ್ನು ಡಾಕ್ಟರ್‌ಗೆ ತೋರಿಸಿದಾಗ "ಇವಳಿಗೆ ತುಂಬಾ ವಯಸ್ಸಾಗಿದೆ. ನೀವು ಇಷ್ಟು ಚೆನ್ನಾಗಿ ನೋಡ್ಕೊಂಡಿರೋದಕ್ಕೆ ಇವಳು ಇನ್ನೂ ಬದುಕಿದ್ದಾಳೆ" ಎಂದು ಹೇಳಿ ಸುಮ್ಮನಾದರು.

ಮಲ್ಲಿಯ ದೇಹವನ್ನು ನೋವು ಕಿತ್ತು ತಿನ್ನಲಾರಂಭಿಸಿತು. ಆ ನೋವನ್ನು ತಡೆಯಲಾರದೆ ಆಕೆ ತನ್ನ ಬಾಲವನ್ನೇ ಕಚ್ಚಿಕೊಳ್ಳಲು ಶುರು ಮಾಡಿದಳು. ಕಷ್ಟ ಪಟ್ಟು ಉಸಿರಾಡುತ್ತಿದ್ದಳು. ಅವಳು ಸಂಕಟ ಪಡುವುದನ್ನು ನೋಡಲಾಗದೆ ಅವಳಿಗೆ ಯೂತನೇಸಿಯಾ ಕೊಡಿಸಲು ನಿರ್ಧರಿಸಿದೆ. ಇಶಾಳಿಗೆ ಇದರ ಬಗ್ಗೆ ಹೇಳಿದಾಗ ಆಕೆ "ಬೇಡ" ಅಂದಳು. ಆಗ ನಾನು "ಜೀವನದಲ್ಲಿ ಯಾವುದೂ ಪರ್ಮನೆಂಟ್ ಅಲ್ಲ, ಒಂದು ಮರ ಕೂಡ ಒಣಗಿಹೋಗುತ್ತೆ ಬಂಡೆಗಳು ಮಣ್ಣಾಗುತ್ತೆ, ಮಲ್ಲಿನೂ ಹಾಗೆ" ಎಂದೆ. ಇಶಾಳಿಗೆ ಅದೆಷ್ಟು ಅರ್ಥವಾಯಿತೋ ಗೊತ್ತಿಲ್ಲ "ಒಕೆ ಅಮ್ಮ, ಮಲ್ಲಿಗೆ ಇಂಜೆಕ್ಷನ್ ಕೊಡ್ಬೇಕು ಅಂದ್ರೆ ಕೊಡ್ಸು" ಅಂದುಬಿಟ್ಟಳು. ಅದನ್ನು ಕೇಳಿ ನಾನೇ ಅಳಲಾರಂಭಿಸಿದೆ. ನನ್ನ ಕಣ್ಣೀರನ್ನು ನೋಡಿ ಇಶಾ ತನ್ನ ಮನಸ್ಸನ್ನು ಬದಲಾಯಿಸಿ "ಬೇಡ. ಅದರ ಪಾಡಿಗೆ ಅದೇ ಹೋಗ್ಲಿ ಬಿಡು. ಇಂಜೆಕ್ಷನ್ ಎಲ್ಲಾ ಬೇಡ" ಅಂದಳು. ನನಗೋ ಎರೆಡೆರಡು ಮನಸ್ಸು.

ನಿನ್ನೆ ಬೆಳಗ್ಗೆ ಇಶಾಳನ್ನು ಸ್ಕೂಲಿಗೆ ಕಳುಹಿಸಿದ ನಂತರ ಮನೆಗೆ ಹಿಂದಿರುಗಿದೆ. ಇಪ್ಪತ್ತೈದು ಕೇಜಿ ತೂಕವಿದ್ದ ಮಲ್ಲಿಯನ್ನು ಒಂದು ಕಾರ್ಪೆಟ್ ಮೇಲೆ ಹಾಕಿದೆ. ತನ್ನನ್ನು ವಾಕಿಂಗ್‌ಗೆ ಕರೆದುಕೊಂಡು ಹೋಗುತ್ತಿದ್ದೇನೆ ಎಂದು ಭಾವಿಸಿದ ಮಲ್ಲಿ ಕಷ್ಟ ಪಟ್ಟು ತನ್ನ ಮುಂದಿನ ಕಾಲಿನ ಮೇಲೆ ಭಾರ ಬಿಟ್ಟು ಕೂತಳು. ಆಕೆಯನ್ನು ಕಾರಿನಲ್ಲಿ ಕೂಡಿಸಿಕೊಂಡೆ. ಕಾರಿನ ಕಿಟಕಿಯಿಂದ ಆಚೆ ನೋಡುತ್ತಾ ಗಾಳಿಯನ್ನು ಸವಿಯುತ್ತಾ ಕೂತಳು. ಮಗುವನ್ನು ಎತ್ತಿಕೊಳ್ಳುವ ಹಾಗೆ ಆಕೆಯನ್ನು ಎತ್ತಿಕೊಂಡು ಡಾಕ್ಟರ್ ಶಾಪಿಗೆ ಹೋದೆ. ಆಕೆ ನನ್ನ ಮುಖವನ್ನೇ ನೋಡುತ್ತಿದ್ದಳು. ಅವಳ ಮೈಯನ್ನು ನಾನು ನೀವುತ್ತಿದ್ದಾಗ ಡಾಕ್ಟರ್ ಆಕೆಗೆ ಇಂಜೆಕ್ಷನ್ ಕೊಟ್ಟರು. ಹತ್ತೇ ಸೆಕೆಂಡ್‌ಗಳಲ್ಲಿ ಅವಳ ಉಸಿರಾಟ ನಿಂತಿತು.


ಮತ್ತೆ ಆಕೆಯನ್ನು ಕಾರಿನಲ್ಲಿ ಹಾಕಿಕೊಂಡೆ. ಅವಳು ಈಗ ಮಲಗಿದ್ದಳು. ಕಿಟಕಿಯಿಂದ ಬರುತ್ತಿದ್ದ ಗಾಳಿಯಲ್ಲಿ ಅವಳ ಕಿವಿ ಮತ್ತು ಮೈಮೇಲಿನ ಕೂದಲು ಹಾರುತ್ತಿತ್ತು. ಆಕೆ ಇನ್ನೂ ಬದುಕಿದ್ದಾಳೇನೋ ಅಂತ ಅನ್ನಿಸುತ್ತಿತ್ತು. ಅಮ್ಮನ ತೋಟಕ್ಕೆ ಕರೆದುಕೊಂಡು ಹೋಗಿ ಆಕೆಯನ್ನು ಮಣ್ಣು ಮಾಡಿದೆ.

ಸ್ಕೂಲಿನಿಂದ ಮನೆಗೆ ಬಂದ ತಕ್ಷಣ ಇಶಾ "ಮಲ್ಲಿ ಎಲ್ಲಿ?" ಅಂತ ಕೇಳಿದಳು. ನಾನು ಏನನ್ನೂ ಮುಚ್ಚಿಡದೆ ಮಲ್ಲಿಯ ಕೊನೆ ನಿಮಿಷಗಳ ಬಗ್ಗೆ ಆಕೆಗೆ ಹೇಳಿದೆ. ಅವಳು ಅಳತೊಡಗಿದಳು. ಕೊನೆಗೆ ಮಲ್ಲಿಯ ನೆನಪಿನಲ್ಲಿ ತೋಟದಲ್ಲಿ ಒಂದು ಗಿಡ ನೆಡೋಣ ಎಂದು ಗೌರಿ ಹೇಳಿದ ಮೇಲೆ ಇಶಾಳಿಗೆ ಸ್ವಲ್ಪ ಸಮಾಧಾನವಾಯಿತು.

ಚಿಕ್ಕ ಮರಿ ಆಗಿದ್ದಾಗಿನಿಂದ ಸುಮಾರು ಹದಿಮೂರು ವರ್ಷ ನನ್ನ ಸಂಗಾತಿ ಆಗಿದ್ದ, ತನ್ನ ಕೊನೆ ಉಸಿರು ಇರುವವರೆಗೂ ನನ್ನ ಜೊತೆಗಿದ್ದ, ಬದುಕಿನಲ್ಲಿ ನಾನು ಕಂಡ ಏರುಪೇರು, ಕಷ್ಟ ಸುಖ, ಮುರಿದುಬಿದ್ದ ಸಂಬಂಧಗಳು, ಚಿಗುರಿದ ಸ್ನೇಹಗಳು... ಎಲ್ಲದಕ್ಕೂ ಮೂಕಸಾಕ್ಷಿಯಾಗಿದ್ದ ಯಾವುದೇ ಬಯಾಸ್ ಇಲ್ಲದೆ ನನಗೆ ಪ್ರೀತಿ ಕೊಟ್ಟು ಹೋಗಿದ್ದಕ್ಕೆ ಥ್ಯಾಂಕ್ಯೂ ಮಲ್ಲಿ!

• ಕವಿತಾ ಲಂಕೇಶ್

ಮೈಸೂರು ಜೆಡಿಎಸ್ ಬೆಂಬಲದೊಂದಿಗೆ ಅವ್ವ ಮಾದೇಶನ ಗೂಂಡಾಗಿರಿ!


ಅವ್ವಮಾದೇಶ

ಸಾಂಸ್ಕೃತಿಕ ರಾಜಧಾನಿ ಮೈಸೂರಿಗೆ ಎಂತಹ ಪೊಲೀಸ್ ಅಧಿಕಾರಿಗಳು ಬಂದರೂ ರೌಡಿಗಳ ದರ್ಪ, ದೌರ್ಜನ್ಯ, ಗೂಂಡಾಗಿರಿ, ಮಟೀಲಿ ಬಾಜಿಗಳು ನಿಲ್ಲುತ್ತಿಲ್ಲ; ಇಂತಹ ಸಮಾಜ ಕಂಟಕರಿಗೆ ಕೆಲವು ಪೊಲೀಸ್ ಅಧಿಕಾರಿಗಳ ಬೆಂಬಲ ಇದ್ದೇ ಇದೆ. ಮೈಸೂರು ಮಹಾನಗರ ಪಾಲಿಕೆಯಂತೂ ಖತರ್‌ನಾಕ್‌ಗಳ ಅಡ್ಡೆಯಂತಾಗಿದೆ. ಅತ್ಯಂತ ನಟೋರಿಯಸ್ ಪಾತಕಿಗಳನ್ನ ರಾಜಕೀಯ ಪಕ್ಷಗಳು ತಮ್ಮ ಬ್ಯಾನರ್ ಅಡಿಯಲ್ಲಿ ಪೊರೆಯುತ್ತಿವೆ. ಹೀಗೆ ಪ್ರಭಾವಿ ಪಕ್ಷಗಳ ಪೆಂಡಾಲಿನಲ್ಲಿ ತಮ್ಮ ದಂಧೆ, ಗೂಂಡಾಗಿರಿ ನಡೆಸುವ ಪಾತಕಿಗಳು ನಗರಪಾಲಿಕೆಯ ಆದಾಯ, ಆಸ್ತಿಪಾಸ್ತಿಗಳಿಗೆ ಕತ್ತರಿಹಾಕಿ ತಮ್ಮ ತಿಜೋರಿ ತುಂಬಿಸಿಕೊಂಡು ಜನಸಾಮಾನ್ಯರಿಗೆ ಕೊಡುತ್ತಿರುವ ಉಪದ್ರವ ಅಷ್ಟಿಷ್ಟಲ್ಲ; ಸದ್ಯ ಇಂತಹದ್ದೊಂದು ಮಹಾನ್ ಕೆಲಸ ಮಾಡುತ್ತಿರುವವನು ಮೈಸೂರಿನ 32ನೇ ವಾರ್ಡ್‌ನಲ್ಲಿ ಜೆಡಿಎಸ್‌ನಿಂದ ಗೆದ್ದಿರುವ ಕಾರ್ಪೋರೇಟರ್ ಕಂ ರೌಡಿ ಅವ್ವ ಮಾದೇಶ!


ಡೆಡ್ಲಿ ಬ್ರದರ್ಸ್!

ಅವ್ವ ಮಾದೇಶ ಇಂದು ಇಡೀ ಮೈಸೂರಿಗೆ ಅಪಾಯಕಾರಿ ಹುಳುವಾಗಿದ್ದಾನೆ. ಈತನ ತಮ್ಮ ಅವ್ವ ಮಂಜನದ್ದೂ ಅದೇ ಕಥೆ. ಈ ಇಬ್ಬರು ಕುಖ್ಯಾತ ರೌಡಿ ಸಹೋದರರು ಇಡೀ ಮೈಸೂರನ್ನೇ ಅಶಾಂತಿಯ ಗುಡಾಣವಾಗಿಸಿದ್ದಾರೆ. ಇವರಿಬ್ಬರ ದರ್ಪ, ದೌರ್ಜನ್ಯಗಳು ಮೇರೆಮೀರಿವೆ. ಪಾಲಿಕೆಯ ಬಹುತೇಕ ಆಸ್ತಿಪಾಸ್ತಿಗಳು ಈ ಕುಖ್ಯಾತ ಸಹೋದರರ ಸೊತ್ತಾಗಿ ಪರಿವರ್ತನೆ ಹೊಂದುತ್ತಿವೆ. ಒಂಟಿಕೊಪ್ಪಲು ಸೇರಿದಂತೆ ಪಡುವಾರಳ್ಳಿ ಸುತ್ತಮುತ್ತ ಇರುವ ಏರಿಯಾಗಳಲ್ಲಿ ನಿವೇಶನಗಳಿಗೆ ರಾತ್ರೋರಾತ್ರಿ ತಂತಿಬೇಲಿ ಸುತ್ತಿ ತಮ್ಮ ಆಸ್ತಿಯನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಮಾಲೀಕರೇ ಮಾತಾಡದಂತೆ ಬೆದರಿಕೆ ಹಾಕುತ್ತಾರೆ. ಇದು ಇವರ ದಿನ ನಿತ್ಯದ ನಿರಂತರ ದಂಧೆಯಾಗಿದೆ.

ಕಾರ್ಪೋರೇಟರ್ ಕಂ ಗೂಂಡಾ ಅವ್ವ ಮಾದೇಶ ಮತ್ತು ಅವ್ವ ಮಂಜಗಳ ವಿರುದ್ಧ ಯಾರೂ ಮಾತಾಡುತ್ತಿಲ್ಲ, ಯಾಕೆಂದರೆ ಬೆಂಗಳೂರಿಗೆ ಕೋತಿ ರಾಮಗಳು, ಬಾಂಬ್ ನಾಗಗಳು ಇರುವಂತೆ ಮೈಸೂರಿಗೆ ಈ ಜೋಡಿ ಕಿರಾತಕರೇ ಡಾನ್‌ಗಳಾಗಿ ಮೆರೆಯುತ್ತಿದ್ದಾರೆ. ಇವರನ್ನ ಮುಟ್ಟಲು ಯಾವ ಪೊಲೀಸ್ ಅಧಿಕಾರಿಗಳಿಗೂ ದಮ್ಮೇ ಇಲ್ಲವಂತೆ! ಮುಟ್ಟಿದರೆ ಜೆಡಿಎಸ್‌ನ ಕಮಾಂಡರ್ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ಮಾಜಿ ಜೆಡಿಎಸ್ ಕಟ್ಟಾಳು, ಹಾಲಿ ಬಿಜೆಪಿಯ ಗೃಹ ಮಂಡಳಿ ಅಧ್ಯಕ್ಷ ಹುಣಸೂರಿನ ಜಿಟಿ ದೇವೇಗೌಡರ ಹೆಸರನ್ನ ಒಟ್ಟೊಟ್ಟಿಗೆ ಹೇಳುತ್ತಾರಂತೆ. ಹಾಗಾಗಿ ಈ ಡೆಡ್ಲಿ ಸಹೋದರರ ಉಪಟಳಗಳನ್ನು ಎಲ್ಲರೂ ಸಹಿಸಿಕೊಳ್ಳಬೇಕಾಗಿದೆ.

ರಾಬರಿ ಗಿರಾಕಿಗಳು

ಅವ್ವ ಮಾದೇಶ ಮತ್ತು ಅವ್ವ ಮಂಜ ಮೂಲದಿಂದಲೇ ರಾಬರಿ ಮತ್ತು ಎತ್ತುವಳಿ ಗಿರಾಕಿಗಳು. ಒಂಟಿಕೊಪ್ಪಲು,





ಕನ್ನೇಗೌಡನ ಕೊಪ್ಪಲು, ಪಡುವಾರಳ್ಳಿಗಳಲ್ಲಿನ ಶ್ರೀಮಂತರ ಮನೆಗಳಿಂದ ಶುರುವಾದ ಇವರ ರಾಬರಿ ಕಸುಬು ಇಂದು ಇಡೀ ಮೈಸೂರು ತುಂಬೆಲ್ಲಾ ಹರಡಿಕೊಂಡಿದೆ. ಈಗ ಪಡುವಾರಹಳ್ಳಿ, ಕೆಜಿಕೊಪ್ಪಲು, ಒಂಟಿಕೊಪ್ಪಲುಗಳ ಸಮಸ್ತ ಅಂಗಡಿ ಮಾಲೀಕರು ಪಾಲಿಕೆಗೆ ತೆರಿಗೆ ಕಟ್ಟದಿದ್ದರೂ ನಡೆಯುತ್ತದೆ ಆದರೆ ಇವರಿಗೆ ಮಾಮೂಲಿ ಕೊಡಲೇಬೇಕೆಂಬ ಕಟ್ಟಪ್ಪಣೆ ಜಾರಿಯಾಗಿದೆಯಂತೆ!

ಮಳ್ಳ ಅಧಿಕಾರಿಗಳು

ಮೈಸೂರು ಮಹಾನಗರ ಪಾಲಿಕೆ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಸ್ತಿಗಳನ್ನು ತಮ್ಮ ವಶ ಮಾಡಿಕೊಳ್ಳುವ ಕಲೆ ಈ 'ಅವ್ವ'ಗಳಿಗೆ ಸಿದ್ಧಿಸಿದೆ. 32ನೆ ವಾರ್ಡ್ ಒಂಟಿಕೊಪ್ಪಲಿನಲ್ಲೆ ಈ ಜೋಡಿಯ ಆಸ್ತಿಪಾಸ್ತಿಗಳು ಹಲವು ಕೋಟಿಗಳನ್ನ ಮೀರುತ್ತವೆ. ಸುಮಾರು 40 ನಿವೇಶನಗಳು, 20 ಬಂಗಲೆಗಳು, ವಾಣಿಜ್ಯ ಸಂಕೀರ್ಣಗಳಿವೆ. ಹೊಸದಾಗಿ ನಿಯಮ ಮೀರಿರುವ ಕಟ್ಟಡಗಳು ತಲೆ ಎತ್ತಿದ್ದರೆ ಅವು ಒಂದೋ ಅವ್ವಗಳದ್ದು ಇಲ್ಲವೇ ಇವರ ಪುಂಡು ಬೆಂಬಲಿಗರದ್ದು ಎಂದು ಸಾಮಾನ್ಯರೂ ಹೇಳುತ್ತಾರೆ. ಈ ಆಸಾಮಿಗಳು ಎಂತಹ ಘಟಿಂಗರು ಎಂದರೆ ಇವರ ಹೆಸರಿನಲ್ಲಿ ಒಂದೇ ಒಂದು ಆಸ್ತಿಯನ್ನೂ ಇಟ್ಟುಕೊಂಡಿಲ್ಲ!


ಪಾಲಿಕೆಯ ಗಲ್ಲಿ ಗಲ್ಲಿಗಳನ್ನೂ ಬಿಡದೆ ಈ ಅವ್ವಗಳು ಕಬ್ಜಗೊಳಿಸಿಕೊಂಡಿದ್ದಾರೆ. ಇಲ್ಲವೇ ಕಬ್ಜಗೊಳಿಸಿಕೊಂಡಿರುವವರಿಂದ ವಸೂಲಿ ಮಾಡುತ್ತಿದ್ದಾರೆ. ಇದಕ್ಕೆ ಚಿಕ್ಕ ಉದಾಹರಣೆ ಎಂದರೆ ಕಾಳಿದಾಸ ರಸ್ತೆಯ ಪಾರ್ವತಿ ಕಲ್ಯಾಣ ಮಂಟಪದ ಎದುರು ಇರುವ ಗಲ್ಲಿಯನ್ನೇ ಒತ್ತುವರಿ ಮಾಡಿಕೊಂಡು ದೋಸಾಲೀಸಿಯಸ್ ಎಂಬ ಹೋಟೆಲ್ ಕಟ್ಟಿಸಿದ್ದಾರೆ. ಇವರಿಗೆ ಕಪ್ಪ ಸಲ್ಲಿಸದ ಕಟ್ಟಡ ಮಾಲೀಕರು ಜಾಗ ಖಾಲಿಮಾಡಿದ್ದಾರೆ. ಇಲ್ಲವೇ ಪಾಳು ಬಿಟ್ಟಿದ್ದಾರೆ. ಕಪ್ಪಕೊಡದ ಅಂಗಡಿಗಳನ್ನ ಈ ಪುಂಡರೇ ಮುಂದೆ ನಿಂತು ಪಾಲಿಕೆ ಅಧಿಕಾರಗಳಿಂದ ಬಂದ್ ಮಾಡಿಸುತ್ತಾರೆ. ಪಾಲಿಕೆಯ ವಲಯ ಕಚೇರಿ 4 ಮತ್ತು ಆಯುಕ್ತ ರಾಯ್ಕರ್ ನಿವಾಸಗಳು ಅನತಿ ದೂರದಲ್ಲಿದ್ದರೂ ತಮಗೆ ಏನೂ ಗೊತ್ತಿಲ್ಲವೆಂಬಂತೆ ಮುಗುಮ್ಮಾಗಿದ್ದಾರೆ!


ಜೋಡಿರಸ್ತೆಯ ಶಿವಣ್ಣ ಕಾಂಪ್ಲೆಕ್ಸ್ ಈ ಕುಖ್ಯಾತ ಸಹೋದರರ ಅಡ್ಡೆಯಾಗಿದೆ. ಇವರ ಎಲ್ಲ ಅವ್ಯವಹಾರಗಳು ಇಲ್ಲಿಂದಲೇ ಆಪರೇಟ್ ಆಗುತ್ತವೆ. ಏರಿಯಾದಲ್ಲಿ ಯಾವ ಮನೆಗಳು ಮಾರಾಟಕ್ಕಿವೆ ಎಂಬ ಮಾಹಿತಿ ವಿನಿಮಯದಿಂದ ಹಿಡಿದು ಯಾರನ್ನ ಮುಗಿಸಬೇಕು ಎಂಬುವುದೆಲ್ಲಾ ತೀರ್ಮಾನವಾಗುವುದು ಇಲ್ಲೇ.


ವಸೂಲಿ, ಮೀಟರ್ ಬಡ್ಡಿದಂಧೆ, ಲ್ಯಾಂಡ್ ಮಾಫಿಯಾ, ಅಕ್ರಮ ಇಸ್ಪೀಟು ದಂಧೆಗಳು, ವೇಶ್ಯಾವಾಟಿಕೆಗಳ ಅಡ್ಡೆಗಳಿಂದ ಬರುವ ಆಮದನಿಯೇ ಅರ್ಧ ಕೋಟಿ ಮೀರುತ್ತದೆ ಎಂಬುದು ಅವ್ವಗಳ ಅಡ್ಡೆಯಿಂದಲೇ ಬರುತ್ತಿರುವ ಅಧಿಕೃತ ಸುದ್ದಿ. ಈ ಡೆಡ್ಲಿ ಸಹೋದರರ ಅಕ್ಕನ ಗಂಡ ಪಾಲಹಳ್ಳಿ ರಾಮಕೃಷ್ಣ ಪಕ್ಕಾ ಮೀಟರ್ ಬಡ್ಡಿ ದಂಧೆಕೋರನಾಗಿ ಬೆಳೆದಿದ್ದಾನೆ. ಈತನಿಂದ ಸಾಲ ಪಡೆದವರ ಕಥೆ ಮುಗಿಯಿತು ಎಂದೇ ಅರ್ಥ.

ಅಂಡಾಳ್ ಮಾರ್ಕೆಟ್ ದಂಧೆ!

ಕಾರ್ಪೋರೇಟರ್ ಕಂ ರೌಡಿ ಅವ್ವ ಮಾದೇಶನಿಗೆ ವಾರ್ಡ್ ನಂ.32 ತನ್ನಪ್ಪನ ಮನೆ ಆಸ್ತಿಯಂತಾಗಿದೆ. ಇದಕ್ಕೆ


ಕುಮಾರಸ್ವಾಮಿ


ಜಿ.ಟಿ.ದೇವೇಗೌಡ


ರಾಯ್ಕರ್

ತಕ್ಕ ಉದಾಹರಣೆ ಇದೇ ಒಂಟಿಕೊಪ್ಪಲಿನ ಅಂಡಾಳ್ ಮಂದಿರ ಮಾರ್ಕೆಟ್ ದಂಧೆ. ಇದು ಅಸಲಿಗೆ ಪಾಲಿಕೆಯ ಗಲ್ಲಿ, ಇದಕ್ಕೆ ಎರಡು ಬಲ್ಲಿ ಕಲ್ಲುಗಳನ್ನ ನೆಟ್ಟು 30ಕ್ಕಿಂತಲೂ ಹೆಚ್ಚು ಅಂಗಡಿಗಳನ್ನ ಅನಧಿಕೃತವಾಗಿ ತೆರೆಸಿ ಅವ್ವ ಮಾದೇಶ ಅಂಡಾಳ್ ಮಂದಿರ ಮಾರ್ಕೆಟ್ ಮಾಡಿದ್ದಾನೆ. ಇದಲ್ಲದೇ ವ್ಯಾಪಾರಿಗಳಿಗೆ ಈತನೇ ಮುಂದೆನಿಂತು ಒಬ್ಬೊಬ್ಬರಿಂದ ತಲಾ 30ರಿಂದ 50 ಸಾವಿರಗಳವರೆಗೆ ಅಡ್ವಾನ್ಸ್ ಪಡೆದಿರುವುದೂ ಅಲ್ಲದೇ, ಪ್ರತೀ ತಿಂಗಳೂ 2ರಿಂದ ಮೂರು ಸಾವಿರ ರೂಗಳನ್ನ ಕಪ್ಪದ ರೂಪದಲ್ಲಿ ಪಡೆಯುತ್ತಾನೆ! ಇದೆಲ್ಲ ಪಾಲಿಕೆಯ ಆಯುಕ್ತ ರಾಯ್ಕರ್, ಮೇಯರ್ ಪುಷ್ಪಲತಾರಾದಿಯಾಗಿ ಸಮಸ್ತ ಕಾರ್ಪೋರೇಟರ್‌ಗಳಿಗೆಲ್ಲಾ ಗೊತ್ತಿದ್ದರೂ ತಮಗೆ ತಿಳಿದೆ ಇಲ್ಲವೆಂಬಂತೆ ನಾಟಕವಾಡುತ್ತಾ ಪಾಲಿಕೆಗೆ ಸೇರಬೇಕಿರುವ ಲಕ್ಷಾಂತರ ರೂ.ಗಳ ತೆರಿಗೆಗೆ ಕತ್ತರಿ ಹಾಕುತ್ತಿದ್ದಾರೆ. ಮಾದೇಶನ ಕಡೆಯಿಂದ ಯ್ಯಾರ್ಯಾರಿಗೆ ಎಷ್ಟೆಷ್ಟು ಪಾಲು ಸಿಗುತ್ತಿದೆ ಎಂಬುದು ಬೆಳಕಿಗೆ ಬರಬೇಕಿದೆ.

ಪೊಲೀಸರ ಸಾಥ್

ಮಾದೇಶ ವಿವಿ ಪುರಂ ಪೊಲೀಸ್ ಠಾಣೆಯನ್ನೇ ಗುತ್ತಿಗೆ ಹಿಡಿದಿದ್ದಾನೆ. ಇಲ್ಲಿನ ಇನ್ಸ್‌ಪೆಕ್ಟರ್ ರಾಚಪ್ಪ ಮತ್ತು ಎಎಸ್‌ಐ ಶಿವನಂಜಪ್ಪಗಳು ಅವ್ವ ಮಾದೇಶನ ಎತ್ತುವಳಿ ಬಂಟರಂತೆ ಕೆಲಸ ಮಾಡುತ್ತಿದ್ದಾರೆ.

ಮಾದೇಶ ತನ್ನ ವಿರೋಧಿಗಳನ್ನು ವಿವಿಧ ರೀತಿಯಲ್ಲಿ ಹಣಿಯುತ್ತಾನೆ. ಒಂಟಿಕೊಪ್ಪಲಿನಲ್ಲಿ ಕಾಂಗ್ರೆಸ್ ಮುಖಂಡ ಪುಟ್ಟಸ್ವಾಮಿ ಚಾಮುಂಡಿ ದೇವಸ್ಥಾನವನ್ನ ಕಟ್ಟಿಸಿದ್ದರೆ ಅದಕ್ಕೆ ಮೂರು ಬಾರಿ ತನ್ನ ಪುಂಡರನ್ನ ನುಗ್ಗಿಸಿ ನಗನಾಣ್ಯ ವಿಗ್ರಹಗಳ ಮೇಲಿದ್ದ ಲಕ್ಷಾಂತರ ರೂ.ಗಳ ಚಿನ್ನಾಭರಣವನ್ನ ದರೋಡೆ ಮಾಡಿಸಿದ್ದಾನೆ. ಇದನ್ನ ಮಾಡಿರುವವರು ಯಾರು ಎಂಬುದು ಇನ್ಸ್‌ಪೆಕ್ಟರ್ ರಾಚಪ್ಪ ಮತ್ತು ಎಎಸ್‌ಐ ಶಿವನಂಜಪ್ಪಗಳಿಗೆ ಗೊತ್ತಿದ್ದರೂ ಆರೋಪಿಗಳನ್ನು ಬಂಧಿಸುತ್ತಿಲ್ಲ, ಹಾಗೊಂದು ವೇಳೆ ಬಂಧಿಸಿದರೆ ಆ ಆರೋಪಿಗಳು ಅವ್ವನ ಅಡ್ಡೆಯ ಹುಡುಗರೇ ಎಂಬುದು ಸಾಬೀತಾಗುತ್ತದೆಂದು ಚಾಮುಂಡಿ ದೇವಿಯ ಭಕ್ತರೇ ಹೇಳುತ್ತಿದ್ದಾರೆ!

ದಕ್ಷ ಪೋಲಿಸ್ ಅಧಿಕಾರಿ ಎಂದು ಹೆಸರು ಪಡೆದಿರುವ ಸುನಿಲ್ ಅಗರ್ವಾಲ್ ಕೂಡಾ ಈ ವಿಚಾರದಲ್ಲಿ ಸುಮ್ಮನಿರುವುದು ಯಾಕೆ?


ಜೋಡಿ ಕೊಲೆ ಕೇಸ್‌ನಿಂದ ಬಚಾವ್!

ಮೂರು ವರ್ಷಗಳ ಹಿಂದೆ ಇದೇ ಅವ್ವ ಮಾದೇಶ ಮತ್ತು ಮಂಜುಗಳು ಪಡುವಾರಹಳ್ಳಿ ಮೂಲದ ತನ್ನದೇ ಗ್ಯಾಂಗ್‌ನ ಗಾಂಧಿ ಮತ್ತು ರಾಮು ಎಂಬ ರೌಡಿ ಎಲಿಮೆಂಟುಗಳನ್ನು ಹುಣಸೂರು ಬಳಿಯ ತೋಟದ ಮನೆಯಲ್ಲಿ ಕೊಲೆ ಮಾಡಿಸಿದ್ದರು. ತಮ್ಮ ವಿರುದ್ಧ ಮತ್ತೊಂದು ರೌಡಿ ಪಡೆ ಬೆಳೆಯಬಾರದೆಂಬುದೇ ಈ ಕೊಲೆಗಳ ಹಿಂದೆ ಇದ್ದ ಏಕೈಕ ಕಾರಣ! ಈ ಪ್ರಕರಣದಲ್ಲಿ ಎ1 ಆಗಿ ಅವ್ವ ಮಾದೇಶನನ್ನೂ ಮತ್ತು ಎ2 ಆಗಿ ಅವ್ವ ಮಂಜನ ಮೇಲೆ ಕೇಸು ಜಡಿಯಲಾಗಿತ್ತು. ಆದರೆ ಇಂದು ಪೊಲೀಸ್ ಅಧಿಕಾರಿಗಳ ಸಹಾಯದಿಂದ ಮೃತರ ಕುಟುಂಬವನ್ನು ಬೆದರಿಸಿ ಕೇಸನ್ನು ಹಳ್ಳ ಹಿಡಿಸಲಗಿದೆ ಎಂಬ ಸುದ್ದಿಯಿದೆ.

ಇದು ಮೈಸೂರಿನ ಮಹಾನಗರ ಪಾಲಿಕೆಯ 32ನೆ ವಾರ್ಡ್‌ನ ಕಾರ್ಪೋರೇಟರ್ ಅವ್ವ ಮಾದೇಶನ ಅಸಲೀ ರೂಪ. ಮಾದೇಶನ ವಿರೋಧಿ ರೌಡಿಗಳಲ್ಲಿ ಒಬ್ಬನಾದ ಅರ್ಜುನ ಎಂಬ ಮಾಜಿ ರೌಡಿ ರಾಜಕಾರಣ ಮಾಡುತ್ತಲೇ ಮಾಜೀ ಉಪಮೇಯರ್ ಆಗಿ, ನಂತರ ಬಡ್ಡಿ ವ್ಯವಹಾರ ಮಾಡಿಕೊಂಡು ಮನೆಗೆ ಸೇರಿದ್ದಾಗಿದೆ. ರೌಡಿ ಗಣೇಶನೂ ಜೈಲು ಪಾಲಾಗಿದ್ದಾನೆ. ಉಳಿದಿರುವುದು ಈ ಡೆಡ್ಲಿ ಸಹೋದರರು ಮಾತ್ರ.

ಈಗ ಸುನಿಲ್ ಅಗರ್ವಾಲ್ ಇತರೆ ಅದಕ್ಷ ಪೊಲೀಸ್ ಅಧಿಕಾರಿಗಳಂತಾಗದೆ ಇಂತಹ ಪ್ರೊಫೆಶನಲ್ ಗೂಂಡಾಗಳನ್ನು ಮಟ್ಟಹಾಕುವ ಎದೆಗಾರಿಕೆ ತೋರಬೇಕಿದೆ.


• ವರದಿಗಾರ



ಚಾಮರಾಜ ಕ್ಷೇತ್ರಕ್ಕೆ ಎಮ್ಮೆಲ್ಲೆಯಾಗುತ್ತಾನಂತೆ!

ಅವ್ವ ಮಾದೇಶನನ್ನು ರಾಜಕೀಯಕ್ಕೆ ತಂದಿದ್ದು, ಜೆಡಿಎಸ್‌ನಿಂದ ಕಾರ್ಪೋರೇಟರ್ ಮಾಡಿಸಿದ್ದು ಜಿಟಿ ದೇವೇಗೌಡ. ಆದರೆ ಜಿಟಿಡಿ ಪಕ್ಷ ಬದಲಾಯಿಸಿದರೂ ಮಾದೇಶ ಪಕ್ಷ ಬದಲಿಸಿಲ್ಲ, ಈತ ತನ್ನ ದುಷ್ಟ ದಂಧೆಗಳನ್ನು ಮುಂದುವರೆಸಿಕೊಂಡು ಹೋಗಲು ಮಾಜಿ ಸಿಎಂ ಕುಮಾರಸ್ವಾಮಿಯವರನ್ನು ಹಿಡಿದಿದ್ದಾನೆ. ಮೈಸೂರಿನಲ್ಲಿ ಜೆಡಿಎಸ್‌ಗೆ ಪ್ರಾಬಲ್ಯ ಇಲ್ಲದಿರುವುದರಿಂದ ಇಂತಹ ಪುಂಡರನ್ನ ಮತ್ತು ರೌಡಿಗಳನ್ನ ಆ ಪಕ್ಷ ಬೆಳೆಸುತ್ತಿರುವುದು ನಾಚಿಕೆಗೇಡಿತನದ್ದು.

ಇಷ್ಟೆ ಅಲ್ಲದೇ ಅವ್ವ ಮಾದೇಶ ಮೈಸೂರಿನ ಚಾಮರಾಜ ಕ್ಷೇತ್ರದಿಂದ ಮುಂದಿನ ಎಮ್ಮೆಲ್ಲೆಯಾಗುವ ಕನಸು ಕಾಣುತ್ತಿದ್ದಾನೆ. ಹಾಲಿ ಶಾಸಕ ಶಂಕರಲಿಂಗೇಗೌಡ ಬಿಜೆಪಿಯಲ್ಲಿ ಮುಂದುವರೆದು ಮುಂದಿನ ಚುನಾವಣೆಗೆ ನಿಂತರೆ ಈತ ಜೆಡಿಎಸ್‌ನಿಂದ ಕ್ಯಾಂಡಿಡೇಟ್ ಆಗುತ್ತಾನಂತೆ. ಇಲ್ಲವೇ ಶಂಕರಲಿಂಗೇಗೌಡರು ಜೆಡಿಎಸ್‌ಗೆ ನೆಗೆದು ನೆಲೆ ಉಳಿಸಿಕೊಳ್ಳುವ ಪ್ರಯತ್ನ ಮಾಡಿದರೆ, ಜಿ.ಟಿ.ದೇವೇಗೌಡರ ಮೂಲಕ ಅವ್ವ ಮಾದೇಶನಿಗೆ ಬಿಜೆಪಿ ಟಿಕೆಟ್ ಗ್ಯಾರಂಟಿಯಂತೆ!



ಇಡೀ ಪ್ರಕರಣವನ್ನು ಒಟ್ಟಾರೆಯಾಗಿ ಅವಲೋಕಿಸಿದರೆ ಪೂಜಾ ಗಾಂಧಿ ಮತ್ತು ಡಾ.ಕಿರಣ್ ನಡುವಿನ ಸ್ನೇಹ ಸಂಬಂಧ ಯಾವ ರೂಪದಲ್ಲಿತ್ತು ಎಂಬುದು ಎಷ್ಟು ನಿಗೂಢವಾಗಿದೆಯೋ ಅಷ್ಟೇ ನಿಗೂಢವಾಗಿ ಅವರ ಸ್ನೇಹ ಈಗ ಮುರಿದು ಬಿದ್ದಿದೆ. ಇವರಿಬ್ಬರು ಮಾಜಿ ಫ್ರೆಂಡ್ಸ್. ಆದರೀಗ ಪರಸ್ಪರ ಆರೋಪ ಮಾಡುತ್ತಾ ಪೊಲೀಸ್ ಕಮೀಷನರ್ ಆಫೀಸು, ಪತ್ರಿಕಾಗೋಷ್ಠಿ, ಕಣ್ಣೀರು, ಕತೆಗಿತೆ ಎಂದೆಲ್ಲ ತಿರುಗಾಡುತ್ತಿದ್ದಾರೆ. ಇವರಿಬ್ಬರೂ ಕಿರುಚಾಡುತ್ತಿರುವುದನ್ನು ನೋಡಿದರೆ ಸದ್ಯಕ್ಕಂತೂ ಇದು ಬಗೆಹರಿಯುವ ಸಮಸ್ಯೆಯಂತೆ ಕಾಣುತ್ತಿಲ್ಲ.



ಡಾ.ಕಿರಣನ ಪೂಜಾ ಪುರಾಣ

ಪೂಜಾ ಗಾಂಧಿ ಈಗ ಯಾವ ಬೇಡಿಕೆಯೂ ಇಲ್ಲದ ನಟಿ. ಡಾಕ್ಟರ್ ಕಿರಣ್ ಎಂಬಾತ ತಾನು ಮಾಡಬೇಕಿದ್ದ ಕೆಲಸವನ್ನು ಹೊರತುಪಡಿಸಿ ಉಳಿದೆಲ್ಲಾ ವಿಷಯಗಳಲ್ಲಿ ತಲೆ ತೂರಿಸುವ ಶೋಕಿಲಾಲ ಗಿರಾಕಿ. ಇವರಿಬ್ಬರು ಮಾಜಿ ಫ್ರೆಂಡ್ಸ್. ಆದರೀಗ ಪರಸ್ಪರ ಆರೋಪ ಮಾಡುತ್ತಾ ಪೊಲೀಸ್ ಕಮೀಷನರ್ ಆಫೀಸು, ಪತ್ರಿಕಾಗೋಷ್ಠಿ, ಕಣ್ಣೀರು, ಕತೆಗಿತೆ ಎಂದೆಲ್ಲ ತಿರುಗಾಡುತ್ತಿದ್ದಾರೆ. ಸದ್ಯ ಯಾವ ಕನ್ನಡ ಚಿತ್ರವೂ ಥಿಯೇಟರ್‌ಗಳಲ್ಲಿ ನೆಟ್ಟಗೆ ಓಡುತ್ತಿಲ್ಲ. ಆದರೆ ಈ 'ಪೂ-ಕಿ' ಕತೆ ಮಾತ್ರ ಹಲವಾರು ಕುತೂಹಲಕಾರಿ ತಿರುವುಗಳನ್ನು ಪಡೆಯುತ್ತಾ ಕನ್ನಡಿಗರಿಗೆ ಭರ್ತಿ ಮನರಂಜನೆ ನೀಡುತ್ತಿದೆ.



ಪೂ-ಕಿ ನಡುವಿನ ಸ್ನೇಹ ಪ್ರಾರಂಭವಾಗಿದ್ದು 'ಮುಂಗಾರು ಮಳೆ' ಚಿತ್ರದ ಸಂದರ್ಭದಲ್ಲಿ. ಕಿರಣ್ 'ಮುಂಗಾರು ಮಳೆ' ಚಿತ್ರದ ನಿರ್ಮಾಪಕ ಇ.ಕೃಷ್ಣಪ್ಪನವರ ಹತ್ತಿರದ ಸಂಬಂಧಿ. ವೃತ್ತಿಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್. ಪಾರ್ಟ್ ಟೈಂ ಸಿನಿಮಾ ಡಿಸ್ಟ್ರಿಬ್ಯೂಟರ್. ಮದುವೆಯಾಗಿದೆ. ಇಂತಹ ವ್ಯಕ್ತಿಯೊಡನೆ ಪೂಜಾಳಿಗೆ ಸ್ನೇಹ ಬೆಳೆದಿದೆ. ಪೂಜಾಳೇ ಹೇಳುವಂತೆ ""ಮುಂಗಾರು ಮಳೆ' ಚಿತ್ರದ ಯಶಸ್ಸಿನ ನಂತರ ನಮ್ಮಿಬ್ಬರ ನಡುವಿನ ಸ್ನೇಹ ಆರಂಭವಾಯಿತು. ಡಾ. ಕಿರಣ್ ದಂಪತಿಗಳು ನಮ್ಮ ಮನೆಗೆ ಬಂದುಹೋಗುವುದು, ನಮ್ಮ ಕುಟುಂಬ ಅವರ ಮನೆಗೆ ಭೇಟಿ ನೀಡುವುದು ಎಲ್ಲ ನಡೆಯುತ್ತಿತ್ತು."

ಅಷ್ಟಾಗಿದ್ದರೆ ಪರವಾಗಿರಲಿಲ್ಲ. ಆಗಿನ ಕಾಲದಲ್ಲೇ ಇದೇ ಡಾ. ಕಿರಣ್ ಪೂಜಾಳನ್ನು ಸಿನಿಮಾ ಕಾರ್ಯಕ್ರಮಗಳಿಗೆ ಕರೆದುಕೊಂಡು ಬರುತ್ತಿದ್ದದ್ದನ್ನು ಜನ ಗಮನಿಸಿದ್ದರು. ಇವರಿಬ್ಬರ ನಡುವೆ ಅದೆಂತಹದ್ದೋ ಲವ್-ಡವ್ ನಡೆಯುತ್ತಿರಬೇಕು ಎಂದು ಎಲ್ಲರೂ ತರ್ಕಿಸುವಷ್ಟರ ಮಟ್ಟಿಗೆ ಇವರು ಅನ್ಯೋನ್ಯವಾಗಿದ್ದರು. ಆದರೆ ಇತ್ತೀಚೆಗೆ ಒಂದು ವರ್ಷದಿಂದ ಇವರಿಬ್ಬರ ನಡುವಿನ ಸಂಬಂಧ ಯಾವುದ್ಯಾವುದೋ ಕ್ಷುಲ್ಲಕ ಕಾರಣಕ್ಕೆ ಹಳಸಲು ಆರಂಭವಾಯಿತು. ಸ್ವತಃ ಪೂಜಾಗಾಂಧಿ "ಒಂದು ದಿನ ಅವರ ಕಾಲೇಜಿನ ಸಮಾರಂಭಕ್ಕೆ ಅತಿಥಿಯಾಗಿ ನನ್ನನ್ನು ಕರೆದರು. ನನಗೆ ಶೂಟಿಂಗ್ ಇದ್ದಿದ್ದರಿಂದ ಬರಕ್ಯಾಗಲ್ಲ ಎಂದೆ. ಅಷ್ಟಕ್ಕೆ ಆತ ನನ್ನ ಬಗ್ಗೆ ಕೋಪಗೊಂಡ. ಆಗಲೇ ನನ್ನ ತಾಯಿ ಇವನಿಂದ ದೂರ ಇರು ಎಂದರು" ಎಂದು ಹೇಳುತ್ತಿದ್ದಾಳೆ.

ಅಷ್ಟೇ ಅಲ್ಲ, ಕಿರಣ್ ತನಗೆ ಕೆಟ್ಟಕೆಟ್ಟ ಎಸ್‌ಎಂಎಸ್‌ಗಳನ್ನು ಕಳುಹಿಸುತ್ತಿದ್ದಾನೆಂದೂ, ತನ್ನ ಜೀವಕ್ಕೆ ಬೆದರಿಕೆ ಹಾಕುತ್ತಿದ್ದಾನೆಂದೂ, ತನಗೆ ಆತನಿಂದ ರಕ್ಷಣೆ ಕೊಡಬೇಕೆಂದೂ ಪೂಜಾ ಪೊಲೀಸರಿಗೆ ದೂರಿದ್ದಾಳೆ.

ಆದರೆ ಕಿರಣ್ ಸುಮ್ಮನೆ ಕೂತಿಲ್ಲ. "ಕತ್ರಿಗುಪ್ಪೆಯಲ್ಲಿ ಪೂಜಾ ಗಾಂಧಿಗೆ 80 ಲಕ್ಷದ ಮನೆ ಕೊಡಿಸಿದ್ದು ನಾನೇ. ಆಕೆ ಓಡಾಡೋ ರೆಡ್ ಕಲರ್ ಇನೋವಾ ಕಾರು ಕೂಡಾ ನನ್ನದೇ. ಪೂಜಾ ಬಳಸುವ ಐ ಫೋನ್, ಮೊಬೈಲ್ ಎಲ್ಲವನ್ನೂ ನಾನೇ ನೀಡಿದ್ದೇನೆ. ಆಕೆಯ ತಂಗಿಗೆ ದಯಾನಂದ ಸಾಗರ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಸೀಟು ಕೊಡಿಸಿದ್ದೇನೆ. ಆಕೆಯ ತಂದೆಗೆ ಟ್ರಾವೆಲ್ ಏಜೆನ್ಸಿ ಹಾಕಿಕೊಟ್ಟಿದ್ದೇನೆ" ಎಂದೆಲ್ಲ ಹೇಳುತ್ತಿದ್ದಾನೆ.

ಪೂಜಾ ಗಾಂಧಿಗೆ ಮನೆ, ಕಾರುಗಳನ್ನು ಕೊಡಿಸುವಂಥಾ ದರ್ದು ಕಿರಣ್‌ಗೆ ಏನಿತ್ತು ಎಂಬುದೇ ಕುತೂಹಲಕಾರಿಯಾಗಿದೆ...

ಯಾರು ಈ ಡಾಕ್ಟರ್ ಕಿ...ಕಿ..ಕಿರಣ್?

ಬನಶಂಕರಿ ಕಾಂಪ್ಲೆಕ್ಸ್ ಹತ್ತಿರ ಇರುವ ಕಿಮ್ಸ್ ವೈದ್ಯಕೀಯ ವಿದ್ಯಾಲಯದಲ್ಲಿ ಈತ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದರೂ ಈ ಕಿರಣ್‌ಗೂ ಕನ್ನಡ ಚಿತ್ರರಂಗಕ್ಕೂ ಅದೆಂಥದ್ದೋ ವಿಲಕ್ಷಣ ಸಂಬಂಧ. ತಾನು ಕೆಲಸ ಮಾಡುತ್ತಿರುವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುವ ಬದಲು ಈತ ಸಿನಿಮಾ ನಟಿಯರೊಂದಿಗೆ ಲಲ್ಲೆ ಹೊಡೆಯುವುದೇ ಹೆಚ್ಚು.

ಕಾಲೇಜಿಗೆ ಬೆಳಗ್ಗೆಯೇ ಹೋಗಿ ಅಟೆಂಡೆನ್ಸ್ ಹಾಕಿ, ಕ್ಯಾಂಪಸ್ಸಿನ ತುಂಬ ಸಣ್ಣದೊಂದು ಪರೇಡು ಮಾಡಿ ಬಂದನೆಂದರೆ ಮುಗಿಯಿತು ಮತ್ತೆ ಕಾಲೇಜಿನತ್ತ ಮುಖಮಾಡುವುದಿಲ್ಲ. ಕಾಲೇಜಿನಿಂದ ಹೊರಬಂದವನೇ ಕಾರು ಹತ್ತಿ ಕಾಫಿ ಡೇ, ಬರಿಸ್ತಾಗಳಲ್ಲಿ ಅಡ್ಡೆಹಾಕುತ್ತಾನೆ. ಈತನೊಂದಿಗೆ ಯು2 ನಿರೂಪಕ ಅಖಿಲೇಶ ಮತ್ತಾತನ ಗ್ಯಾಂಗ್ ಕೂಡಾ ಇರುತ್ತದೆ. ಹಗಲಿಡೀ ಕಾಲೇಜಿಗೆ ದೋಖಾ ಕೊಟ್ಟು ಸಿನಿಮಾ ಮತ್ತು ಸೀರಿಯಲ್ ಮಂದಿಯೊಂದಿಗೆ ಅಲೆಯುವ ಕಿರಣ್ ಪಕ್ಕಾ ಶೋಕಿಲಾಲಾ.



ಕಿರಣ್

ಇತ್ತೀಚೆಗಷ್ಟೇ ಬಂದು ತೋಪೆದ್ದುಹೋದ ಪೂಜಾ ಗಾಂಧಿ ನಟಿಸಿದ್ದ 'ನೀ ಇಲ್ಲದೆ' ಚಿತ್ರವನ್ನು ಕೂಡಾ ಇದೇ ಕಿರಣ್ ಪಾಲುದಾರಿಕೆಯಲ್ಲಿ ನಿರ್ಮಿಸಿದ್ದ. ಕಿರಣ್ ಪೂರ್ಣಪ್ರಮಾಣದ ನಿರ್ಮಾಪಕನಾಗಿ ಅಂಥ ಯಾವ ಚಿತ್ರವನ್ನೂ ನಿರ್ಮಿಸಿಲ್ಲ. ಬದಲಿಗೆ 'ಸಂಜು ವೆಡ್ಸ್ ಗೀತಾ' ಸೇರಿದಂತೆ ಬಹಳಷ್ಟು ಸಿನಿಮಾಗಳಿಗೆ ಫೈನಾನ್ಸ್ ಮಾಡಿದ್ದಾನೆ. ಪೂಜಾ ಗಾಂಧಿ ನಟಿಸಿರುವ ಎಷ್ಟೋ ಸಿನಿಮಾಗಳಿಗೆ ಕಿರಣ್ ಸಾಲ ನೀಡಿದ್ದಾನೆ. ಮೊದಲೇ ಸ್ಯಾಟಲೈಟ್ ಹಕ್ಕುಗಳನ್ನು ಬರೆಸಿಕೊಂಡಿರುತ್ತಾನೆ.

ಪುನೀತ್ ಅಭಿನಯಿಸಿದ್ದ 'ರಾಜ್' ಚಿತ್ರವನ್ನು ಓವರ್‌ಸೀಸ್‌ನಲ್ಲಿ ರಿಲೀಸ್ ಮಾಡುತ್ತೇನೆ ಎಂದು ಒಪ್ಪಿಕೊಂಡಿದ್ದ ಕಿರಣ್ ಕಡೇ ಗಳಿಗೆಯಲ್ಲಿ ಕೈಕೊಟ್ಟುಬಿಟ್ಟಿದ್ದ. ಇದು ದೊಡ್ಡ ವಿವಾದವಾಗಿತ್ತು. ಆಗಲೇ ಈ ಕಿರಣ್ ಎಂಬ ವೈದ್ಯನ ಮುಖ ಗಾಂಧಿನಗರಕ್ಕೆ ಗೊತ್ತಾಗಿದ್ದು.

ಏನಂತಾಳೆ ಪೂಜಾ?

ಡಾ. ಕಿರಣ್ ನಿಮಗೆ ಇನೋವಾ ಕಾರನ್ನು ಗಿಫ್ಟ್ ಮಾಡಿದ್ದು ನಿಜವೇ ಎಂದು ಕೇಳಿದರೆ "ಅದು ಸುಳ್ಳು. ಕಿರಣ್‌ನಿಂದ ಕಾರು ಪಡೆಯುವ ದರಿದ್ರ ನನಗೇನೂ ಬಂದಿಲ್ಲ. ಅವನು ನನ್ನ ಹಳೇ ಫ್ರೆಂಡ್ ನಿಜ. ಆದರೆ ಅವನ ನಡವಳಿಕೆ ಸರಿ ಇಲ್ಲ ಅನ್ನೋ ಕಾರಣಕ್ಕೆ ನಾನು ಆತನನ್ನು ದೂರವಿಟ್ಟಿದ್ದೇನೆ" ಎಂದ ಪೂಜಾ ತನ್ನ ತಂದೆ ಪವನ್‌ಕುಮಾರ್ ಗಾಂಧಿ ಹೆಸರಿನಲ್ಲಿರುವ ಕಾರಿನ ದಾಖಲೆ ಪತ್ರಗಳನ್ನು ತೋರಿಸಿದಳು.


ನಿಮ್ಮ ತಂದೆಯ ಟ್ರಾವಲ್ಸ್ ಏಜನ್ಸಿಯಲ್ಲಿ ಕಿರಣ್‌ನ ಪಾಲಿದೆಯಂತೆ ನಿಜವೇ ಎಂಬ ಪ್ರಶ್ನೆಗೆ "ಅದು ಕೂಡ ಕಿರಣ್ ಹೇಳುತ್ತಿರುವ ಮತ್ತೊಂದು ಸುಳ್ಳು. ಈ ಟ್ರಾವಲ್ಸ್ ಏಜೆನ್ಸಿಯ ದಾಖಲೆ ಪತ್ರಗಳು ನನ್ನ ತಂದೆಯ ಹೆಸರಿನಲ್ಲಿವೆ ನೋಡಿ" ಎಂದು ಆ ದಾಖಲೆಗಳನ್ನೂ ತೋರಿಸಿದಳು.


"ಈ ಟ್ರಾವಲ್ಸ್ ಏಜನ್ಸಿಯ ಹೆಸರು ಪಿ.ಕೆ. ಆದರರ್ಥ ಪೂಜಾ ಮತ್ತು ಕಿರಣ್ ಎಂದು ಡಾ.ಕಿರಣ್ ಎಲ್ಲರ ಹತ್ತಿರ ಹೇಳುತ್ತಿದ್ದಾನೆ. ಆದರೆ ಪಿ.ಕೆ. ಅಂದರೆ ನನ್ನ ತಂದೆ ಪವನ್‌ಕುಮಾರ್" ಎಂದೂ ಪೂಜಾ ಹೇಳಿದಳು.

ಒಟ್ಟಾರೆಯಾಗಿ ಇಡೀ ಪ್ರಕರಣವನ್ನು ಅವಲೋಕಿಸಿದರೆ ಪೂಜಾ ಗಾಂಧಿ ಮತ್ತು ಡಾ.ಕಿರಣ್ ನಡುವಿನ ಸ್ನೇಹ ಸಂಬಂಧ ಯಾವ ರೂಪದಲ್ಲಿತ್ತು ಎಂಬುದು ಎಷ್ಟು ನಿಗೂಢವಾಗಿದೆಯೋ ಅಷ್ಟೇ ನಿಗೂಢವಾಗಿ ಅವರ ಸ್ನೇಹ ಈಗ ಮುರಿದು ಬಿದ್ದಿದೆ.

ಇವರಿಬ್ಬರೂ ಕಿರುಚಾಡುತ್ತಿರುವುದನ್ನು ನೋಡಿದರೆ ಸದ್ಯಕ್ಕಂತೂ ಇದು ಬಗೆಹರಿಯುವ ಸಮಸ್ಯೆಯಂತೆ ಕಾಣುತ್ತಿಲ್ಲ. ಚಾಲಾಕಿ ವೈದ್ಯ ಕಿರಣ್, ನಟನೆ ಹೊರತುಪಡಿಸಿ ಅನೇಕ ವ್ಯವಹಾರಗಳನ್ನು ನಡೆಸಿಕೊಂಡು ಬರುತ್ತಿರುವ ಪೂಜಾ ಗಾಂಧಿ ಇಬ್ಬರೂ ಸೇರಿ ಹೊಸದೊಂದು ಮೆಗಾ ಸೀರಿಯಲ್ ಶುರು ಹಚ್ಚಿಕೊಂಡಿದ್ದಾರೆ. ಇದೆಲ್ಲಾ ಯಾವಾಗ ವೈಂಡ್ ಅಪ್ ಆಗುತ್ತೋ ಗೊತ್ತಿಲ್ಲ.

• ವರದಿಗಾರ





ರೆಡ್ಡಿಗಳನ್ನು ಬೆಳೆಸಿದ್ದು ನಾನಲ್ಲ ಅನ್ನುತ್ತಿದ್ದಾರೆ ಸುಷ್ಮಾ. ಆದರೆ ಈ ಫೋಟೋಗಳು ಅವರ ನಡುವಿನ ವ್ಯವಹಾರಕ್ಕೆ ಸಾಕ್ಷಿಯಾಗಿವೆ...

ಅಮ್ಮ-ಗುಮ್ಮ

ಬಿಜೆಪಿಯ ಅಧಿನಾಯಕಿ ಸುಷ್ಮಾ ಸ್ವರಾಜ್ ತಾನು 'ಹೆತ್ತ' ಮಕ್ಕಳನ್ನೇ ತನ್ನ ಮಕ್ಕಳಲ್ಲ ಎಂದಿರುವುದರ ಹಿಂದೆ ಒಂದು ಡಜನ್ ಕಾರಣಗಳಿವೆ.

ಪಾಪ ಆಕೆಗೆ ಕನಿಮೋಳಿ, ಎ. ರಾಜಾ ತರದ ದೊಡ್ಡ ಲೀಡರ್‌ಗಳೇ ತಿಹಾರ್ ಜೈಲು ಸೇರುವಂತಾದ ಘಟನೆಗಳು ದುಃಸ್ವಪ್ನದಂತೆ ಕಾಡುತ್ತಿರುವಂತಿದೆ.

ಕಳೆದ ಹನ್ನೆರಡು ವರ್ಷಗಳಿಂದ ತನ್ನ ಸಾಕು ಮಕ್ಕಳಾದ ರೆಡ್ಡಿಗಳಿಗೆ ಹಾಲು-ಹಾರ್ಲಿಕ್ಸ್ ಕುಡಿಸಿಕೊಂಡು ಬಂದಿದ್ದ ಸುಷ್ಮಾಗೆ ಈಗ ಅದೇ ಮಕ್ಕಳು ಹಾಲಾಹಲವಾಗಿ ಬದಲಾಗುವ ಸನ್ನಿವೇಶ ಬಂದಿರುವುದು ಗೊತ್ತಾಗಿ ಹೋಗಿದೆ. ಆ ಹಾಲಾಹಲವನ್ನು ತಾನೇ ಕುಡಿಯಬೇಕಲ್ಲಾ ಎನ್ನುವ ಸಂಕಟದಿಂದ ಹಾಗೂ ರಾಜಕೀಯ ಹುಷಾರಿತನದಿಂದ ಸುಷ್ಮಾ ಈಗ 'ರೆಡ್ಡಿಗಳು ನನ್ನ ಮಕ್ಕಳಲ್ಲ, ನಾನವರ ಅಮ್ಮನೂ ಅಲ್ಲ' ಎನ್ನುತ್ತಿದ್ದಾರೆ.

ಇದರ ಹಿನ್ನೆಲೆಯಲ್ಲಿ ಅನೇಕರಿದ್ದಾರೆ. ನೀವು ನಂಬುವುದಾದರೆ ಈಗ್ಗೆ ಎರಡು ವರ್ಷಗಳ ಹಿಂದೆ ಮುಖ್ಯಮಂತ್ರಿ ಯಡಿಯೂರಪ್ಪ ತೆಗೆದುಕೊಂಡ ಆಡಳಿತಾತ್ಮಕ ತೀರ್ಮಾನವು ಇವತ್ತಲ್ಲ ನಾಳೆ ರೆಡ್ಡಿಗಳನ್ನು ಜೈಲಿಗೆ ತಳ್ಳಲಿದೆ. ಮತ್ತದು ಸುಷ್ಮಾಗೂ ಅರ್ಥವಾಗಿದೆ. ಹಾಗಾಗಿ ರೆಡ್ಡಿಗಳೀಗ ಯಾರಿಗೂ ಬೇಡವಾದ ಮಕ್ಕಳಾಗಿದ್ದಾರೆ.

ಬರುತ್ತಿವೆ ಸಿಬಿಐ-ಸಿಇಸಿ ಲೋಕಾಯುಕ್ತ ತನಿಖಾ ವರದಿ

ಕಳೆದೊಂದು ತಿಂಗಳಿಂದ ಯಡ್ಡಿಯ ಗೋಳುಗಳಲ್ಲೇ ಮುಳುಗಿಹೋಗಿದ್ದ ಮೀಡಿಯಾಗಳ ಹಾಗೂ ಜನಸಾಮಾನ್ಯರ ನಜರಿಗೆ ಬೀಳದಂತೆ ಕೆಲವು ಮಹತ್ವದ ಬೆಳವಣಿಗೆಗಳಾಗಿವೆ.

ಅದು ರೆಡ್ಡಿಗಳ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ್ದು.

ಈ ಕಳ್ಳರ ಅಕ್ರಮ ವಹಿವಾಟಿನ ಬಗ್ಗೆ ಈಗ ಏಕಕಾಲದಲ್ಲಿ ಮೂರು ರೀತಿಯ ತನಿಖೆಗಳಾಗುತ್ತಿವೆ. ಒಂದು ಕರ್ನಾಟಕ ಲೋಕಾಯುಕ್ತರದ್ದು. ಇನ್ನೊಂದು ಸುಪ್ರೀಂ ಕೋರ್ಟ್ ಖುದ್ದಾಗಿ ನೇಮಿಸಿರುವ ಸೆಂಟ್ರಲ್ ಎಂಪವರ್ಡ್ ಕಮಿಟಿಯದ್ದು. ಇನ್ನೊಂದು ಸಿಬಿಐ ತನಿಖೆ.

ಇವುಗಳ ಪೈಕಿ ತಕ್ಷಣದಲ್ಲಿ ರೆಡ್ಡಿಗಳಿಗೆ ಅತೀ ಭಯ ಹುಟ್ಟಿಸಿರುವುದು ಸಿಬಿಐ ತನಿಖೆ.

ನೆರೆಯ ಆಂಧ್ರ ಸರ್ಕಾರದ ಕೋರಿಕೆಯ ಮೇರೆಗೆ ರೆಡ್ಡಿಗಳ ಅಕ್ರಮ ಗಣಿಗಾರಿಕೆಯ ಬಗ್ಗೆ ತನಿಖೆ ನಡೆಸುತ್ತಿರುವ ಸಿಬಿಐ ಈಗ ತಾನೆ ತನಿಖೆಯ ನಿರ್ಣಾಯಕ ಹಂತಕ್ಕೆ ಬಂದು ತಲುಪಿದೆ. ಈಗ್ಗೆ ಹದಿನೈದು ದಿನಗಳ ಹಿಂದೆ ರೆಡ್ಡಿಗಳ ಅಕ್ರಮಗಳ ಬಗ್ಗೆ ಚೆನ್ನಾಗಿ ತಿಳಿದಿರುವ ಆಂಜನೇಯ ಎಂಬುವರ ಸಾಕ್ಷಿ ಹೇಳಿಕೆಗಳನ್ನು ಕೋರ್ಟ್‌ನಲ್ಲೇ ಸಿಬಿಐ ದಾಖಲಿಸಿಕೊಂಡಿದೆ. ಬಹುತೇಕ ಆಂಜನೇಯನ ಹೇಳಿಕೆ ಹಾಗೂ ಸಾಕ್ಷದ ಆಧಾರದಲ್ಲೇ ಜನಾರ್ದನ ರೆಡ್ಡಿಯನ್ನು ಹೆಚ್ಚಿನ ವಿಚಾರಣೆಗಾಗಿ ತನ್ನ ಸ್ವಾಧೀನಕ್ಕೆ ಕೊಡುವಂತೆ ಸಿಬಿಐ ಕೋರ್ಟ್‌ನಲ್ಲಿ ಮನವಿ ಸಲ್ಲಿಸುವ ಛಾನ್ಸ್ ಕಂಡುಬರುತ್ತಿದೆ.

ಸಿಂಪಲ್ಲಾಗಿ ಹೇಳಬೇಕೆಂದರೆ ಇದು ಅರೆಸ್ಟ್ ಮಾಡಲು ನಡೆಸುವ ಕೆಲಸ. 2ಜಿ ಸ್ಪೆಕ್ಟ್ರಂ ಕೇಸಿನಲ್ಲಿ ಕನಿಮೋಳಿಯನ್ನು ಹಿಡಿದು ಈಗ ಜೈಲಿಗೆ ತಳ್ಳಿರುವಂತೆಯೇ ಜನಾರ್ದನ ರೆಡ್ಡಿಯನ್ನು ಸಿಬಿಐ ಜೈಲಿಗೆ ತಳ್ಳಲು ಸಂಪೂರ್ಣವಾಗಿ ಸಜ್ಜಾಗುತ್ತಿದೆ.

ಈ ವಿಚಾರ ರೆಡ್ಡಿ-ಯಡ್ಡಿಗಳಿಬ್ಬರಿಗೂ ಗೊತ್ತಾಗಿದೆ. ಸುಷ್ಮಾ ಸ್ವರಾಜ್‌ಗೂ ಪರಿಸ್ಥಿತಿ ಗಂಭೀರ ಎಂಬುದು ಅರ್ಥವಾಗಿದೆ.

ಸಿಬಿಐನ ಖಡಕ್ ತನಿಖಾ ವೈಖರಿ

ಕಳೆದ ಮೇ ತಿಂಗಳಲ್ಲಿ ಹೈದರಾಬಾದ್‌ಗೆ ಹೋಗಿ ಸಿಬಿಐಗೆ ಸಾಕ್ಷ್ಯ ನೀಡಿ ಬಂದಿರುವವರು ಹಾಗೂ ಸ್ಥಳದಲ್ಲಿದ್ದ ಕೆಲವರು 'ಲಂಕೇಶ್'ಗೆ ಹೇಳಿದ ಪ್ರಕಾರ ಸಿಬಿಐನ ತನಿಖೆ ಖಡಕ್ಕಾಗಿದೆ. ಒಂದೆರಡು ಹಳೆಯ ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನೇ ಇಲ್ಲಿ ನೆನಪಿಸಿಕೊಳ್ಳುವುದಾದರೆ ಕರ್ನಾಟಕ ಆಂಧ್ರ ಗಡಿಯ ಮಲಪನಗಡಿ ಏರಿಯಾದಲ್ಲಿ ರೆಡ್ಡಿಗಳು ನಡೆಸಿದ ಗಣಿಗಾರಿಕೆ ಹಾಗೂ ಅದಿರು ರಫ್ತು ಮಾಡಿರುವುದೇ ಅವರ ಕುತ್ತಿಗೆಗೆ ಈಗ ಉರುಳಾಗಿದೆ.

ಕುಂತ್ರೆ ನಿಂತ್ರೆ ಅಮ್ಮನ ಧ್ಯಾನ ಸುಷ್ಮಾಗಿಲ್ಲ ಸಮಾಧಾನ

ಏಕೆಂದರೆ ಇಂಡಿಯನ್ ಬ್ಯೂರೋ ಆಫ್ ಮೈನ್ಸ್‌ನ ವರದಿಗಳು ಈ ಏರಿಯಾದಲ್ಲಿ ಸಿಗುವ ಅದಿರು 35 ಗ್ರೇಡ್‌ಗಿಂತ ಜಾಸ್ತಿ ಇಲ್ಲ ಎಂದು ಧೃಢೀಕರಿಸಿದೆ. ಆದರೆ ಜನಾರ್ದನ್ ರೆಡ್ಡಿ ರಫ್ತು ಮಾಡಿರುವ ಲಕ್ಷಾಂತರ ಟನ್ ಅದಿರು 63 ಗ್ರೇಡ್‌ನದ್ದು ಎಂಬುದಕ್ಕೆ ಪ್ರತಿ ಹಂತದಲ್ಲೂ ದಾಖಲೆಗಳು ಸಿಬಿಐಗೆ ಸಿಕ್ಕಿವೆ.

ಹಾಗಾದರೆ ಈ 63 ಗ್ರೇಡ್‌ನ ಅದಿರು ರೆಡ್ಡಿಗೆ ಎಲ್ಲಿಂದ ಬಂತು ಎನ್ನುವ ಪ್ರಶ್ನೆ ಉದ್ಭವಿಸುತ್ತದಲ್ಲವೆ?

ಅಕ್ರಮ ಗಣಿಗಾರಿಕೆಯ ವಿಷಯ ಮುಂದಕ್ಕೆ ಬರುವುದೇ ಹೀಗೆ. ಈ ರೆಡ್ಡಿಗಳು ಸುಗ್ಗಲಮ್ಮನ ದೇವಸ್ಥಾನ ಕೆಡವಿದ್ದು, ಟಪಲ್ ಗಣೇಶ್‌ರಿಗೆ ಮಂಜೂರಾಗಿದ್ದ ಪ್ರದೇಶದೊಳಗೆ ನುಗ್ಗಿ ಗೂಂಡಾಗಿರಿ ನಡೆಸಿ ಅದಿರು ದೋಚಿದ್ದೆಲ್ಲಾ ಈಗ ಸಾಬೀತಾಗುತ್ತಿದೆ.

ಬಹಳ ಮುಖ್ಯವಾಗಿ ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪನಿಯಲ್ಲೇ ಕೆಲಸ ಮಾಡುತ್ತಿದ್ದ ಇಂಜಿನಿಯರ್ ಕೋಲಾರದ ಆಂಜನೇಯ ಎಂಬುವರು ಸಿಬಿಐ ಕೋರ್ಟ್‌ನಲ್ಲಿ ಹಾಜರಾಗಿ ರೆಡ್ಡಿಗಳ ಎಲ್ಲಾ ಅಕ್ರಮ ಗಣಿಗಾರಿಕೆಯ ಬಗ್ಗೆ ಸಾಕ್ಷಿ ಹೇಳಿದ್ದಾರೆ. ಜೊತೆಗೆ ಸಿಬಿಐನವರು ಈ ಬಾರಿ ಗಣಿ ಪ್ರದೇಶಗಳ ಉಪಗ್ರಹ ಚಿತ್ರಗಳನ್ನು ತನಿಖೆಗಾಗಿ ಬಳಸಿದ್ದು ಇದೊಂದು ಅಪರೂಪದ ಪ್ರಕರಣವಾಗಲಿದೆ.



ರೆಡ್ಡಿಗಳ ತಿಕ್ಕಲು ಖಯಾಲಿ ಚಿನ್ನದ ಕುರ್ಚಿ-ತಟ್ಟೆ-ಚಮಚ

ಇದು ಬಳ್ಳಾರಿ ರೆಡ್ಡಿ ಸೋದರರ ವಿಚಿತ್ರ ಖಯಾಲಿಯ ಕತೆ.

ಚಿನ್ನದ ವ್ಯಾಮೋಹ ಅದು. ಕರ್ನಾಟಕ ಲೋಕಾಯುಕ್ತರಿಗೆ ಸಲ್ಲಿಸಿರುವ 2009-10ನೇ ಸಾಲಿನ ಆಸ್ತಿ ವಿವರಗಳು. ಇವರ ಚಿನ್ನದ ಮೇಲಿನ ಮೋಹ ಯಾವ ಲೆವೆಲ್‌ನಲ್ಲಿದೆಯೆಂಬುದನ್ನು ತೆರೆದಿಟ್ಟಿದೆ. ಅದನ್ನೇ ಆಧರಿಸಿ ಹೇಳುವುದಾದರೆ ರೆಡ್ಡಿ ಸೋದರರ ಪೈಕಿ ಚಾಣಕ್ಯನಂತಿರುವ ಜನಾರ್ದನ ರೆಡ್ಡಿ ಕೂರಲು ಒಂದು ಚಿನ್ನದ ಕುರ್ಚಿಯನ್ನೇ ಮಾಡಿಸಿಟ್ಟುಕೊಂಡಿದ್ದಾನೆ!

ಎರಡೂ ಕಾಲು ಕೋಟಿ ರೂಪಾಯಿ ಖರ್ಚು ಮಾಡಿ ಈ ಗೋಲ್ಡನ ಚೇರ್ ಮಾಡಿಸಿಕೊಂಡಿದ್ದಾನೆ ರೆಡ್ಡಿ. ದಿನಬೆಳಗಾದರೆ ಬಳ್ಳಾರಿಯ ಬಡವರ ಬಗ್ಗೆ ಕಣ್ಣೀರು ಸುರಿಸುವ ರೆಡ್ಡಿಗಳಿಗೆ ಚಿನ್ನದ ಕುರ್ಚಿ ಮೇಲೆ ಕೂರುವ ಖಯಾಲಿ ಯಾವಾಗಿನಿಂದ ಶುರುವಾಯಿತೋ ಗೊತ್ತಿಲ್ಲ, ಆದರೆ ಅವನ ಹತ್ತಿರ ಚಿನ್ನದ ಕುರ್ಚಿ ಇರುವುದು ದಿಟ ಎನ್ನುತ್ತಿದೆ ಲೋಕಾಯುಕ್ತರ ವರದಿ. ರೆಡ್ಡಿ ವಿಧಾನಸೌಧದ ತನ್ನ ಆಫೀಸಿಗೂ ಚಿನ್ನದ ಕುರ್ಚಿ ಬೇಕೆಂದು ಡಿಮ್ಯಾಂಡ್ ಮಾಡಿಲ್ಲ, ಅದೇ ಪುಣ್ಯ.

ಸರಿಸುಮಾರು ಹನ್ನೊಂದು ಕೆಜಿಯಷ್ಟು ಚಿನ್ನ ಬಳಸಿ ಈ ಕುರ್ಚಿ ತಯಾರಿಸಲಾಗಿದೆ. ಜನಾರ್ದನ ರೆಡ್ಡಿಯ ಚಿನ್ನದ ಖಯಾಲಿ ಇಷ್ಟಕ್ಕೇ ಮುಗಿಯುವುದಿಲ್ಲ, ಈ ರೆಡ್ಡಿ ಮನೆಯೊಳಗೆ ದಿನ ಪೂಜೆ ಮಾಡುವ ದೇವರ ಮೂರ್ತಿಗಳನ್ನೂ ಚಿನ್ನದಲ್ಲೇ ಮಾಡಿಸಿಕೊಂಡಿದ್ದಾನೆ. ಅವುಗಳ ಬೆಲೆಯೂ ಎರಡೂವರೆ ಕೋಟಿ ರೂ. ಅಂದರೆ ಹೆಚ್ಚು ಕಡಿಮೆ ಹದಿನೈದು ಕೆ.ಜಿ. ತೂಕದ ಚಿನ್ನದ ಪ್ರತಿಮೆಗಳವು.

ತಮಾಷೆ ಅಂದರೆ ರೆಡ್ಡಿ ಸೊಂಟಕ್ಕೆ ಸುತ್ತಿಕೊಳ್ಳುವ ಬೆಲ್ಟಿನ ಬೆಲೆಯೇ 13.15 ಲಕ್ಷ ರೂ.!

ವಿಚಿತ್ರ ತಳಿಯಂತೆ ಕಾಣುವ ರೆಡ್ಡಿ ತನ್ನ ಮನೆಯ ಡೈನಿಂಗ್ ಟೇಬಲ್ ಅನ್ನು ಚಿನ್ನದಿಂದ ತುಂಬಿಕೊಂಡಿದ್ದಾನೆ. ಪಾತ್ರೆಗಳು, ಸ್ಪೂನು, ಫೋರ್ಕ್, ಚಾಕುಗಳೆಲ್ಲಾ ಚಿನ್ನದೇ ಅಂತೆ. ಇವುಗಳ ಅಂದಾಜು ಬೆಲೆ ಇಪ್ಪತ್ತೊಂದು ಲಕ್ಷ ರೂಪಾಯಿಗಳು.

ಇದಲ್ಲದೆ ಚಿನ್ನದ ಬಳೆಗಳು, ಉಂಗುರ, ನೆಕ್ಲೇಸು, ಲಕ್ಷಾಂತರ ರೂ. ಬೆಲೆಯ ಪಚ್ಚೆ ವಜ್ರ, ಬೆಳ್ಳಿಯ ವಸ್ತುಗಳನ್ನು ರೆಡ್ಡಿ ಮನೆಯಲ್ಲಿ ತುಂಬಿಕೊಂಡಿದ್ದಾನೆ.

ತಮಾಷೆ ಅಂದರೆ ಗಂಡಸರು ಹಾಕಿಕೊಳ್ಳಲೆಂದೇ ಅಸಂಖ್ಯ ಒಡವೆಗಳನ್ನೂ ರೆಡ್ಡಿ ಮಾಡಿಸಿಟ್ಟುಕೊಂಡಿದ್ದಾನೆ.

ಇನ್ನು ಸೋಮಶೇಖರ ರೆಡ್ಡಿಯ ವಿಚಾರಕ್ಕೆ ಬಂದರೆ ಆ ಮಹಾಶಯರೂ ಎರಡೂವರೆ ಕೆ.ಜಿ.ಯಷ್ಟು ಚಿನ್ನ ಇಟ್ಟುಕೊಂಡಿದ್ದಾರೆ. ಸೋಮಶೇಖರ ರೆಡ್ಡಿಯ ಹೆಂಡತಿ ವನಜಾಗೂ ಚಿನ್ನದ ಮೇಲೆ ಅಪರಿಮಿತ ವ್ಯಾಮೋಹವಿದೆ.

ಈ ರೆಡ್ಡಿಗಳು ತಮ್ಮ ಖಾಸಗಿ ಬಳಕೆಗೆ ಮಾತ್ರವಲ್ಲದೆ ತಮ್ಮ ಕಸ್ಟಡಿಯಲ್ಲಿರುವ ದೇವರುಗಳಿಗೂ ಚಿನ್ನದ ಮೋಹ ಅಂಟಿಸುವ ಪ್ರಯತ್ನ ಮಾಡುತ್ತಿದ್ದಾರೆ.


ಈಗ್ಗೆ ಎರಡು ವರ್ಷಗಳ ಹಿಂದೆ ತಿರುಪತಿ ವೆಂಕಟೇಶ್ವರನಿಗೆ 45 ಕೋಟಿ ರೂಪಾಯಿ ಬೆಲೆಯ ವಜ್ರದ ಕಿರೀಟವನ್ನೂ ಹಾಗೂ ಪದ್ಮಾವತಿ ದೇವಿಗೆ ಚಿನ್ನದ ಎಳೆಗಳಿಂದ ತಯಾರಿಸಿದ ಸೀರೆಯೊಂದನ್ನು ಗಿಫ್ಟ್ ಆಗಿ ಕೊಟ್ಟಿದ್ದರು. ಆದರೆ ದೇವಸ್ಥಾನದ ತಲೆಬಾಗಿಲಲ್ಲಿ ನಿಂತಿರುವ ಅಲಮೇಲು ಮಂಗಮ್ಮ ದೇವಿಗೆ ಸೀರೆ ಇರಲಿ ಜುಜುಬಿ ಕಾಟನ್ ಸೀರೆಯನ್ನೂ ದಾನವಾಗಿ ಕೊಟ್ಟಿರಲಿಲ್ಲ.

ಈ ಮಧ್ಯೆ ಆಂಧ್ರದ ಕಡಪ ಲೋಕಸಭಾ ಉಪಚುನಾವಣೆಯಲ್ಲಿ ಜಗನ್ ಗೆದ್ದ ಕಾರಣಕ್ಕೆ ಕಾಳಹಸ್ತಿ ದೇವಾಲಯದಲ್ಲಿ ಜ್ಞಾನ ಪ್ರಸೂನಾಂಬಿಕಾ ದೇವಿಗೆ 12 ಕೋಟಿ ರೂಪಾಯಿ ಬೆಲೆಯ ವಜ್ರದ ಕಿರೀಟ ಹಾಕಿ ಬಂದಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ರೆಡಿಮಾಡಿಸಿ ತರಿಸಿರುವ ಹದಿಮೂರು ಕೆ.ಜಿ.ತೂಕದ ಈ ಕಿರೀಟದಲ್ಲಿ ಎಂಟು ನೂರು ವಜ್ರಗಳನ್ನು ಅಳವಡಿಸಿದ್ದಾರೆ. ಇದಲ್ಲದೆ ಅದೇ ದೇವತೆಗೆ ಚಿನ್ನದ ಹಸ್ತ ಪಾದುಕೆಗಳು, ಚಿನ್ನದ ಸೀರೆ, ಚಿನ್ನದ ಜಡೆಗಳನ್ನೂ ದಾನವಾಗಿ ಕೊಟ್ಟಿದ್ದಾರೆ.

ಈ ರೆಡ್ಡಿಗಳ ನಡವಳಿಕೆ ವಿಚಿತ್ರವಾಗಿದೆ. ಕರ್ನಾಟಕದಲ್ಲಿ ರೆಡ್ಡಿಗಳ ಲೆವೆಲ್‌ಗಲ್ಲದಿದ್ದರೂ ಸಾಹುಕಾರರಿಗೇನೂ ಕಡಿಮೆ ಇಲ್ಲ. ಅಂತವರ ಪೈಕಿ ಅನೇಕರು ಮನೆಗಳಲ್ಲಿ ಚಿನ್ನದ ತಟ್ಟೆ, ಬೆಳ್ಳಿ, ಚೊಂಬು, ಚಮಚ ಇರಲೂಬಹುದು. ಬೀದರಿನ ಪಾಳೇಗಾರ ರಾಜಕಾರಣಿ ಗುರುಪಾದಪ್ಪ ನಾಗಮಾರಪಲ್ಲಿ ತನ್ನ ಮನೆಯಲ್ಲಿರುವ ಉಯ್ಯಾಲೆಗೂ ಬೆಳ್ಳಿಯ ಸರಪಣಿ ಹಾಕಿಸಿಕೊಂಡಿದ್ದ ಕೆಲವು ಉದಾಹರಣೆ ಬಿಟ್ಟರೆ ಉಳಿದವರದ್ದೆಲ್ಲ ಬರೀ ಚಿನ್ನದ ಚೈನು, ಬ್ರೇಸ್‌ಲೆಟ್ ಲೆವೆಲ್‌ನ ಶೋಕಿಗಳಷ್ಟೇ ಆಗಿರುತ್ತಿದ್ದವು. ಆದರೆ ಚಿನ್ನದ ಕುರ್ಚಿಯನ್ನೇ ಮಾಡಿಸಿ ಕೂರುವ ಚಟ್ಟಿ ಶೋಕಿ ನಮ್ಮ ಯಾವ ರಾಜಕಾರಣಿಗಳಿಗೂ ಇರಲಿಲ್ಲ ಬಿಡಿ.

ತಮ್ಮ ತಿಕ್ಕಲುತನಗಳನ್ನು ನೋಡಿ ಜನಸಾಮಾನ್ಯರು ಏನು ತಿಳಿಯಬಹುದೆಂಬ ನೆದರೂ ಈ ಅವಿವೇಕಿಗಳಿಗಿಲ್ಲದಿರುವುದು ನಿಜಕ್ಕೂ ಆಶ್ಚರ್ಯ ಹುಟ್ಟಿಸುವಂತಿದೆ.



ಈಗ ಸಿಬಿಐ ಏನು ಮಾಡಬೇಕು?

ಜನಾರ್ದನ ರೆಡ್ಡಿಯನ್ನು ಹೆಚ್ಚಿನ ತನಿಖೆಗಾಗಿ ಬಂಧಿಸಬೇಕು! ಇದು ಈ ಜೂನ್ ಅಥವಾ ಮುಂದಿನ ಜುಲೈ ಒಳಗಾಗಿ ಸಂಭವಿಸಲಿರುವ ವಿದ್ಯಮಾನ.

ಈಗ ಹೇಳಿ ಸುಷ್ಮಮ್ಮ ಯಾವ ಮುಖ ಹೊತ್ತು ರೆಡ್ಡಿಗಳ ನೆಂಟಸ್ತಿಕೆ ಮಾಡುತ್ತಾರೆ?

ಲೋಕಾಯುಕ್ತರೂ ರೆಡಿ

ಇನ್ನೊಂದು ವಾರದಲ್ಲಿ ಬಾಂಬ್‌ನಂತೆ ಸ್ಫೋಟಗೊಳ್ಳಲಿರುವ ಲೋಕಾಯುಕ್ತರ ವರದಿಯ ಬಗ್ಗೆ ಈಗಾಗಲೇ ರಾಜ್ಯ ಬಿಜೆಪಿ ಕ್ಯಾಂಪ್‌ನಲ್ಲಿ ಕಂಪನಗಳೇಳುತ್ತಿವೆ. ಇದರ ಜೊತೆಗೆ ಸುಪ್ರೀಂಕೋರ್ಟ್ ನೇಮಿಸಿರುವ ಸಿಇಸಿ ಕೂಡ ತನ್ನ ಸರ್ವೆ ಕಾರ್ಯ ನಡೆಸುತ್ತಿದೆ.

ಇಲ್ಲಿ ಗಮನಿಸಬೇಕಾದ ವಿಚಾರ ಏನೆಂದರೆ ಲೋಕಾಯುಕ್ತ ಹಾಗೂ ಗಡಿ ಸರ್ವೆ ಕೆಲಸಗಳಿಗೆ ಪ್ರಚೋದನೆ ನೀಡಿದ್ದೇ ಯಡಿಯೂರಪ್ಪ.

2009ರ ವಿಧಾನಸಭಾ ಅಧಿವೇಶನ ಬೆಳಗಾಂನಲ್ಲಿ ನಡೆದಾಗ ವಿರೋಧ ಪಕ್ಷಗಳ ಒತ್ತಡಕ್ಕೆ ಮಣಿದ ಯಡ್ಡಿ ತಾವೇ ಮೊದಲಾಗಿ ಗಣಿ ಅಕ್ರಮ ತನಿಖೆ ಮಾಡುವಂತೆ ಲೋಕಾಯುಕ್ತರನ್ನು ಕೋರಿದ್ದರು. ರೆಡ್ಡಿಗಳು ಹೆದರಿ ನಡುಗುತ್ತಿದ್ದ ಅರಣ್ಯಾಧಿಕಾರಿ ಯು. ವಿ. ಸಿಂಗ್‌ರನ್ನೇ ಮರಳಿ ಲೋಕಾಯುಕ್ತರ ಜೊತೆ ಕೆಲಸ ಮಾಡಲು ಓಕೆ ಮಾಡಿದ್ದರು ಯಡ್ಡಿ. ಅದೀಗ ತನ್ನ ಗುರಿ ತಲುಪುವ ಹಂತದಲ್ಲಿದೆ.

ತಿದ್ದಿ ತಿರುಚಲಾದ ಲೈಸೆನ್ಸ್‌ಗಳು, ನಕಲಿ ಅದಿರು ಸಾಗಾಣಿಕಾ ಪರ್ಮಿಟ್‌ಗಳು ಮೂಟೆಗಟ್ಟಲೆ ಲೋಕಾಯುಕ್ತರಿಗೆ ಸಿಕ್ಕಿಬಿದ್ದಿವೆ. ಜೊತೆಗೆ ಕಾರವಾರದ ಬೇಲೇಕೇರಿ ಬಂದರಿನಲ್ಲಿ ಸೀಜ್ ಆಗಿದ್ದ ಅದಿರೇ ಕಳ್ಳತನವಾಗಿದ್ದು ರೆಡ್ಡಿಗಳಿಗೆ ಈಗ ಜೀರ್ಣಿಸಿಕೊಳ್ಳಲಾಗದಂತೆ ಆಗಿದೆ. ಅವತ್ತು ಯಡ್ಡಿ ಲೋಕಾಯುಕ್ತರ ತನಿಖೆಗೆ ಅವಕಾಶ ಮಾಡಿ ಕೊಟ್ಟರೆಂದು ರೆಡ್ಡಿಗಳು ಸಿಟೆದುಕೊಂಡಿದ್ದರು. ಸರ್ಕಾರದ ವಿರುದ್ಧವೇ ಬಂಡಾಯವೆದ್ದಿದ್ದರು. ಆದರೀಗ ಲೋಕಾಯುಕ್ತರ ವರದಿ ರೆಡ್ಡಿಗಳ ಬುರುಡೆಗೆ ಬಿಸಿನೀರು ಬಿಡಲಿದೆ. ಸುಷ್ಮಾ ಇರಲಿ ಯಡ್ಡಿಯೂ ರೆಡ್ಡಿಗಳನ್ನು 'ತನ್ನವರಲ್ಲ' ಎಂದು ದೂರ ತಳ್ಳಲೇಬೇಕಾಗಿ ಬರುತ್ತದೆ.


ಸುಷ್ಮಾ ಸಾಚಾನಾ?

ರೆಡ್ಡಿಗಳನ್ನು ಬೆಳೆಸಿದ್ದು ನಾನಲ್ಲ ಎನ್ನುತ್ತಿರುವ ಸುಷ್ಮಾ ಸ್ವರಾಜ್ ನಂಬರ್ ಒನ್ ಸುಳ್ಳುಬುರುಕಿ ಎಂಬುದು ಎಲ್ಲರಿಗೂ ಗೊತ್ತಿದೆ. ವರಮಹಾಲಕ್ಷ್ಮಿ ಹಬ್ಬ ಬಿಟ್ಟರೆ ಬೇರೆ ಎಂದೂ ಅವರನ್ನು ಭೇಟಿಯಾಗಿಲ್ಲ ಎನ್ನುತ್ತಿರುವ ಸುಷ್ಮಾಗೂ ಈಗ ಸಿಬಿಐನ ತನಿಖೆಯ ಭೀತಿ ಶುರುವಾಗಿದೆ.

ಮುಂದೆ ಬಿಜೆಪಿ ವತಿಯಿಂದ ಪ್ರಧಾನಿ ಕ್ಯಾಂಡಿಡೇಟ್ ಆಗಬಯಸಿರುವ ಸುಷ್ಮಾಗೆ ಕಳ್ಳ ಗಣಿಗಾರಿಕೆಯ ಕಳಂಕ ಅಂಟಿಸಿಕೊಳ್ಳುವುದು ಬೇಡವಾಗಿದೆ. ಆದರೆ ಆ ಪ್ರಯತ್ನ ನಡೆಸುವಾಗ ಆಕೆ ಬಿಜೆಪಿಯಲ್ಲಿನ ತನ್ನ ಪ್ರಮುಖ ವೈರಿ ಅರುಣ್ ಜೈಟ್ಲಿ ಹೆಸರನ್ನು ರೆಡ್ಡಿಗಳ ಜೊತೆ ತಳುಕು ಹಾಕುತ್ತಿರುವುದು ರಂಜನೀಯವಾಗಿದೆ.

ಈ ಸುಷ್ಮಾ ಸಾಚಾ ಅಲ್ಲ ಎಂಬುದು ಗೊತ್ತಾಗಲು ಬಹಳ ದಿನ ಕಾಯುವ ಅಗತ್ಯವಿಲ್ಲ ಅಷ್ಟೆ.


• ಪಾರ್ವತೀಶ




ಜೋಜೋ ಲಾಲಿ ನಾ ಹಾಡುವೆ ರೆಡ್ಡಿ ನಿನ್ನಾ ಮುದ್ದಾಡುವೆ







ವ್ಯಂಗ್ಯಚಿತ್ರ ಕಲಾವಿದರು ಕಂಡಂತೆ...





ಕಾಯುತ್ತಿದ್ದಾರೆ ಲಾರಿ ಮಾಲೀಕರು, ಡ್ರೈವರ್-ಕ್ಲೀನರ್‌ಗಳು

ಲೋಕಾಯುಕ್ತ ವರದಿಯಲ್ಲೋ ಅಥವಾ ಸಿಬಿಐ ತನಿಖಾ ಪ್ರಕ್ರಿಯೆಯಲ್ಲಿ ಒಂದು ಸಾರಿ ಜನಾರ್ದನ ರೆಡ್ಡಿ ಅಂಡ್ ಗ್ಯಾಂಗ್ ಜೈಲಿಗೆ ಹೋದರೆ ಬಳ್ಳಾರಿಯ ಒಟ್ಟು ಚಿತ್ರಣವೇ ಬದಲಾಗಿ ಹೋಗಲಿದೆ.

ಆ ತರದ ಒಂದು ಮುಹೂರ್ತಕ್ಕಾಗಿ ಕಾದಿರುವ ಪ್ರಮುಖರ ಪೈಕಿ ಲಾರಿ ಓನರ್‌ಗಳು, ಡ್ರೈವರ್, ಕ್ಲೀನರ್‌ಗಳೂ ಇದ್ದಾರೆ.

ಬಳ್ಳಾರಿ ಏರಿಯಾದಲ್ಲಿ ಯಾವತ್ತೇ ಚೆಕ್ ಮಾಡಿ ನೋಡಿದರೂ ಕನಿಷ್ಠ ಒಂದು ಸಾವಿರ ಲಾರಿಗಳು ಅದಿರು ಸಾಗಾಣಿಕೆಗಾಗಿ ರೆಡಿಯಾಗಿರುತ್ತವೆ. ಈ ಟ್ರಾನ್ಸ್‌ಪೋರ್ಟ್ ಉದ್ಯಮವನ್ನೇ ಆಧರಿಸಿ ಇಪ್ಪತ್ತೈದು ಸಾವಿರ ಜನ ಇದ್ದಾರೆ. ಇವರ ಪೈಕಿ ಲೀಗಲ್ ಹಾಗೂ ಇಲ್ಲೀಗಲ್ ಅದಿರು ಸಾಗಾಣಿಕೆದಾರರೆಲ್ಲಾ ಇದ್ದಾರೆ. ಕಳೆದ ಆರೆಂಟು ತಿಂಗಳುಗಳಿಂದ ಲಾರಿಯವರಿಗೆ ಬ್ಯುಸಿನೆಸ್ ಡಲ್ಲಾಗಿದೆ. ಸಾಲ ಮಾಡಿ ಲಾರಿ ತಂದವರು, ಈ ಲಾರಿಯ ಜನರನ್ನೇ ನಂಬಿ ಹೋಟೆಲ್, ಅಂಗಡಿ ನಡೆಸುತ್ತಿದ್ದ ಜನರೂ ಡಲ್ಲಾಗಿದ್ದಾರೆ. ಯಾಕೆಂದರೆ ಒಂದು ಕಡೆ ಸಿಬಿಐ ತನಿಖೆ, ಇನ್ನೊಂದು ಕಡೆ ಸುಪ್ರೀಂಕೋರ್ಟ್ ನೇಮಿಸಿದ್ದ ಸಿಇಸಿ ತಂಡ, ಮತ್ತೊಂದೆಡೆ ಕರ್ನಾಟಕ ಲೋಕಾಯುಕ್ತರ ತನಿಖೆಯಿಂದಾಗಿ ಅಕ್ರಮ ಅದಿರು ಸಾಗಾಣಿಕೆ ದಂಧೆಗೆ ಬ್ರೇಕ್ ಬಿದ್ದಿತ್ತು.

ಅದಿರು ಸಾಗಾಣಿಕೆ ಕೆಲಸ ಒಂದು ವೇಳೆ ಪೂರ್ತಿಯಾಗಿ ಲೀಗಲ್ಲಾಗೇ ನಡೆದರೂ ಯಾವ ಲಾರಿಯವರಿಗೂ ಲಾಸ್ ಆಗುವುದಿಲ್ಲ. ಇಲ್ಲೀಗಲ್ ದಂಧೆಯಲ್ಲಿ ಕೊಂಚ ಜಾಸ್ತಿ ಹಣ ಸಿಗುತ್ತದೆಯೆಂಬುದನ್ನು ಬಿಟ್ಟರೆ ಅಷ್ಟೆ ಪ್ರಮಾಣದ ರಿಸ್ಕೂ ಲಾರಿಯವರಿಗಿರುತ್ತಿತ್ತು.

ಬಹಳ ಮುಖ್ಯವಾಗಿ ರೆಡ್ಡಿಗಳ ಅಕ್ರಮ ದಂಧೆಗೆ ಕೈಜೋಡಿಸಲೇಬೇಕಾದ ಒತ್ತಡ ಈ ಲಾರಿ ಮಾಲೀಕರಿಗಿತ್ತು. ಖಾರಾಪುಡಿ ಮಹೇಶ್, ಸ್ವಸ್ತಿಕ್ ನಾಗರಾಜ್ ಎಂಬ ಕ್ರಿಮಿನಲ್‌ಗಳು ಈ ಅಕ್ರಮ ದಂಧೆಯ ಕಿಂಗ್‌ಪಿನ್‌ಗಳಾಗಿದ್ದರು.

ಇದರಿಂದಾಗಿ ಏನಾಯಿತೆಂದರೆ ನಾನಾ ರೀತಿಯ ತನಿಖೆಗಳು ಶುರುವಾಗಿ ಕೊನೆಗೆ ಈಗ ಲೀಗಲ್ ಆದ ಅದಿರು ಸಾಗಾಣಿಕೆ ಕೆಲಸವೂ ಕಷ್ಟಕರವಾಗಿ ಬದಲಾಗಿ ಹೋಗಿದೆ. ಈಗಿನ ತನಿಖೆಗಳು ಒಂದು ಹಂತಕ್ಕೆ ತಲುಪಿ ರೆಡ್ಡಿ ಗ್ಯಾಂಗ್ ದುರ್ಬಲಗೊಂಡರೆ ಆಮೇಲಾದರೂ ಕಾನೂನುಬದ್ಧವಾದ ಅದಿರು ಸಾಗಾಣಿಕೆ ಶುರುವಾಗಿ ಜೀವನ ವ್ಯವಹಾರ ಸುಗಮವಾಗಿ ಪುನರಾರಂಭಗೊಳ್ಳಬಹುದೆಂದು ಲಾರಿ ಜಗತ್ತು ಕಾಯುತ್ತಿದೆ.

ಇದಾಗಬೇಕೆಂದರೆ ಅದಿರು ಕಳ್ಳಸಾಗಾಣಿಕೆದಾರರಾದ ಖಾರದಪುಡಿ ಮಹೇಶ್ ಹಾಗೂ ಸ್ವಸ್ತಿಕ್ ನಾಗರಾಜ್ ಸಹ ಜೈಲಿಗೆ ಹೋಗಬೇಕು. ಇಲ್ಲೀಗಲ್ ಟ್ರಾನ್ಸ್‌ಪೋರ್ಟ್ ದಂಧೆ ಪೂರ್ತಿಯಾಗಿ ನಿಲ್ಲಬೇಕು.

ಅದಾಗಬೇಕೆಂದರೆ ರೆಡ್ಡಿಯನ್ನು ಸಿಬಿಐ ಎಳೆದೊಯ್ಯಬೇಕು.

ಇದು ಲಾರಿ ಜನರ ಬಯಕೆ.

ಆದಿಚುಂಚನಗಿರಿಯ ಪೀಠಾಧಿಪತಿ ಬಾಲಗಂಗಾಧರನಾಥರಿಗೆ ಮುಪ್ಪು, ರೋಗ, ಖಿನ್ನತೆಗಳಲ್ಲಿ ಹೇಗೆ ದಿನೇದಿನೇ ಉಲ್ಬಣಿಸುತ್ತಿದೆಯೋ ಹಾಗೇ ಹದಿನೈದು ಸಾವಿರ ಕೋಟಿಯ ಖಾವಿ ಸಾಮ್ರಾಜ್ಯದ ಗೋಡೆ ಬಿರುಕೂ ವೃದ್ಧಿಸುತ್ತಿದೆ. ಮಠವೇ ಬೇರೆ ಸ್ವಾಮಿ ಕೂಡಿಟ್ಟ ಆಸ್ತಿಯೇ ಬೇರೆ ಆಗುವ ವಿಧ್ವಂಸಕ ವಿಘಟನೆಯೊಂದಕ್ಕೆ ಕಾಲ ಕೂಡಿ ಬಂದಿದೆಯಾ? ಅದು ಬಾಲಗಂಗಾಧರರ ಬುದ್ಧಿ ಸ್ಥಿಮಿತದ ಮೂಲಕ ನಿರ್ಧರಿಸಲ್ಪಡುತ್ತಾ? ಮಠದಿಂದ ಪ್ರತ್ಯೇಕಗೊಂಡ ಬಿಜಿಎಸ್ ಸಂಸ್ಥಾನಕ್ಕೆ ಖತರ್‌ನಾಕ್ ಶೇಖರ್‌ಸ್ವಾಮಿ ಒಡೆಯನಾಗುತ್ತಾನಾ? ಶೇಖರನ ವಿರುದ್ಧ ಮಿಕ್ಕೆಲ್ಲ ಶಾಖಾಮಠಗಳು ದಂಗೆ ಏಳಬಹುದಾ? ಅಥವಾ ಇಡೀ ಆದಿಚುಂಚನಗಿರಿ ಸುಪತ್ತಿಗೆಗೆ ಶೇಖರ್ ಅನಭಿಷಕ್ತ ದೊರೆಯಾಗಬಹುದಾ?

ಒಂದಲ್ಲ ಎರಡಲ್ಲ ಇಂಥ ಹತ್ತಾರು ಬೇಗುದಿ, ಅಸಹನೆಯ ದಾವಾನಲಕ್ಕೆ ಸಿಲುಕಿ ವಿಲಿವಿಲಿಗುಡುತ್ತಿರುವ ಆದಿಚುಂಚನಗಿರಿಯ ಅಳಿವುಉಳಿವಿನ ಪ್ರಶ್ನೆ ಮೊದಲ ಬಾರಿಗೆ ಒಕ್ಕಲಿಗರನ್ನು ಕಾಡುತ್ತಿರುವುದು ಸ್ವಾಮಿ ಬಾಲಗಂಗಾಧರರ ವೃದ್ಧಾಪ್ಯದ ಮೂಲಕ!

ಬಾಲಗಂಗಾಧರ್ ಸ್ವಾಮಿಗೀಗ ಎಪ್ಪತ್ತರ ಮುಪ್ಪು. ಅವರ ಎರಡೂ ಕಿಡ್ನಿಗಳು ಕಾರ್ಯನಿಲ್ಲಿಸಿ ವರ್ಷಗಳೇ ಕಳೆದಿವೆ. ಕನಿಷ್ಠ ಮೂರು ದಿನಕ್ಕೊಮ್ಮೆ ಅವರನ್ನು ಡಯಾಲಿಸಿಸ್ ಯಂತ್ರಕ್ಕೆ ಒಪ್ಪಿಸಿದರಷ್ಟೇ ಮರುಜನ್ಮ. ಒಂದು ದಿನವಿಡಿ ಡಯಾಲಿಸಿಸ್‌ಗೆಂದು ಪೋಲಾದರೆ ಅದರ ಮರುದಿನ ಪೂರ್ತಿ ಚೇತರಿಸಿಕೊಳ್ಳುವುದಕ್ಕೇ ಸರಿಹೋಗುತ್ತದೆ. ಮೂರನೇ ದಿನವಷ್ಟೇ ಸ್ವಾಮಿ ಮಠ, ಭಕ್ತಾದಿಗಳು, ದರ್ಶನ, ಹಣಕಾಸಿನ ವ್ಯವಹಾರ, ಆಡಳಿತ, ರಾಜಕೀಯ, ಪ್ರಗತಿ, ಪೂಜೆ ಇತ್ಯಾದಿಗಳಿಗೆ ಲಭ್ಯರಾಗುವುದು. ಕೀಲಿ ಕೊಟ್ಟ ಗೊಂಬೆಯಂತೆ ಅವರನ್ನು ವಿಜಯನಗರದ ಶಾಖಾಮಠದ ಅಂತಃಪುರದಲ್ಲಿ ಪ್ರದರ್ಶಿಸಲಾಗುತ್ತದೆ.

ಜೀವ ಮಾತ್ರ ಇದೆ ಎಂಬುದನ್ನು ಬಿಟ್ಟರೆ ಸ್ವಾಮಿಗೆ ತಾನು ಯಾರ ಜೊತೆ ಮಾತಾಡುತ್ತಿದ್ದೇನೆ, ಯಾವ ಬಗ್ಗೆ ಏನು ಹೇಳುತ್ತಿದ್ದೇನೆ, ಎಲ್ಲಿದ್ದೇನೆ, ಏನು ಮಾಡುತ್ತಿದ್ದೇನೆಂಬುದು ಗೊತ್ತೇ ಇರುವುದಿಲ್ಲ, ಬಂದ ಭಕ್ತಾದಿಗಳು ಭಾರಿ ನಿರೀಕ್ಷೆ ಹೊತ್ತು ಏನೇನೋ ಅಹವಾಲು ತೋಡಿಕೊಳ್ಳುತ್ತಿದ್ದರೆ ಅದನ್ನು ಕೇಳಿಸಿಕೊಂಡವರಂತೆ ಕೂತ ಸ್ವಾಮಿ ಇದ್ದಕ್ಕಿದ್ದಂತೆ 'ನಿಜವಾಗ್ಲೂ ದೇವೇಗೌಡ್ರು ಆ ರೀತಿ ಹೇಳುದ್ರಾ?' ಎಂದು ಅಸಂಬದ್ಧ ಪ್ರಶ್ನೆ ಕೇಳಿ ಸುತ್ತ ನಿಂತವರನ್ನು ಬೆಸ್ತು ಬೀಳಿಸುತ್ತಾರೆ. ಎದುರಿನ ಆಸಾಮಿ ಆತನಕ ಮಾತಾಡಿದ್ದಕ್ಕೂ ಇದ್ದಕ್ಕಿದ್ದಂತೆ ಸ್ವಾಮಿಯ ಬಾಯಿಂದ ಹೊರಬಿದ್ದ ಶಬ್ದಾವಳಿಗೂ ಸಂಬಂಧವೇ ಇರುವುದಿಲ್ಲ, ಹೇಳಿದ ಮಾತು ಐದು ನಿಮಿಷಕ್ಕೇ ಮರೆತುಹೋಗುತ್ತದೆ.

ನಿಸ್ತೇಜ ಮೂರ್ತಿ!

ಕಲ್ಲು ಮೂರ್ತಿಯಂತೆ ಶೂನ್ಯವನ್ನೇ ದೃಷ್ಟಿಸುತ್ತಾ ಕೂತ ಸ್ವಾಮೀಜಿಗೆ ತನ್ನ ಸುತ್ತ ಏನಾಗುತ್ತಿದೆ, ಯಾರಿದ್ದಾರೆ ಗೊತ್ತೇ ಇರುವುದಿಲ್ಲ, ಯಾವುದೇ ದಾಖಲೆ, ಬಿಲ್ಲು, ಕಾಗದಪತ್ರಕ್ಕೆ ಸಹಿ ಹಾಕಬೇಕೆಂದರೆ ಅದಕ್ಕೆ ಶೇಖರ್ ಸ್ವಾಮಿ ಅನುಮತಿಸಬೇಕು. ಸ್ವಾಮಿ ಎಲ್ಲೇ ಇರಲಿ, ಎಲ್ಲಿಗೇ ಹೋಗಲಿ ಪಕ್ಕ ಶೇಖರ್ ಇರಲೇಬೇಕು. ಮಠ ಮತ್ತು ವಿದ್ಯಾಸಂಸ್ಥೆಗಳ ಯಾವುದೇ ಅಧಿಕಾರಿಗೆ ಏನೇ ಕೆಲಸವಾಗಬೇಕೆಂದರೂ ಸ್ವಾಮಿಯ ಬದಲು ಶೇಖರನ ಬಳಿ ಮೊದಲು ತಮ್ಮ ಅಹವಾಲು ತೋಡಿಕೊಳ್ಳಬೇಕು. ಅದು ತನಗೆ ಸರಿಕಂಡರಷ್ಟೇ ಶೇಖರ್ ನಿರ್ಜೀವ, ನಿಸ್ತೇಜ ನರಮೂರ್ತಿ ಸ್ವಾಮಿಯ ಕಿವಿ ಬಳಿ ಬಂದು ಏನೋ ಪಿಸುಗುಟ್ಟವನಂತೆ ನಟಿಸಿ, ಸ್ವಾಮಿಯ ಕೈಹಿಡಿದು ಸಹಿ ಮಾಡಿಸಿಕೊಡುತ್ತಾನೆ.

ಮಿಕ್ಕಂತೆ ಬಾಲಗಂಗಾಧರ್ ಸ್ವಾಮಿ ಲೋಕದ ಯಾವ ಚಲನೆಗೂ ಸ್ಪಂದಿಸುವುದಿಲ್ಲ, ಜೀವ ಇದೆ ನಿಜ. ಚೈತನ್ಯವಿಲ್ಲ, ಮೆದುಳು ಕ್ರಿಯಾಶೀಲವಾಗಿಲ್ಲ, ಸಿಂಗರಿಸಿದ ಶಿಲಾಮೂರ್ತಿಯಂತೆ ಸಿಂಹಾಸನದ ಮೇಲೆ ಕೂತು ಕಣ್ಣು ಪಿಳಿಗುಡಿಸುತ್ತಾ ಪದೇಪದೇ ಎದುರಿಟ್ಟ ಕಾಣಿಕೆ ಬಟ್ಟಲಿಗೆ ಕೈಹಾಕುತ್ತಾರೆ. ಬಂದ ಭಕ್ತಾದಿಗಳು ಹಾಕಿದ ಕಾಣಿಕೆಯನ್ನು ಯಾರಾದರೂ ಕಿತ್ಕೊಂಡ್ಹೋದಾರೆಯೇ ಎಂದು ಬಟ್ಟಲಲ್ಲಿದ್ದ ನೋಟಿನ ರಾಶಿಯನ್ನು ಮುಟ್ಟಿ



ಸ್ವಾಮಿಗೆ ಅನಾರೋಗ್ಯ

ಮಠದ ಸೊತ್ತು ಪಾಪಿ ಪಾಲು?

ಬಾಲಗಂಗಾಧರ್ ಸ್ವಾಮಿಗೀಗ ಎಪ್ಪತ್ತರ ಮುಪ್ಪು. ಅವರ ಎರಡೂ ಕಿಡ್ನಿಗಳು ಕಾರ್ಯನಿಲ್ಲಿಸಿ ವರ್ಷಗಳೇ ಕಳೆದಿವೆ. ಕನಿಷ್ಠ ಮೂರು ದಿನಕ್ಕೊಮ್ಮೆ ಅವರನ್ನು ಡಯಾಲಿಸಿಸ್ ಯಂತ್ರಕ್ಕೆ ಒಪ್ಪಿಸಿದರಷ್ಟೇ ಮರುಜನ್ಮ. ಕೊನೆಗಾಲದಲ್ಲಿ ಬಾಲಗಂಗಾಧರರಿಗೆ ಇದಂಥಾ ಗತಿ? ಒಕ್ಕಲಿಗರು ಹನಿಹನಿಗೂಡಿಸಿ ಕಟ್ಟಿದ 15 ಸಾವಿರ ಕೋಟಿಯ ಸಾಮ್ರಾಜ್ಯವನ್ನು ಸ್ವಾಮಿ ಬದುಕಿರುವಾಗಲೇ ಖದೀಮ ಶೇಖರ್ ಸ್ವಾಮಿ ದೋಚುತ್ತಿದ್ದಾನೆಂದರೆ ಒಕ್ಕಲಿಗರ ದೌರ್ಭಾಗ್ಯಕ್ಕೆ ಏನೆನ್ನಬೇಕು? ಕಾಲ ಮಿಂಚಿಲ್ಲ. ಇನ್ನಾದರೂ ಒಕ್ಕಲಿಗರು ಒಗ್ಗಟ್ಟಾಗಲಿ, ಹುಷಾರಾಗಲಿ, ಎಚ್ಚೆತ್ತುಕೊಳ್ಳಲಿ. ಸಮುದಾಯದ ಸೊತ್ತಾದ ಮಠವನ್ನು ರಕ್ಷಿಸಿಕೊಳ್ಳಲಿ.

'ದುಡ್ಡು ಏನಾಯ್ತು? ಈಗ ತಾನೇ ತಟ್ಟೆ ತುಂಬ ಇದ್ದ ನೋಟನ್ನೆಲ್ಲ ಯಾರು ತಗೊಂಡ್ರು?' ಎಂದು ಪುಟ್ಟ ಮಗುವಿನಂತೆ ಪ್ರಶ್ನಿಸುತ್ತಾರೆ. ಪಕ್ಕದಲ್ಲೇ ನಿಂತ ನಿರ್ಮಲಾನಂದ ಸ್ವಾಮಿ 'ಏನೂ ಆಗಿಲ್ಲ, ಎಲ್ಲಾ ಇಲ್ಲೇ ಇದೆ ನೋಡಿ.....' ಎಂದು ತಾಯಿ ಮಗುವನ್ನು ನಂಬಿಸಿದಂತೆ ಸಂತೈಸುತ್ತಾರೆ. ಬಂದ ಜನರೇ ಪೆಚ್ಚಾಗಿ ಹೋಗಬೇಕು.

ಒಂದಲ್ಲ ಎರಡಲ್ಲ ಹೆಚ್ಚೂಕಮ್ಮಿ ಹದಿನೈದು ಸಹಸ್ರ ಕೋಟಿಯ ಸಾಮ್ರಾಜ್ಯದ ಗದ್ದುಗೆಯೇರಿ ಎದುರಿನ ಕಾಣಿಕೆ ಬಟ್ಟಲ ಪುಡಿ ನೋಟುಗಳಿಗಾಗಿ ಪರಿತಪಿಸುವ ಬಾಲಗಂಗಾಧರನಾಥರ ಕೊನೆಗಾಲದ ದುರ್ಗತಿ ಕಂಡ ಯಾರಿಗಾದರೂ ಮರುಕ ಉಕ್ಕಲೇಬೇಕು.

ದೈತ್ಯ ಸಾಮ್ರಾಜ್ಯದಲ್ಲಿ.....

ಸಾವಿನ ಸನ್ನಿಧಿಯಲ್ಲೂ ದುಡ್ಡಿನ ಜಪ ಮಾಡುವ ಸ್ವಾಮಿ ಬಾಲಗಂಗಾಧರನಾಥರು ಒಕ್ಕಲಿಗರ ಆಧ್ಯಾತ್ಮಿಕ ನಾಯಕರೆಂಬುದು ಎಷ್ಟು ಸರಿಯೋ ಸೂಕ್ತವೋ ಗೊತ್ತಿಲ್ಲ, ಆದರೆ ಒಕ್ಕಲಿಗರ ಕುಲದೈವ ಕಾಲಭೈರವನ ಹೆಸರಲ್ಲಿ ಅಗಣಿತ ಸಾಮ್ರಾಜ್ಯವೊಂದನ್ನು ಸ್ಥಾಪಿಸಿದ್ದಂತೂ ಸತ್ಯ. ರಮಾನಂದರ ನಂತರ ಪೀಠಾಧಿಪತಿಯಾದ ಬಾಲಗಂಗಾಧರ್ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ಶುರುವಿನಲ್ಲಿ ಮಠದ ಆಸ್ತಿಯಂತಿದ್ದದ್ದು ಒಂದು ಎತ್ತಿನ ಗಾಡಿ, ನೂರು ಸೇರು ರಾಗಿ ಮತ್ತು ಒಂದು ಪಲ್ಲ ಹುರುಳಿಕಾಳು ಮಾತ್ರ!

ನಾಗಮಂಗಲದಿಂದ ಹಿಡಿದು, ತಿಪಟೂರು, ತುರುವೇಕೆರೆ, ಹಾಸನವೆನ್ನದೆ ದೂರದ ಕೊಯಂಬತ್ತೂರಿನ ತನಕ ಒಕ್ಕಲಿಗರನ್ನು ಹುಡುಕುಡುಕಿ ಭಿಕ್ಷೆ ಎತ್ತಿದವರು ಬಾಲಗಂಗಾಧರನಾಥರು. ಇವತ್ತು ಸ್ವಾಮಿಗೆಂದೇ ಹೆಲಿಕಾಪ್ಟರಿದೆ. ಐಷಾರಾಮಿ ಕಾರುಗಳಿವೆ. ಸ್ವಾಮೀಜಿ ತಿರುಗುವ ಮಂಚದಲ್ಲಿ ಮಲಗುತ್ತಾರೆ. ಮೆಡಿಕಲ್ ಕಾಲೇಜು, ಆಯುರ್ವೇದಿಕ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳು, ಬಿಜಿಎಸ್ ಗ್ಲೋಬಲ್ ಆಸ್ಪತ್ರೆ, ಬಿಜಿಎಸ್ ರೆಸಿಡೆನ್ಷಿಯಲ್ ಸ್ಕೂಲ್, ಪ್ರತಿಷ್ಠಿತ ಬಿಜಿಎಸ್ ಅಪೊಲೋ ಆಸ್ಪತ್ರೆ, ಅಮೆರಿಕ ಮೊದಲಾಗಿ ಕಾಶಿಯಿಂದ ಹಿಡಿದು ತಮಿಳುನಾಡಿನ ಧರ್ಮಪುರಿ, ಸೇಲಂತನಕ ನೂರಾರು ಶಾಖಾಮಠಗಳ ಮೂಲಕ ಆದಿಚುಂಚನಗಿರಿ ಸಾಮ್ರಾಜ್ಯ ವಿಸ್ತರಿಸಿದೆ.



ಖದೀಮ ಶೇಖರ್ ಸ್ವಾಮಿ

ಬಹುಶಃ ತನ್ನ ಜೀವಿತಾವಧಿಯಲ್ಲಿ ಒಂದು ಮಠದ ಸಾಮ್ರಾಜ್ಯವನ್ನು ಇಷ್ಟು ಬಲಿಷ್ಠವಾಗಿ ಕಟ್ಟಿದ ಮತ್ತೊಬ್ಬ ಸ್ವಾಮಿಯನ್ನು ಕರ್ನಾಟಕ ಕಂಡಿಲ್ಲ, ಪುಟ್ಟಪರ್ತಿ ಸಾಯಿಬಾಬಾ ದೇಶವಿದೇಶಗಳ ಭಕ್ತರನ್ನು ಆಕರ್ಷಿಸಿ ಸಹಸ್ರಾರು ಕೋಟಿ ಖಮಾಯಿಸಿದರೆ ಬಾಲಗಂಗಾಧರ್ ತಮ್ಮ ಹಿತ್ತಿಲನ್ನೇ ಅಗೆದು ನಿಧಿ ತಂದರು. ಅದರರ್ಥ ಹಳ್ಳಿಹಳ್ಳಿಯನ್ನು ಸುತ್ತಿ ಒಕ್ಕಲಿಗರಿಂದಲೇ ಮನೆಗೊಂದು ಕಾಯಿ ಕೊಡಿ, ಮರಕ್ಕೊಂದು ಕಾಯಿ ಕೊಡಿ ಎಂದು ಎತ್ತಿದ ಭಿಕ್ಷೆಯೇ ಇವತ್ತು ಭಾರೀ ಸಾಮ್ರಾಜ್ಯವೊಂದಕ್ಕೆ ಕಾರಣವಾಯಿತು. ಒಂದಾನೊಂದು ಕಾಲಕ್ಕೆ ಒಕ್ಕಲಿಗ ಜನಾಂಗದ ಮುಂದೆ ಸ್ವಾಮಿ ಭಿಕ್ಷಾಪಾತ್ರೆ ಹಿಡಿದಿದ್ದರೆ ಇವತ್ತು ಸ್ವಾಮಿ ವಾಮನಾವತಾರ ತಾಳಿ ಅವರೆದುರು ಒಕ್ಕಲಿಗ ಜನಾಂಗ ಸೀಟು, ಟ್ರಾನ್ಸ್‌ಫರ್, ನೆರವಿಗಾಗಿ ಭಿಕ್ಷೆ ಬೇಡುವಂತಹ ಸ್ಥಿತಿ ಎದುರಾಗಿದೆ. ಈಗ ಕಾಲ ಬದಲಾಗಿದೆ. ಸ್ವಾಮಿ ಆಕಾಶದೆತ್ತರಕ್ಕೆ ಬೆಳೆದಿದ್ದಾರೆ. ಒಕ್ಕಲಿಗ ಜನಾಂಗ ಅಭಿವೃದ್ಧಿಗಾಗಿ, ರೋಡಿಗಾಗಿ, ಕೈಗಾರಿಕೆ, ಬಿಡಿಎ, ಕೆಐಎಡಿಬಿಗಾಗಿ ತಮ್ಮೆಲ್ಲಾ ಭೂಮಿ ಕಳಕೊಂಡು ಬೀದಿಗೆ ಬಿದ್ದಿದೆ. ಒಕ್ಕಲಿಗರ ಹೆಸರಲ್ಲಿ ಮೆಡಿಕಲ್ ಕಾಲೇಜು ದಕ್ಕಿಸಿಕೊಂಡ ಸ್ವಾಮಿ ಡಾಕ್ಟರ್‌ಗಳನ್ನಾಗಿ ಮಾಡಿದ್ದು ಮಾರ್ವಾಡಿ, ಕಾಶ್ಮೀರಿ ಕುಬೇರರ ಮಕ್ಕಳನ್ನು. ಒಕ್ಕಲಿಗರು ಇಂಜಿನಿಯರ್‌ಗಳಾಗಲಿಲ್ಲ, ಡಾಕ್ಟರುಗಳಾಗಲಿಲ್ಲ, ಕೊನೆಗೆ ತಮ್ಮ ಭೂಮಿಯನ್ನೂ ಉಳಿಸಿಕೊಳ್ಳಲಿಲ್ಲ, ಒಕ್ಕಲಿಗರ ಭೂಮಿ ಕಿತ್ತು ಅಲ್ಲಿ ತಲೆ ಎತ್ತಿದ ಕೈಗಾರಿಕೆಗಳಲ್ಲಿ ಅವರ ಮಕ್ಕಳಿಗೆ ಕೆಲಸ ಸಿಗಲಿಲ್ಲ. ಅಷ್ಟೇ ಏಕೆ; ಖುದ್ದು ಬಾಲಗಂಗಾಧರರೇ ತಮ್ಮ ಮೆಡಿಕಲ್

ಕಂಟಕನ ವಿರುದ್ಧ ಡಿಕೆಶಿ ಕಹಳೆ



ಸದ್ಯ ಮಠದ ಸುತ್ತ ಹೊಗೆಯಾಡುತ್ತಿರುವ ಮತ್ತೊಂದು ವದಂತಿಯ ಪ್ರಕಾರ ಈಗಾಗಲೇ ಮಠದ ಅಧೀನದಲ್ಲಿದ್ದ 150 ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳನ್ನು ...ೇಖರ್ ಸ್ವಾಮಿ ತನ್ನ ಹೆಸರಿಗೆ ಬರೆಸಿಕೊಂಡಾಗಿದೆ!

ಈ ಪೈಕಿ ಅತೀ ಮುಖ್ಯವಾದದ್ದು ಕುಂಬಳಗೋಡಿನ ಬಿಜಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಮತ್ತು ಕೆಂಗೇರಿಯ ಬಿಜಿಎಸ್ ಗ್ಲೋಬಲ್ ಆಸ್ಪತ್ರೆ. ...ಇಂಟರ್‌ನ್ಯಾಷನಲ್ ಸ್ಕೂಲ್ ಆಸ್ತಿಯೊಂದೇ ಇನ್ನೂರು ಕೋಟಿ ಬೆಲೆಬಾಳುತ್ತದೆ. ಗ್ಲೋಬಲ್ ಆಸ್ಪತ್ರೆ ಮತ್ತು ಇಂಜಿನಿಯರಿಂಗ್ ಕಾಲೇಜಿನ ಕ್ಯಾಂಪಸ್ ಸೇರಿಬಿಟ್ಟರೆ ...ಅದು ಕಮ್ಮಿಯೆಂದರೂ ನೂರೈವತ್ತು ಕೋಟಿಯ ಸೊತ್ತಾಗುತ್ತದೆ. ಹೆಸರಘಟ್ಟದ ಇಂಜಿನಿಯರಿಂಗ್ ಕಾಲೇಜ್, ಮೈಸೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆ, ...ವಿಜಯನಗರದ ಬಿಜಿಎಸ್ ಹೈಟೆಕ್ ಆಸ್ಪತ್ರೆ, ಚಿಕ್ಕಬಳ್ಳಾಪುರದ ಎಸ್‌ಜೆಐಸಿಟಿ ಇತ್ಯಾದಿ ಸಂಸ್ಥೆಗಳ ಕಟ್ಟಡ ಆಸ್ತಿಯನ್ನು ಲೆಕ್ಕ ಹಾಕಿದರೆ ಶೇಖರ್ ಸ್ವಾಮಿ ...ಲಪಟಾಯಿಸಿದ ಒಟ್ಟು ಆಸ್ತಿಯ ಮೊತ್ತವೇ ಸರಿಸುಮಾರು ಮೂರು ಸಾವಿರ ಕೋಟಿಯಷ್ಟಾಗುತ್ತದೆ.

ಇದಲ್ಲದೇ ತನ್ನ ಸ್ವಂತ ಶಕ್ತಿಯ ಮೇಲೆ ಶೇಖರ್ ಈಗಾಗಲೇ ಎರಡು ಸಾವಿರ ಕೋಟಿಗೂ ಅಧಿಕ ಮೊತ್ತದ ಆಸ್ತಿಯ ಒಡೆಯ. ಸ್ವಾಮಿಯನ್ನು ಮುಂದುಟ್ಟಿಕೊಂಡು ಬಂದ ಸರ್ಕಾರಗಳನ್ನೆಲ್ಲ ಕುಣಿಸುತ್ತಲೇ ಬಂದ. ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಯಾರೋ ಅಟ್ಟೇಪಾರಿಯನ್ನು ಮಾತಾಡಿಸಿದಂತೆ '...ರೀ ಧರ್ಮಸಿಂಗ್ ಎಲ್ರೀ ಇದ್ದೀರ.......?' ಎಂದು ಸಲುಗೆಯಿಂದ ದಬಾಯಿಸುತ್ತಿದ್ದ. ಈಗ ಮಂತ್ರಿ ಅಶೋಕ್‌ರನ್ನು ಲೆಕ್ಕಕ್ಕೇ ಇಲ್ಲದಂತೆ ಹೀಯಾಳಿಸುತ್ತಾನೆ.

ಶೇಖರ್ ನೂರೈವತ್ತು ಮಠದ ಸಂಸ್ಥೆಗಳನ್ನು ಲಪಟಾಯಿಸಿರುವ ಸುದ್ದಿ ಈಗಾಗಲೇ ಕಾಂಗ್ರೆಸ್ ನಾಯಕ ಡಿಕೆಶಿ ಕಿವಿಗೆ ಬಿದ್ದು ಒಕ್ಕಲಿಗ ಜನಾಂಗದ ಅನೇಕ ಮುಖ್ಯಸ್ಥರಿಗೆ ಡೀಕೆ ಈ ಬಗ್ಗೆ ಪತ್ರ ಬರೆದಿದ್ದಾರಂತೆ. ಬಹುಶಃ ಇದೇ ಕಾರಣಕ್ಕಿರಬೇಕು ಡೀಕೆ ವಿರುದ್ಧ ಶೇಖರ್ ಎಲ್ಲೆಂದರಲ್ಲಿ ಕಿಡಿಕಾರುತ್ತಿದ್ದಾನೆ. ಮಠವೇ ಶೇಖರನ ...ವಶವಾಗುತ್ತೋ ಅಥವಾ ಆಸ್ತಿ ಒಕ್ಕಲಿಗರ ಕೈಬಿಡುತ್ತೋ ಗೊತ್ತಿಲ್ಲ ಯಾವ ಆಯುಧ ಬಳಸಿ ಡೀಕೇಶಿ ಬಾಯಿ ಮುಚ್ಚಿಸುತ್ತಾನೋ ಕಾದು ನೋಡಬೇಕು.

...ೇಜಿಗೆಂದು ಒಕ್ಕಲಿಗರಿಂದ ಜಮೀನು ಪಡೆದು ...ರ ಮಕ್ಕಳಿಗೆ ಕೆಲಸ ಕೊಡುವುದಿರಲಿ, ಕೊಟ್ಟ ...ಮಿಯ ಬೆಲೆಯನ್ನೂ ಈತನಕ ಚುಕ್ತಾ ...ಡಿಲ್ಲ.

...ತ್ಯಕಾಲ ಸನ್ನಿಹಿತ

... ವರ್ಷಗಟ್ಟಲೇ ಮಠದೆದುರು ಧರಣಿ ಕೂತ ...ನ್ನೂರು ಕ್ರಾಸಿನ ಒಕ್ಕಲಿಗರ ಮೇಲೆ ...ೀಸರನ್ನು ಛೂಬಿಟ್ಟು ಹೊಡೆಸಿದ್ದಷ್ಟೇ ...ಗಂಗಾಧರರು ತೀರಿಸಿದ ಜನಾಂಗದ ಋಣ ...ಾಯವಾಗಿತ್ತು!

ಇಂಥ ದೋಷಲೋಪಗಳ ಹೊರತಾಗ್ಯೂ ...ಚುಂಚನಗಿರಿ ಸಾಮ್ರಾಜ್ಯ ವಿಸ್ತರಿಸಿದ ಬಾಲ ...ಾಧರರು ಒಕ್ಕಲಿಗ ಜನಾಂಗದ ಅದ್ವಿತೀಯ ...ನಾಯಕನೆಂಬ ಬಗ್ಗೆ ಎರಡು ಮಾತಿಲ್ಲ. ದೇವೇಗೌಡರು ...ಾರ ಚಂದ್ರಶೇಖರನಾಥರನ್ನು ಬಾಲಗಂಗಾಧರರ ...ದ್ಧ ಎತ್ತಿಕಟ್ಟಿದರಾದರೂ, ಒಕ್ಕಲಿಗರ ಬೇರೆಬೇರೆ ...ಗಳ ಮಠ, ಸ್ವಾಮಿಗಳು ಚಾಲ್ತಿಗೆ ಬಂದವಾದರೂ ...ರ್‍ಯಾರೂ ಬಾಲಗಂಗಾಧರನಾಥರಿಗೆ ...ಾಟಿಯಾಗಲಿಲ್ಲ.

ಆದರೆ ಸ್ವಾಮಿಗೀಗ ಅಂತ್ಯಕಾಲ. ಯಾವ ಗಳಿಗೆಯಲ್ಲಿ ...ಗುತ್ತೋ ಎಂಬಂಥ ಅನಾರೋಗ್ಯ. ಬಹಿರಂಗವಾಗಿ ...ು ಕಾಣಿಸಿಕೊಂಡು, ಸಭೆಯನ್ನುದ್ದೇಶಿಸಿ ಮಾತಾಡಿ ...ವುದೋ ಕಾಲವಾಗಿದೆ. ಇಂಥ ಅರಾಜಕ, ಅನಾಯಕ, ...ನಾಯಕ ಪರಿಸ್ಥಿತಿಯನ್ನು ಬಳಸಿಕೊಂಡು ತನ್ನ ...ೊಂಬೆ'ಯನ್ನು ತಂದು ಬಾಲಗಂಗಾಧರನಾಥರ ...ತ್ತರಾಧಿಕಾರಿಯನ್ನಾಗಿಸುವುದು ಖದೀಮ ಶೇಖರ್ ...ಯ ಹುನ್ನಾರ.

...ಹಾಗೊಮ್ಮೆ ಒಕ್ಕಲಿಗರೇನಾದರೂ ...ಮೋರಿದರೆಂದರೆ ತಾನೇ ಬಾಲಗಂಗಾಧರರ ...ತ್ತರಾಧಿಕಾರಿಯೆಂದು ಘೋಷಿಸಿಕೊಳ್ಳುವ ...ಂತ್ರವನ್ನೂ ಶೇಖರ್ ಸ್ವಾಮಿ ರೂಪಿಸಿದ್ದಾನೆ. ...ಕ್ಕೆಂದೇ ಕಳೆದ ಹತ್ತು ವರ್ಷಗಳಿಂದ ನಡೆಸಿದ ...ಾರಿ, ಪಿತೂರಿ ಒಂದಾ ...ಾ?

...ಒಂದು ಮೂಲದ ...ರ ಈಗಾಗಲೇ ...ಪ್ರಜ್ಞಾವಸ್ಥೆಯಲ್ಲಿರುವ ...ಗಂಗಾಧರ ...ುಗಳಿಂದ ಶೇಖರ್ ...ೀ ಮಾಡಿಸಿದ ವಿಲ್ಲಿಗೆ ಪಡೆದಾಗಿದೆ. ಹೊರ ...ಚದ ಆಗುಹೋಗುಗಳ ...ೆಯೇ ಇಲ್ಲದ, ಮಾನಸಿಕ ...ತವನ್ನೇ ಕಳಕೊಂಡ, ...ೀವದ ಸ್ವಾಮೀಜಿಗೆ ...ಲ್ಲಿ ಏನಿದೆ, ಏನಿಲ್ಲ ...ುದು ಹೇಗೆ ...ತ್ತಾಗಬೇಕು? ಶೇಖರನೇ ಉತ್ತರಾಧಿಕಾರಿ, ...ದ ಅಷ್ಟೂ ಆಸ್ತಿಗೆ ...ೇ ಒಡೆಯ ಎಂದು ...ೀಜಿ ಏನಾದರೂ ಸಹಿ ...ದ ಪಕ್ಕದಲ್ಲಿ ಗದ್ದಲುಗಳ ...ಕ್ಕೆ ಹಾಪು ಹೊಕ್ಕಂತೆ ...ಗರು ಕಟ್ಟಿದ

ಸಾಮ್ರಾಜ್ಯಕ್ಕೆ ಶೇಖರ್ ವಕ್ಕರಿಸುತ್ತಾನೆ.

ಖದೀಮ ಶೇಖರ್ ಸ್ವಾಮಿ

ಆರೋಗ್ಯದ ವಿಷಯದಲ್ಲಿ ಹಿಂದಿನಿಂದಲೂ ಸ್ವಾಮೀಜಿ ಬಗ್ಗೆ ವಿಪರೀತ ಕೇರ್ ಮಾಡುತ್ತಲೇ ಬಂದವನು ಶೇಖರ್. ಖಾವಿಧಾರಿಯಲ್ಲ. ಸ್ವಾಮೀಜಿಯಿಂದ ಬ್ರಹ್ಮಚರ್ಯದ ದೀಕ್ಷೆ ಪಡೆದಿದ್ದೇನೆಂದು ಹೇಳಿಕೊಳ್ಳುತ್ತಾನಾದರೂ ಅದನ್ನು ಪ್ರಾಮಾಣಿಕವಾಗಿ ಪಾಲಿಸಿದ ಲಕ್ಷಣಗಳಿಲ್ಲ. ಪಕ್ಕಾ ರಾಜಕಾರಣಿಯಂತೆ ಬಿಳಿ ಬಟ್ಟೆ ಧರಿಸುತ್ತಾನೆ. ಹಿಂದೆ ಚಿತ್ರನಟಿಯೊಬ್ಬಳ ಜೊತೆ ನಡುರಸ್ತೆಯಲ್ಲೇ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದ. ಹೊಸಕೆರೆಹಳ್ಳಿಯ ತನ್ನ ತಂಗಿಯ ಮನೆಗೆ ಬಂದು ಬಾಡೂಟ ಸವಿಯುವುದು, ಅಲ್ಲಿಗೆ ಬರುವ ಅತೃಪ್ತ ಹೆಂಗಸರ ಕಷ್ಟಕಾರ್ಪಣ್ಯಕ್ಕೆ ಸ್ಪಂದಿಸುವುದು, ಸ್ವಾಮೀಜಿ ಎಲ್ಲೇ ಇದ್ದರೂ ನೆರಳಂತೆ ಹಿಂಬಾಲಿಸುವುದು, ಮಠದ ಯಾವುದೇ ಲ್ಯಾಂಡ್ ಡೀಲಿರಲಿ, ಅದಕ್ಕೆ ಪೊಲೀಸ್, ಅಧಿಕಾರಿಗಳು, ಅಂಡರ್‌ವರ್ಲ್ಡ್ ಯಾವುದನ್ನು ಬಿಡದೇ 'ವ್ಯವಸ್ಥೆ' ಮಾಡಿಕೊಡುವುದು ಈತನ ಚಾಣಾಕ್ಷತೆ.

ಸ್ವಾಮೀಜಿಗೆ ಹೆಲಿಕಾಪ್ಟರ್ ಖಯಾಲಿಯನ್ನು ಅಂಟಿಸಿದ್ದೇ ಈತ. ಹಾಗೊಮ್ಮೆ ಪೈಲಟ್‌ಗಳೇನಾದರೂ ಕೈಕೊಟ್ಟರೆ ಎಮರ್ಜೆನ್ಸಿಗೆ ಇರಲಿ ಎಂದು ತಾನೇ ಅಮೆರಿಕಕ್ಕೇ ಹೋಗಿ ಪೈಲಟ್ ಟ್ರೈನಿಂಗ್ ಮಾಡಿಕೊಂಡು ಬಂದ. ಮಠಕ್ಕೆ ದಕ್ಕಿದ ಲ್ಯಾಂಡಿನ ಮೇಲೆ ಹೇಗೆ ಬ್ಯಾಂಕ್ ಸಾಲ ಪಡೆಯಬೇಕು, ಪಡೆದ ಸಾಲದಲ್ಲಿ ಎಂಥಾ ಬಿಲ್ಡಿಂಗ್ ಎಬ್ಬಿಸಿ ಅದನ್ನು ಯಾವ ಕಂಪೆನಿಗೆ ಬಾಡಿಗೆಗೆ ಬಿಡಬೇಕು, ಹಾಗೆ ಬಾಡಿಗೆಗೆ ಬಿಟ್ಟ ಜಮೀನಿನಲ್ಲಿ ನಡೆಯುವ ವ್ಯವಹಾರವನ್ನು ಹೇಗೆ ಲಾಭಕ್ಕೆ ಬಳಸಿಕೊಳ್ಳಬೇಕೆಂಬುದನ್ನು ನಿಭಾಯಿಸುತ್ತಲೇ ಬಂದವನು ಶೇಖರ್.

ಹಿಂದೆಲ್ಲ ಈ ರೀತಿ ಸ್ಥಾಪನೆಗೊಂಡ ಸಂಸ್ಥೆ-ಕಾಲೇಜುಗಳಿಗೆ ಆದಿಚುಂಚನಗಿರಿ, ಕಾಲಭೈರವೇಶ್ವರ ಇತ್ಯಾದಿ ಹೆಸರುಗಳಿರುತ್ತಿದ್ದವು. ಗತ ಪೀಠಾಧಿಪತಿಗಳಾದ ರಮಾನಂದ, ಚಂದ್ರಶೇಖರನಾಥರ ಹೆಸರನ್ನೂ ಇಡಲಾಗುತ್ತಿತ್ತು. ಆದರೆ ಕಳೆದ ಹತ್ತು ವರ್ಷದಿಂದೀಚೆಗೆ ಆದಿಚುಂಚನಗಿರಿಗೆ ವ್ಯತಿರಿಕ್ತವಾಗಿ ಬಾಲಗಂಗಾಧರರ ಹೆಸರಲ್ಲೇ ಬಿಜಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್, ಪಕ್ಕದಲ್ಲೇ ಬಿಜಿಎಸ್ ಗ್ಲೋಬಲ್ ಆಸ್ಪತ್ರೆ, ಕೆಂಗೇರಿಯಲ್ಲಿ ಬಿಜಿಎಸ್ ಇಂಜಿನಿಯರಿಂಗ್


ಆದಿಚುಂಚನಗಿರಿ ಪೀಠ

ಕಾಲೇಜು, ಹೆಸರಘಟ್ಟದಲ್ಲಿ ಬಿಜಿಎಸ್ ಇಂಜನಿಯರಿಂಗ್ ಕಾಲೇಜು, ಮೈಸೂರಲ್ಲಿ ಬಿಜಿಎಸ್ ಅಪೋಲೋ ಆಸ್ಪತ್ರೆ, ವಿಜಯನಗರದಲ್ಲಿ ಬಿಜಿಎಸ್ ಹೈಟೆಕ್ ಆಸ್ಪತ್ರೆ, ಬಿಜಿಎಸ್ ನರ್ಸಿಂಗ್ ಕಾಲೇಜ್, ಬಿಜಿಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ; ಹೀಗೆ ಆದಿಚುಂಚನಗಿರಿ ಮತ್ತು ಕಾಲಭೈರವನ ಹೆಸರಿಲ್ಲದೆ ತಲೆ ಎತ್ತಿದ ಬಿಜಿಎಸ್ ಸಾಮ್ರಾಜ್ಯಕ್ಕೆ ಶೇಖರ್ ಸ್ವಾಮಿಯೇ ಅಧಿಪತಿಯಾಗಿದ್ದ.

ಬಿಜಿಎಸ್ ಪ್ರೈವೇಟ್ ಕಂಪೆನಿ

ಮೊದಮೊದಲು ಬಿಜಿಎಸ್ ಎಂದರೆ ಬಾಲಗಂಗಾಧರನಾಥ ಸ್ವಾಮೀಜಿ ಎಂಬುದನ್ನು ಮನಗಂಡ ಒಕ್ಕಲಿಗರು ಇದು ಮಠದ್ದೇ ಸೊತ್ತೆಂದು ಖುಷಿಪಟ್ಟರು. ಈಗ ಸತ್ಯ ಬಯಲಾಗಿದೆ. ಈ ರೀತಿ ಬಿಜಿಎಸ್ ಹೆಸರಲ್ಲಿ ತಲೆ ಎತ್ತಿರುವ ಪರ್ಯಾಯ ಸಾಮ್ರಾಜ್ಯಕ್ಕೆ ಬಾಲಗಂಗಾಧರನಾಥರೇ ಅಧಿಪತಿಯಾದರೂ ಅದ್ಯಾವುದೂ ಮಠದ ಆಸ್ತಿಯಲ್ಲ. ಅದಕ್ಕೆಂದೇ ಸ್ವಾಮೀಜಿ ಮತ್ತು ಶೇಖರ್ ಸೇರಿಕೊಂಡು ಪ್ರತ್ಯೇಕ ಟ್ರಸ್ಟ್ ಒಂದನ್ನು ರಚಿಸಿಕೊಂಡಿದ್ದಾರೆ. ಮುಂದೊಮ್ಮೆ ಸ್ವಾಮೀಜಿ ದೈವಾಧೀನರಾದರೆಂದರೆ ಈ ಅಷ್ಟೂ ಆಸ್ತಿ ಮಠದ ಹಿಡಿತದಿಂದ ಪ್ರತ್ಯೇಕಗೊಳ್ಳುತ್ತದೆ. ಹಾಗೊಮ್ಮೆ ಶೇಖರ್ ಉತ್ತರಾಧಿಕಾರಿಯಾದರೆ ಅಥವಾ ಆತನ ಕೈಗೊಂಬೆ ಸ್ವಾಮಿ ಪೀಠಕ್ಕೆ ಬಂದರೆ ಆಗಲೂ ರಹಸ್ಯವಾಗೇ ಇದು ಮಠದ ಸೊತ್ತಿನಂತೆ ಬಿಂಬಿಸಲ್ಪಡುತ್ತದೆ. ಮೇಲುನೋಟಕ್ಕೆ ಮಠದ ಸೊತ್ತಂಬಂತೆ ಬಿಂಬಿಸಲ್ಪಟ್ಟು, ಒಳಗೊಳಗೇ ಶೇಖರನ ಖಾಸಗಿ ಸೊತ್ತಾಗುವ ಬಿಜಿಎಸ್ ಸಂಸ್ಥೆಗಳ ಲಾಭ ಪೂರ್ತಿಯನ್ನು ಆತನೇ ಅನುಭವಿಸುತ್ತಾನೆ. ಇದಕ್ಕೆ ಹೊರತಾಗಿ ಬೇರೆ ಯಾರೇ ಉತ್ತರಾಧಿಕಾರಿಯಾದರೆಂದರೆ ಶೇಖರ್ ಇಡೀ ಬಿಜಿಎಸ್ ಕಂಪೆನಿಯನ್ನು ಮಠದಿಂದ ಪ್ರತ್ಯೇಕಗೊಳಿಸಿ ಸ್ವತಂತ್ರವೆಂದು ಘೋಷಣೆ ಮಾಡುತ್ತಾನೆ. ಮುಂದೊಮ್ಮೆ ಅದೇ ಶೇಖರನ ಸೊತ್ತಾಗಿ ಬಿಜಿಎಸ್ ಪ್ರೈವೇಟ್ ಕಂಪೆನಿಯಾದರೂ ಅಚ್ಚರಿಯಿಲ್ಲ!

ಇಂಥ ಗುರಿಯಿಟ್ಟೇ ಶೇಖರ್ ಪೀಠಾಧಿಪತಿ ಬಾಲಗಂಗಾಧರರನ್ನು ಕೈಗೊಂಬೆ ಮಾಡಿಕೊಂಡ. ಬಿಜಿನೆಸ್ ಹೆಸರಿನ ಪ್ರತ್ಯೇಕ ಸಾಮ್ರಾಜ್ಯವನ್ನು ಹುಟ್ಟುಹಾಕಿದ. ತಾನು ಉತ್ತರಾಧಿಕಾರಿಯಾಗುವುದು ಸಾಧ್ಯವಾಗದೇ ಹೋದರೆ ಕನಿಷ್ಠ ಮಠದ ಮೇಲಿನ ಹಿಡಿತವಾದರೂ ತನ್ನ ಕೈಯಲ್ಲಿರಲೆಂದು ನಿರ್ಮಲಾನಂದ ಎಂಬ ಮರಿಸ್ವಾಮಿಯೊಬ್ಬರನ್ನು ಹುಟ್ಟುಹಾಕಿ ತಾನೇ ನಿಂತು ಅವರನ್ನು ಹಿರಿಯ ಸ್ವಾಮಿಯ ಅಂತಃಪುರದಲ್ಲಿ ಪ್ರತಿಷ್ಠಾಪಿಸಿದ.

ರಬ್ಬರ್ ಸ್ಟಾಂಪ್ ನಿರ್ಮಲಾನಂದ


ಮೂಲತಃ ಗುಬ್ಬಿ ತಾಲ್ಲೂಕು ಸಿ.ಎಸ್.ಪುರ ಹೋಬಳಿಯ ವಾಪನಹಳ್ಳಿಯವರಾದ ನಿರ್ಮಲಾನಂದ ಇಂಜಿನಿಯರಿಂಗ್ ಪದವೀಧರರಾದರೂ ಬುದ್ಧಿ ಬಲಿತಿಲ್ಲ. ಹೊರಪ್ರಪಂಚದ ಜ್ಞಾನವಿಲ್ಲ. ವ್ಯಾವಹಾರಿಕವಾಗಿ ಇನ್ನೂ ಮುಗ್ಧ ಹಸುಳೆಯಂತಿರುವ ನಿರ್ಮಲಾನಂದ ತೋರಿಕೆಗೆ ಹಿರಿಯ ಸ್ವಾಮಿಯ ಅಕ್ಕಪಕ್ಕ ಠಳಾಯಿಸುತ್ತಾರೆ. ಉಳಿಕೆ ವ್ಯವಹಾರವೆಲ್ಲ ಶೇಖರ್ ಸ್ವಾಮಿಯದೇ!

ಹಾಗೆ ನೋಡಿದರೆ ಇಡೀ ಆದಿಚುಂಚನಗಿರಿ ಸಂಸ್ಥಾನದ ಮಟ್ಟಿಗೆ ಬಾಲಗಂಗಾಧರರ ನಂತರದ ಸೀನಿಯಾರಿಟಿಯಿರುವುದು ಸದ್ಯ ಆದಿಚುಂಚನಗಿರಿ ದೇವಸ್ಥಾನದ ಉಸ್ತುವಾರಿ ಹೊತ್ತ ಪುರುಷೋತ್ತಮನಾಥರಿಗೆ. ಇವರಲ್ಲದೆ ಮಾಯಸಂದ್ರದ ಕಲ್ಪತರು ಆಶ್ರಮದ ಶಿವಕುಮಾರನಾಥ ಸ್ವಾಮಿ ಪ್ರಾಮಾಣಿಕರು ಮತ್ತು ಅನುಭವಿ. ವಿಜಯನಗರ ಶಾಖಾಮಠದ ಸೌಮ್ಯನಾಥರು ದಯಾಮಯಿ ಮತ್ತು ದೂರದೃಷ್ಟಿತ್ವದ ಮೇಧಾವಿ. ಶಿವಮೊಗ್ಗದ ಪ್ರಸನ್ನನಾಥ, ಕಾಶಿಯ ವಿದ್ಯಾಧರನಾಥ, ಚುಂಚನಗಿರಿಯ ಭೈರವನಾಥರಂಥ ಪೀಠನಿಷ್ಠ ಕಿರಿಯ ಸ್ವಾಮಿಗಳ ಹಿಂಡೇ ಉತ್ತರಾಧಿಕಾರಿ ಗಾದಿಗಾಗಿ ಸಜ್ಜಾಗಿ ನಿಂತಿದೆ.

ಇವರೆಲ್ಲರನ್ನೂ ಬದಿಗೊತ್ತಿ ತನ್ನ ಕೈಗೊಂಬೆ, ಚಿಕ್ಕಬಳ್ಳಾಪುರ ಶಾಖಾಮಠದ ನಿರ್ಮಲಾನಂದರನ್ನು ಕರೆತಂದು ಆದಿಚುಂಚನಗಿರಿ ಅಂತಃಪುರದಲ್ಲಿ ಪ್ರತಿಷ್ಠಾಪಿಸಿದ ಶೇಖರ್ ಸ್ವಾಮಿಯೇ ಸದ್ಯ ಇಡೀ ಸಾಮ್ರಾಜ್ಯದ ಅಧಿಪತಿ. ಹಿರಿಯ ಸ್ವಾಮಿಗೆ ಅರೆಪ್ರಜ್ಞೆ, ಬಾಲಗಂಗಾಧರನಾಥರ ಅದ್ಯಾವ ದೌರ್ಬಲ್ಯವನ್ನು ಬಳಸಿಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದಾನೋ ಕಾಲಭೈರವನೇ ಬಲ್ಲ. ಜೀವಂತ ಶವದಂಥ ಹಿರಿಯ ಸ್ವಾಮಿ ಬದುಕಿದ್ದರೇನೇ ಆತನಿಗೆ ಲಾಭ. ಪ್ರಜ್ಞೆ ಇರದೇಹೋದರೂ ದೇಹ ಉಸಿರಾಡುತ್ತಿದ್ದರೆ ಸಾಕು. ಅಷ್ಟರೊಳಗೆ ಅಳಿದುಳಿದ ಆಸ್ತಿಯನ್ನೂ ಲಪಟಾಯಿಸಿ ಕೊನೆಗೆ ಮಠ ಮತ್ತು ಪೀಠ ಬಿಟ್ಟು ಮಿಕ್ಕೆಲ್ಲವನ್ನೂ ತನ್ನ ಖಾಸಗಿ ಟ್ರಸ್ಟಿಗೆ ವರ್ಗಾಯಿಸುವುದು ಆತನ ಹುನ್ನಾರ.

ಕೊನೆಗಾಲದಲ್ಲಿ ಬಾಲಗಂಗಾಧರರಿಗೆ ಇದೆಂಥಾ ಗತಿ? ಒಕ್ಕಲಿಗರು ಹನಿಹನಿಗೂಡಿಸಿ ಕಟ್ಟಿದ 15 ಸಾವಿರ ಕೋಟಿಯ ಸಾಮ್ರಾಜ್ಯವನ್ನು ಸ್ವಾಮಿ ಬದುಕಿರುವಾಗಲೇ ಖದೀಮ ಶೇಖರ್ ಸ್ವಾಮಿ ದೋಚುತ್ತಿದ್ದಾನೆಂದರೆ ಒಕ್ಕಲಿಗರ ದೌರ್ಭಾಗ್ಯಕ್ಕೆ ಏನೆನ್ನಬೇಕು? ಕಾಲ ಮಿಂಚಿಲ್ಲ. ಇನ್ನಾದರೂ ಒಕ್ಕಲಿಗರು ಒಗ್ಗಟ್ಟಾಗಲಿ, ಹುಷಾರಾಗಲಿ, ಎಚ್ಚೆತ್ತುಕೊಳ್ಳಲಿ. ಸಮುದಾಯದ ಸೊತ್ತಾದ ಮಠವನ್ನು ರಕ್ಷಿಸಿಕೊಳ್ಳಲಿ.


- ರಾ. ಸೋಮನಾಥ್



ಜಮಖಂಡಿ ತಹಶೀಲ್ದಾರ್ ಸಿದ್ದನ ಹಸಿವಿಗೆ ತಾಲ್ಲೂಕೇ ಥಂಡ!

ಹೀಗೆಂದರೆ ಈ ರೀತಿಯೂ ಇರಬಹುದೆ... ಸಿದ್ದಪ್ಪ ಹುಲ್ಲೊಳ್ಳಿಯೆಂಬ ತಹಸೀಲ್ದಾರನ ಸುಂಗಾಟ ಕಂಡು ರೋಸ್ಹೋಗಿರುವ ಜಮಖಂಡಿ ತಾಲೂಕಿನ ಜನರ ಉದ್ಗಾರವಿದು. ಈತ ವಕ್ಕರಿಸಿದ ಎರಡು ವರ್ಷದೊಳಗೆ ಇಡೀ ಆಡಳಿತ ವ್ಯವಸ್ಥೆಯನ್ನೇ ಬಡಿದು ಬಾಯಿಗಿಟ್ಟುಕೊಂಡ ಪರಿ ಭಯಾನಕವಾದುದು. ಇವನ ದರ್ಬಾರಿನಲ್ಲಿ ನಡೆದ ದಂಧೆ, ಭಾನಗಡಿಗಳಿಗೆ ಲೆಕ್ಕವಿಲ್ಲ. ಪ್ರತೀ ಇಲಾಖೆಗಳನ್ನೂ ಆವರಿಸಿಕೊಂಡಿರುವ ಸಿದ್ದಪ್ಪನ ಚೇಲಾ ಪಡೆಯ ವಸೂಲಿ ಬಾಜಿ ಬಡಬಗ್ಗರನ್ನು ಬೆಚ್ಚಿಬೀಳಿಸುತ್ತಿದೆ.

ರಾಯಭಾಗ ತಾಲೂಕಿನ ಮುಗಳಖೇಡದವನಾದ ಸಿದ್ದಪ್ಪ ಬಡ ರೈತ ಕುಟುಂಬದಿಂದ ಬಂದವನು. ತನ್ಮೂಲಕ ರೈತಾಪಿ ಜನರ ಕಷ್ಟಕರ ಬದುಕನ್ನು ಕಣ್ಣಾರೆ ಕಂಡವನು. ಇಂಥಾ ಸಂಕಷ್ಟಗಳ ನಡುವೆ ಓದಿ ಕೆಲಸ ಸಿಗುವಷ್ಟರಲ್ಲಾಗಲೇ ಈ ಆಸಾಮಿಯ ಕಣ್ಮುಂದೆ ಕಾಂಚಾಣ ಥಕಧಿಮಿ ಶುರುವಿಟ್ಟುಕೊಂಡಿತ್ತು. ಈ ರೀತಿ ಕಮಾಯಿಯ ಕನಸಿನೊಂದಿಗೇ ಚಾಮರಾಜನಗರದಲ್ಲಿ ಪ್ರೊಭೆಷನರಿ ಅವಧಿ ಮುಗಿಸಿದ ಸಿದ್ದಪ್ಪ, ಈಗೊಂದು ಎರಡು ವರ್ಷದ ಹಿಂದೆ ಜಮಖಂಡಿಗೆ ವಕ್ಕರಿಸಿದ. ಅಂದಿನಿಂದ ಇಂದಿನವರೆಗೂ ದಣಿವರಿಯದೆ ಮೇಯುತ್ತಿರುವುದು ಈತನ ಹೆಚ್ಚುಗಾರಿಕೆ!




ಸಿದ್ದಪ್ಪ

ಜಮಖಂಡಿ ತಾಲೂಕಿಗೆ ತಹಸೀಲ್ದಾರನಾಗಿ ಬಂದ ಸಿದ್ದಪ್ಪ ಆರಂಭದಿಂದಲೇ ತನ್ನ ರಣಹಸಿವನ್ನು ಜಾಹೀರುಪಡಿಸಿದ. ಇದರಿಂದಾಗಿ ತಾಲೂಕಿನ ಎಲ್ಲ ಇಲಾಖೆಗಳ ಬಹುತೇಕ ಸಿಬ್ಬಂದಿ ತಮ್ಮ ಬಳಿ ಬಂದ ಬಡಪಾಯಿಗಳನ್ನು ಹಣಕ್ಕಾಗಿ ಪೀಡಿಸಲಾರಂಭಿಸಿದರು. ವಿಧವಾ ವೇತನ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನಗಳಲ್ಲೂ ಕಮಿಷನ್ ಪಡೆಯುವ ಹಾಳು ಚಾಳಿ ಸಿಬ್ಬಂದಿಯ ಮೈಗಂಟಿತು. ಅಂದಹಾಗೆ, ಇಂಥ ಪ್ರತೀ ದಂಧೆಯಲ್ಲೂ ಸಿದ್ದನಿಗೊಂದು ಪಾಲು ಇದ್ದೇ ಇದೆ.

ಸಿದ್ದಪ್ಪ ಸಾಹೇಬನ ಅಡ್ನಾಡಿ ಕೆಲಸಗಳು ಇಷ್ಟಕ್ಕೇ ನಿಲ್ಲುವುದಿಲ್ಲ, ಬೇರೆ ಬೇರೆ ಉದ್ದೇಶದ ಅರ್ಜಿದಾರರನ್ನು ಖುದ್ದಾಗಿ ಭೇಟಿಯಾಗುವ ಈತ ಇಂತಿಷ್ಟು ಹಣ ಕೊಡಬೇಕೆಂದು ಮಾತುಕತೆ ನಡೆಸಿ ಸಿಬ್ಬಂದಿಯನ್ನು ಕಾಣುವಂತೆ ಸೂಚಿಸುತ್ತಾನೆ. ಇಲ್ಲೀಗ ಒಂದೇ ಒಂದು ಪೆನ್ಷನ್ ಅರ್ಜಿ ಕದಲಬೇಕೆಂದರೂ ಪ್ರಭಾವಿಗಳ ಶಿಫಾರಸ್ಸು ಅತ್ಯಗತ್ಯ. ಆ ತಾಕತ್ತಿಲ್ಲದ ಮಂದಿ ಧನದಾಹಿ ಸಿಬ್ಬಂದಿ ಕೇಳಿದಷ್ಟು ಹಣ ಕೊಡುವುದು ಅನಿವಾರ್ಯ. ಇವೆರಡೂ ಆಗದವರು ತಹಸೀಲ್ದಾರ್ ಕಚೇರಿಯ ಹೊಸಿಲು ದಾಟಲೂ ಆಗದಂಥ ದರಿದ್ರ ಸ್ಥಿತಿ ನಿರ್ಮಾಣಗೊಂಡಿದೆ.

ರೈತರ ಜಮೀನಿನ ಪಾಲ್ಮ ಮಾಡಿಸುವುದರಿಂದ ಹಿಡಿದು ಪ್ರತಿಯೊಂದು ವಿಚಾರದಲ್ಲೂ ಆಸ್ತಿಯ ಮೌಲ್ಯಕ್ಕನುಗುಣವಾಗಿ ಪರ್ಸಂಟೇಜ್ ಫಿಕ್ಸ್ ಆಗಿದೆ. ಇನ್ನು ರೇಷನ್ ಅಂಗಡಿಯವರ ಪಾಡಂತೂ ಹೇಳತೀರದು. ಪ್ರತಿ ತಿಂಗಳು ಕಾರ್ಡುದಾರರಿಗೆ ಹಂಚಬೇಕಾದ ನ್ಯಾಯಯುತ ರೇಷನ್ ಪಡೆಯಲೂ ಮಾಮೂಲು ಸಲ್ಲಿಸಬೇಕಿದೆ. ಈ ಪರಿ ಬಡವರ ಅನ್ನಕ್ಕೂ ಕೈಯಿಟ್ಟಿರುವ ಸಿದ್ದಪ್ಪ ತನ್ನ ಕಚೇರಿ ನೌಕರರನ್ನು ಖಾಸಗಿ ಕೆಲಸಕ್ಕೆ ಬಳಸಿಕೊಂಡು ಸರ್ವಾಧಿಕಾರ ಮೆರೆಯುತ್ತಿದ್ದಾನೆ.

ಹಣ ಅಂತೊಂದು ಸಿಗುವುದಾದರೆ ಎಂಥಾ ಕೆಲಸಕ್ಕೂ ಸಿದ್ಧನಿರುವ ಸಿದ್ದಪ್ಪ ತಾಲೂಕಿನ ಅಕ್ರಮ ದಂಧೆಗಳನ್ನೆಲ್ಲ ತಂದೆಯ ಸ್ಥಾನದಲ್ಲಿ ನಿಂತು ಪೊರೆಯುತ್ತಿದ್ದಾನೆ, ಇಲ್ಲಿ ಯಾರು ಬೇಕಾದರೂ ಅಕ್ರಮ ದಂಧೆಗಳನ್ನು ಅನಾಯಾಸವಾಗಿ ನಡೆಸಬಹುದು. ಒಂದೇ ಒಂದು ಕಂಡೀಷನ್ ಅಂದರೆ, ಸಿದ್ದಪ್ಪನಿಗೆ ಪ್ರತೀತಿಂಗಳು ಮಾಮೂಲು ಅರ್ಪಿಸಬೇಕು. ಇದೆಲ್ಲದರಿಂದಾಗಿ ತಾಲೂಕಿನ ತುಂಬಾ ಹಿಂದೆಂದೂ ಕಂಡು ಕೇಳರಿಯದಷ್ಟು ಅಕ್ರಮ ಮರಳು ದಂಧೆ ಗರಿಗೆದರಿದೆ. ಮೈಗೂರ, ಶಿರಗುಪ್ಪಿ, ಕುಲ್ಲಳ್ಳಿ, ಸನಾಳ, ಮುತ್ತೂರ, ಕಡಕೋಳ ಮುಂತಾದ ಹಳ್ಳಿಗಳಲ್ಲಿ ಉಸುಕು ತೆಗೆಯುವ ಯಂತ್ರಗಳ ಅಬ್ಬರ ಮೇರೆ ಮೀರಿದೆ. ಇಂಥಾ ಮರಳು ಪ್ರತೀ ದಿನ ನೂರಾರು ಲಾರಿಗಳಲ್ಲಿ ಮಹಾರಾಷ್ಟ್ರಕ್ಕೆ ರವಾನೆಯಾಗುತ್ತಿದೆ. ಈ ದಂಧೆಯ ದಿನದ ವಹಿವಾಟು ಮೂವತ್ತು ಲಕ್ಷ ಮೀರುತ್ತದೆ. ಈ ಮರಳು ಮಾಫಿಯಾದ ಸಂಪೂರ್ಣ ವ್ಯವಹಾರ ನೋಡಿಕೊಳ್ಳುವವನು ಯಾಸೀನ್ ದ್ರಾಕ್ಷಿ ಎಂಬ ಗ್ರಾಮ ಲೆಕ್ಕಾಧಿಕಾರಿ. ಸಿದ್ದಪ್ಪನ ಬಲಗೈ ಬಂಟನಾದ ಈತ ಉಸುಕು ತೆಗೆಯುವ ಯಂತ್ರಗಳ ಮಾಲೀಕರಿಂದ ಪ್ರತೀ ತಿಂಗಳು ವಸೂಲಿ ಮಾಡಿ ತನ್ನ ಗುರುವಿನ ಕೈಗಿಡುತ್ತಾನೆ. ಸದ್ಯ ದ್ರಾಕ್ಷಿಯೊಬ್ಬನೇ ಸಿದ್ದಪ್ಪನಿಗೆ ಪ್ರತೀ ತಿಂಗಳು ಐದು ಲಕ್ಷಕ್ಕೂ ಹೆಚ್ಚು ಕಲೆಕ್ಷನ್ನು ಮಾಡಿಕೊಡುತ್ತಾನೆ. ಸಿದ್ದಪ್ಪನಿಗೆ ಇಂಥಾ ಹಲವಾರು ಭಂಟರಿರುವುದು ಬಹಿರಂಗ ಸತ್ಯ.



ಯಾಸೀನ್ ದ್ರಾಕ್ಷಿ

ಈ ಮರಳು ದಂಧೆಯ ಮೇಲೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಲವಾರು ಬಾರಿ ರೇಡು ಮಾಡಿದ್ದಾರೆ. ಆದರೆ ಸಿದ್ದಪ್ಪ ದಂಧೆಕೋರರ ಕೂದಲು ಕೊಂಕದಂತೆ ನೋಡಿಕೊಳ್ಳುತ್ತಾನೆ. ಈ ರೀತಿ ದಾಳಿ ನಡೆದ ತರುವಾಯ 'ಅಧಿಕಾರಿಗಳಿಗೆ ಕೊಡ್ಬೇಕು' ಅಂತ ವರಾತ ಶುರುವಿಟ್ಟುಕೊಳ್ಳುವ ದ್ರಾಕ್ಷಿ ವಸೂಲಿಯನ್ನು ದುಪ್ಪಟ್ಟು ಮಾಡುತ್ತಾನೆ. ಇವನ ದೇಖಾರೇಖಿಯಲ್ಲೇ ಸಿದ್ದಪ್ಪನಿಗೆ ಭಾರೀ ಆದಾಯ ಕೊಡುತ್ತಿರುವ ಇನ್ನೊಂದು ವ್ಯವಹಾರ ಅಕ್ರಮ ಇಟ್ಟಿಗಿ ಭಟ್ಟಿಗಳದ್ದು!

ತಾಲೂಕಿನಾದ್ಯಂತ ನಾಯಿಕೊಡೆಗಳಂತಿರುವ ಬಹುತೇಕ ಇಟ್ಟಿಗೆ ಭಟ್ಟಿಗಳಿಗೆ ಪರವಾನಗಿ ಇಲ್ಲ, ಕಾರ್ಮಿಕ ಇಲಾಖೆಯ ಅನುಮತಿಯೂ ಇಲ್ಲ, ಭಾರೀ ಶ್ರಮ ಬೇಡುವ ಅಪಾಯಕಾರಿಯಾದ ಈ ದಂಧೆಯಲ್ಲಿ ಕೆಲಸಗಾರರನ್ನು ಅತೀ ದಾರುಣವಾಗಿ ನಡೆಸಿಕೊಳ್ಳಲಾಗುತ್ತಿದೆ. ಕಾರ್ಮಿಕರಿಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನೂ ಕೊಡದೆ ಹಗಲೂರಾತ್ರಿ ದುಡಿಸಿಕೊಳ್ಳಲಾಗುತ್ತಿದೆ. ಇಂಥ ಅಕ್ರಮ ಭಟ್ಟಿಗಳ ಕೆಲ ಮಾಲೀಕರು ಕಾರ್ಮಿಕ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವುದು, ಪುರುಷ ಕಾರ್ಮಿಕರನ್ನು ದೈಹಿಕವಾಗಿ ಹಿಂಸಿಸುವುದು ಮಾಮೂಲಾಗಿ ಬಿಟ್ಟಿದೆ. ಇಂಥಾ ಭಟ್ಟಿಗಳಿಗೆ ದಿನನಿತ್ಯ ನದಿತಟದ ರ್‍ಯಾವಿ ಮಣ್ಣನ್ನು ಲಾರಿಗಟ್ಟಲೆ ತರಲಾಗುತ್ತದೆ. ಇದೂ ಕೂಡಾ ಅಕ್ರಮ. ಇಂಥವುಗಳ ಮಾಲೀಕರು ತಿಂಗತಿಂಗಳೂ ಸಿದ್ದಪ್ಪನಿಗೆ ಕಪ್ಪ ಸಲ್ಲಿಸುವುದರಿಂದಾಗಿ ಎಲ್ಲವೂ ಸಕ್ರಮ ಸ್ವರೂಪದಲ್ಲಿ ಕೆಲಸ ಮಾಡುತ್ತಿವೆ.



ಯಲ್ಲಪ್ಪ ಗುಬಚಿ

ಸಿದ್ದಪ್ಪನ ವಸೂಲಿ ಏಜೆಂಟ್ ಯಾಸಿನ್ ದ್ರಾಕ್ಷಿ ಖುದ್ದು ಅಕ್ರಮ ದಂಧೆಕೋರ. ಈತ ಕುಲ್ಲಳ್ಳಿ ಹಾಗೂ ಶಿರಗುಪ್ಪಿಯಲ್ಲೊಂದು ಇಟ್ಟಿಗೆ ಭಟ್ಟಿ ನಡೆಸುತ್ತಿದ್ದಾನೆ. ಇಂಥಾ ದಂಧೆ ಹಾಗೂ ವಸೂಲಿಯ ಪರಿಣಾಮವೆಂಬಂತೆ ದ್ರಾಕ್ಷಿಯೀಗ ಕೋಟಿಗಳಿಗೆ ತೂಗುತ್ತಾನೆ. ತಂದೆಯ ಸಾವಿನ ನಂತರ ಅನುಕಂಪದ ಆಧಾರದಲ್ಲಿ ಕೆಲಸ ಗಿಟ್ಟಿಸಿಕೊಂಡ ಈತನ ಸರ್ವೀಸಿನ ಒಟ್ಟು ಸಂಬಳದ ಲೆಕ್ಕ ಲಕ್ಷಗಳ ಆಸುಪಾಸಿನಲ್ಲಿದೆ. ಅಂಥಾದ್ದರಲ್ಲಿ ಕೋಟಿ ಕೋಟಿ ಎಲ್ಲಿಂದ ಬಂತೆಂಬ ಬಗ್ಗೆ ತನಿಖೆಯಾದರೆ ದ್ರಾಕ್ಷಿ ಜೈಲು ಸೇರುವುದು ಖಚಿತ.

ಇನ್ನು ಸಿದ್ದಪ್ಪನ ವಿಚಾರಕ್ಕೆ ಬಂದರೆ, ಹಲವಾರು ದಂಧೆಗಳ ಕಮಿಷನ್‌ಗಳಿಂದಲೇ ಕೊಬ್ಬಿರುವ ಈತ ದಮನಿತ ವರ್ಗದವರಿಂದ ಭೂಮಿ ಕಿತ್ತುಕೊಂಡು ಬೀದಿಗೆ ಬಿಡುವುದನ್ನು ಚಟವಾಗಿಸಿಕೊಂಡಿದ್ದಾನೆ. ಇದೇ ತಾಲೂಕಿನ ಕಾಲತಿಪ್ಪಿ ಗ್ರಾಮದ ಬಡ ಕುರುಬ ಜನಾಂಗದವರ 15 ಎಕರೆ ಜಮೀನನ್ನು ಸಿದ್ದಪ್ಪ ಅನಾಯಾಸವಾಗಿ ಆಪೋಶನ ತೆಗೆದುಕೊಂಡಿದ್ದಾನೆ. ಈ ದುಷ್ಟ ಕೆಲಸಕ್ಕೆ ಈತ ಬಳಸಿಕೊಂಡಿದ್ದು ಆ ಭಾಗದ ಪ್ರಬಲ ರೆಡ್ಡಿ ಸಮುದಾಯದವರನ್ನು. ಹೀಗೆ ಭೂಮಿ ಕಳೆದುಕೊಂಡ ರೈತರಿಗೆ ನ್ಯಾಯ ಕೊಡಿಸುವ ನೆಪದಲ್ಲೇ ಈ ಭಾಗದ ಸೋಕಾಲ್ಡ್ ಕುರುಬ ನಾಯಕನೊಬ್ಬ ಉಳಿದೈದು ಎಕರೆಯನ್ನು ತನ್ನ ಹೆಸರಿಗೇ ನೋಂದಾಯಿಸಿಕೊಂಡು ದುಷ್ಟತನ ಮೆರೆದಿದ್ದಾನೆ.

ಈ ತಾಲೂಕಿನ ಇನ್ನೊಂದು ಗ್ರಾಮ ಹನಗಂಡಿ. ಬಿಲ್ಲಪ್ಪ ದೇಸಾಯಿ ಎಂಬಾತ ಈ ಭಾಗದ ಪಾಳೇಗಾರನಾಗಿದ್ದನಂತೆ. ಈಗಲೂ ಈತನ ಮಕ್ಕಳ ಬಳಿ ಸಾವಿರಾರು ಎಕರೆ ಜಮೀನಿದೆ. ಇವರೆಲ್ಲ ತಹಸೀಲ್ದಾರ್ ಸಿದ್ದಪ್ಪನ ಸ್ವಜಾತಿಬಂಧುಗಳು. ದೇಸಾಯಿಯಿಂದ 40 ವರ್ಷಗಳ ಹಿಂದೆಯೇ 10 ಎಕರೆ ಭೂಮಿಯನ್ನು ಯಲ್ಲಪ್ಪ ಗುಬಚಿ ಎಂಬ ರೈತ ಭೂಸುಧಾರಣಾ ಕಾಯ್ದೆ ಮೂಲಕ ಪಡೆದು ಉಳುಮೆ ಮಾಡುತ್ತಿದ್ದ. ಈ ಜಮೀನು ಕುಡಚಿ ರಸ್ತೆಗಂಟಿಕೊಂಡಿರುವುದರಿಂದ ಇದೀಗ ಚಿನ್ನದ ಬೆಲೆ ಬಂದಿದೆ. ಇದು ದೇಸಾಯಿಯ ಮಗ ಬಾಬಾ ಸಾಹೇಬ ದೇಸಾಯಿಯ ಕಣ್ಣು ಕುಕ್ಕಿದೆ. ಈತ ಇದನ್ನು ಮತ್ತೆ ಕಬಳಿಸಿಕೊಳ್ಳುವ ಉದ್ದೇಶದಿಂದ ದಶಕದಿಂದೀಚೆಗೆ ಬಡಪಾಯಿ ಯಲ್ಲಪ್ಪನಿಗೆ ಕಿರುಕುಳ ಕೊಡುತ್ತಾ ಬಂದಿದ್ದ. ಈ ವಿವಾದವೀಗ ಹೈಕೋರ್ಟ್‌ನಲ್ಲಿದೆ.

ಆದರೆ ಸಿದ್ದಪ್ಪ ತಹಸೀಲ್ದಾರ್ ಆಗಿ ಬಂದ ತರುವಾಯ ದಲಿತ ಯಲ್ಲಪ್ಪನನ್ನು ಜಮೀನಿನಿಂದ ಹೊರದಬ್ಬಲೆತ್ನಿಸಿದ. ಹೈಕೋರ್ಟ್ ಈ ಕೇಸ್‌ನಲ್ಲಿ ಮೂಗು ತೂರಿಸದಂತೆ ಛೀಮಾರಿ ಹಾಕಿದ್ದರಿಂದ ಸದ್ಯಕ್ಕೆ ಬಡಪಾಯಿ ರೈತ ಯಲ್ಲಪ್ಪ ಬಚಾವಾಗಿದ್ದಾನೆ. ಇಂಥ ಅಡ್ನಾಡಿತನಗಳನ್ನೇ ಉಸಿರಾಗಿಸಿಕೊಂಡಿರುವ ಸಿದ್ದಪ್ಪ ಮಾತ್ರ ಆಸ್ತಿ ಮೇಲೆ ಆಸ್ತಿ ಮಾಡುತ್ತಾ ಆರಾಮಾಗಿದ್ದಾನೆ.


ಈ ರಣಹಸಿವಿನ ಆಸಾಮಿ ಇಡೀ ಜಮಖಂಡಿಯನ್ನೇ ಬಾಯಿಗಿಟ್ಟುಕೊಳ್ಳೋ ಮುನ್ನ ಒದ್ದೋಡಿಸಬೇಕಿದೆ.

• ಮಹಾಲಿಂಗಪ್ಪ ಆಲಬಾಳ

ಚಿಕ್ಕಮಗಳೂರು: ಗರಿಗೆದರಿದ ಟಿಂಬರ್ ಮಾಫಿಯಾ

ಚಿಕ್ಕಮಗಳೂರು ಜಿಲ್ಲೆ ಕಾಡುಗಳ್ಳರ ಕಾರಸ್ಥಾನವಾಗಿ ಬದಲಾಗಿದೆ. ಇಲ್ಲಿನ ಖದೀಮ ಅರಣ್ಯ ಡಿಎಫ್ಓ ವೆಂಕಟೇಶ್ ಎಂಬಾತನ ಕುರುಡುತನದಿಂದ ಮರಗಳ ಹನನ ಅವ್ಯಾಹತವಾಗಿ ಮುಂದುವರೆದಿದೆ. ಪಡೆದ ಪರಿಮಿತಿಗಿಂತ ಹೆಚ್ಚಿನ ಕಾಡು ಜಾತಿ ಮರಗಳನ್ನು ದಿನನಿತ್ಯ ಎಗ್ಗಿಲ್ಲದೆ ಕಡಿಯಲು ಈ ಪುಣ್ಯಾತ್ಮನೆ ಮುಖ್ಯ ಕಾರಣ. ಈ ದುಷ್ಟ ಕೆಲಸ ಹೀಗೆಯೇ ಮುಂದುವರೆದರೆ ಕೆಲವೇ ವರ್ಷಗಳಲ್ಲಿ ಮಲೆನಾಡು ಬಟಾಬಯಲಾದರೂ ಆಶ್ಚರ್ಯವಿಲ್ಲ.

ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಅತ್ಯಮೂಲ್ಯವಾದ ಮರಗಳಿವೆ. ಚಿಕ್ಕಮಗಳೂರು ಜಿಲ್ಲೆಯಂತೂ ತರಹೇವಾರಿ ಜಾತಿಯ ಮರಗಳಿಂದ ಸಮೃದ್ಧವಾಗಿದೆ. ಇಲ್ಲಿನ ಕಾಫಿ ತೋಟಗಳ ಪಕ್ಕದಲ್ಲೇ ಅರಣ್ಯ ಇಲಾಖೆಯ ಅದೆಷ್ಟೋ ಕಾಡು ಜಾತಿಯ ಮರಗಳಿವೆ. ಇವುಗಳೆಲ್ಲ ಟಿಂಬರ್ ಮಾಫಿಯಾದ ಗರಗಸಕ್ಕೆ ಸಿಕ್ಕು ಧರೆಗುರುಳುತ್ತಿವೆ. ಸಿಲ್ವರ್ ಮರಗಳನ್ನ ಕಡಿಯಲು ಯಾರಪ್ಪನ ಅಣತಿಯೂ ಬೇಕಿಲ್ಲ, ಮುಕ್ತ ಮಾರಾಟಕ್ಕೆ ಸರ್ಕಾರದ ಅನುಮತಿಯಿದೆ. ಆದರೆ ಪ್ಲಾಂಟರುಗಳ ಜಮೀನುಗಳಲ್ಲಿ ಕಾಡು ಜಾತಿ ಮರಗಳ ಕಡಿಯಲು ಅನುಮತಿ ಬೇಕು. ಅರಣ್ಯ ಇಲಾಖೆಯಿಂದ ಅನುಮತಿ ಪಡೆದು ಮರಗಳನ್ನು ಗುತ್ತಿಗೆದಾರರು ಕಡಿಯುವ ಪರಿಪಾಠವಿದೆ. ಆದರೆ ಹೆಸರಿಗಷ್ಟೇ ಪರವಾನಗಿ ಪಡೆದು ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಮರಗಳನ್ನ ಕಡಿದುರುಳಿಸುವುದು ದಿನನಿತ್ಯದ ಕಸುಬಾಗಿದೆ.



ಮಲೆನಾಡ ಪ್ರದೇಶವಾದ ಚಿಕ್ಕಮಗಳೂರು, ಕುದುರೆಮುಖ, ಕಳಸ, ಬಾಳೆಹೊನ್ನೂರು, ಮೂಡಿಗೆರೆ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಮರಗಳ ಹನನಕ್ಕೆ ಅನೇಕ ವರ್ಷಗಳ ಇತಿಹಾಸವಿದೆ. ಅನೇಕ ರಾಜಕಾರಣಿಗಳು, ಅಧಿಕಾರಿಗಳು ಅಕ್ರಮ ಮರಗಳ ಕಡಿತಲೆಯಲ್ಲಿ ಪಾಲ್ಗೊಂಡು ದಂಡ ಕಟ್ಟಿದ್ದೂ ಇದೆ.

ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಹೊನ್ನೆ, ಬೀಟೆ, ತೇಗ ಹಾಗೂ ವಿವಿಧ ಜಾತಿಯ ಕಾಡು ಮರಗಳು ಕಾಣೆಯಾಗುತ್ತಿವೆ.

ಆದರೆ ಅರಣ್ಯ ಇಲಾಖೆಯ ಅಧಿಕಾರಿಗಳು ಹೇಳುವುದೇ ಬೇರೆ. ಜಿಲ್ಲೆಯಲ್ಲಿ ಯಾವುದೇ ರೀತಿಯಲ್ಲಿ ಕಾನೂನುಬಾಹಿರವಾಗಿ ಮರಗಳ ಕಡಿತ ನಡೆದಿಲ್ಲ, ಇದಕ್ಕೆ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ ಅಂತ ಅಧಿಕಾರಿ ವರ್ಗ ಯಾಮಾರಿಸಲು ಹವಣಿಸುತ್ತಿದೆ. 2009-2010ರಲ್ಲಿ 16 ರಿಂದ 17 ಸಾವಿರ ಮರಗಳನ್ನು ಕಡಿಯಲು ಅರಣ್ಯ ಇಲಾಖೆ ಅನುಮತಿ ನೀಡಿದೆ. ಆದರೆ ಲಕ್ಷಾಂತರ ಮರಗಳ ಮಾರಣಹೋಮ ನಡೆದಿದೆ.

ಒಟ್ಟಾರೆ ಮರಗಳ್ಳರಿಂದ ಮಲೆನಾಡಿನ ಅದೆಷ್ಟೋ ಮರಗಳು ಬಲಿಯಾಗಿವೆ. ಇದು ಪ್ರಜ್ಞಾವಂತ ನಾಗರಿಕರ ಕಣ್ಣು ಕೆಂಪಗಾಗಿಸಿದೆ. ಅರಣ್ಯ ಇಲಾಖೆ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಅತ್ಯಮೂಲ್ಯವಾದ ಮರಗಳನ್ನು ಸಂರಕ್ಷಿಸಲು ಇನ್ನಾದರೂ ಮುಂದಾಗಬೇಕಿದೆ. ಮರಗಳ್ಳರೊಂದಿಗೆ ಶಾಮೀಲಾಗಿರುವ ಖದೀಮ ಅಧಿಕಾರಿಗಳನ್ನು ಕಿತ್ತೊಗೆಯದ ಹೊರತು ಇದು ಸಾಧ್ಯವಿಲ್ಲ. ಇದಾಗದಿದ್ದರೆ ಪರಿಸರವಾದಿಗಳ ಕಾನೂನಿನ ಹೋರಾಟ ಎದುರಿಸಬೇಕಾಗುವುದು ಅನಿವಾರ್ಯ. ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ನಿರ್ಧರಿಸಬೇಕಿದೆ.

• ಅಜೀಜ್ ಕಿರುಗುಂದ

ಬೀದಿಗೆ ಬೀಳಲಿದ್ದಾನೆ ಬೊಗಳೆ ಬ್ರಹ್ಮಾಂಡ!



ಅಂತೂ ಪ್ರಜ್ಞಾವಂತರನೇಕರಿಗೆ ರೇಜಿಗೆ ಹುಟ್ಟಿಸಿ ಮೌಢ್ಯ ಹರಡುತ್ತಿದ್ದ ಬಂಡಲ್ ಬ್ರಹ್ಮಾಂಡ ಬೀದಿಗೆ ಬೀಳೋ ಘಳಿಗೆಗೆ ಕ್ಷಣಗಣನೆ ಆರಂಭವಾಗಿದೆ. ಆತ ಇದೀಗಲೇ ಕರ್ನಾಟಕವೆಂಬ ಬ್ರಹ್ಮಾಂಡದ ಬಹುತೇಕ ಚಾನೆಲ್‌ಗಳನ್ನು ಸುತ್ತಿ ಬಂದಿರುವುದರಿಂದ ಉಳಿದ ವಾಹಿನಿಗಳಿಗೆ ಅಟಕಾಯಿಸಿಕೊಳ್ಳೋ ಸನ್ನಾಹದಲ್ಲಿದ್ದಾನೆ.

ಇಡೀ ಜಗತ್ತು ಹಾಗೇ ಇದೆ. ಜಗನ್ಮಾತೆ ...ವಿಗಿಳಿಯಲೂ ಇಲ್ಲ ಪ್ರಳಯವಾಗಲೂ ಇಲ್ಲ. ...ದರೆ ಇದೆಲ್ಲ ಆಗೇ ತೀರುತ್ತದೆಂದಿದ್ದ ಹರುಕು ...ಬಾಯಿ ಜ್ಯೋತಿಷಿ ನರೇಂದ್ರ ಬಾಬು ಶರ್ಮಾ ...ಲಿಯಾಸ್ ಬಂಡಲ್ ಬ್ರಹ್ಮಾಂಡನ ಪಾಲಿಗೆ ...ಹಾ ಪ್ರಳಯವೊಂದು ಸಂಭವಿಸಿದೆ. ಇಡೀ ...ಗತ್ತೇ ತನ್ನ ಅಣತಿಯಂತೆ ನಡೆಯುತ್ತದೆಂಬಂತೆ ...ಳಾಸು ಕೊಡುತ್ತಿದ್ದ ಈತ ಅಸಹಾಯಕನಾಗಿ ...ಈ ಕನ್ನಡ ವಾಹಿನಿಯಿಂದ ಹೊರದಬ್ಬಿಸಿಕೊಳ್ಳುವ ...ಕಲ ಲಕ್ಷಣಗಳೂ ಗೋಚರಿಸುತ್ತಿವೆ. ...ಚೂಕಡಿಮೆ ನಡುಬೀದಿಯಲ್ಲಿರುವ ಸದರಿ ...ಖಾಂಡ ಜ್ಯೋತಿಷಿಗಳೀಗ ತಮ್ಮ 'ಅಖಂಡ' ...ಹ ಪ್ರತಿಷ್ಠಾಪಿಸಲೊಂದು ಜಾಗಕ್ಕಾಗಿ ತಲಾಶು ...ಡೆಸಲಾರಂಭಿಸಿದ್ದಾರೆ!

ಬಿಟ್ಟಿ ಕೂಳು ತಿಂದು ಕೊಬ್ಬಿದ ಅಬ್ಬೇಪಾರಿ ...ಯಂತೆಯೂ ಮಾನಸಿಕ ಸ್ಥಿಮಿತ ಕಳಕೊಂಡವ ...ನಂತೆಯೂ ಕಾಣಿಸುವ ನರೇಂದ್ರ ಶರ್ಮನ ವಿಕೃತಿ ...ಮೊದಲು ತೆರೆದುಕೊಂಡಿದ್ದು ಕಸ್ತೂರಿ ವಾಹಿನಿ ...ಯಲ್ಲಿ. ಕೆಲ ಮೂರ್ಖ ಶಿಖಾಮಣಿಗಳು ಈ ...ಗಲ್ಬಾಜಿಯನ್ನು ಗುರೂಜಿ ಅಂತ ಕರೆಯಲಾರಂಭಿ...ದರು. ಮುಠ್ಠಾಳರನೇಕರು ಟೀವಿ ಮುಂದೆ ...ಸ್ಥಾಯಿಸಲಾರಂಭಿಸಿದ್ದೇ ಈ ಕಾರ್ಯಕ್ರಮದ ...ಟಿಆರ್‌ಪಿ ರೇಟೂ ಏರತೊಡಗಿತು. ಆದರೆ ...ಯೋಗ್ಯತೆ ಮೀರಿ ಸಿಕ್ಕ ಪ್ರಸಿದ್ಧಿಯಿಂದಾಗಿ ...ಬಂಡಲ್ ಶರ್ಮನೊಳಗಿನ ವಿಕೃತಿಗಳೆಲ್ಲ ತೊಳೆಸಿ ...ಕೊಂಡಂತೆ ಹೊರಬರಲಾರಂಭಿಸಿ ಕರೆ ಮಾಡಿದ ...ಹೆಂಗಳೆಯರಿಗೆಲ್ಲಾ ಕೆಟ್ಟಾ ಕೊಳಕ ಬೈಗುಳಗಳ ಮೂಲಕ ಅಟಕಾಯಿಸಿಕೊಳ್ಳಲಾರಂಭಿಸಿದ. ಇದು ...ವಿಪರೀತವಾದಾಗ ಕಸ್ತೂರಿ ಮ್ಯಾನೇಜ್‌ಮೆಂಟು ...ಗೇಟ್‌ಪಾಸ್ ನೀಡಿದ್ದೇ, ಸುವರ್ಣ ವಾಹಿನಿಗೆ ಅಮರಿ...ಕೊಂಡಿದ್ದ. ಅಲ್ಲೂ ಹಳೇ ಚಾಳಿ ಮುಂದುವರೆಸಿ ಮತ್ತೆ ...ಹೊರಬಿದ್ದವನು ನೆಲೆಕಂಡುಕೊಂಡಿದ್ದು ಝೀ ಕನ್ನಡ ...ವಾಹಿನಿಯಲ್ಲಿ.

ನರೇಂದ್ರ ಶರ್ಮನ ಬಾಕಿ ವಿಕೃತಿಗಳಿಗೆಲ್ಲಾ ಝೀ ...ಕನ್ನಡ ವೇದಿಕೆಯಾದದ್ದೀಗ ಅಸಹ್ಯಕರ ಇತಿಹಾಸ. ಈ ...ವಾಹಿನಿಯ ವೇದಿಕೆಯಲ್ಲಿ ಶರ್ಮಾ ಸುಳ್ಳುಗಳ ಹಿಂದೆ ...ಸುಳ್ಳು ಪೋಣಿಸುತ್ತಾ ಪ್ರೋಗ್ರಾಮು ನಡೆಸಲಾರಂಭಿಸಿದ. ...'ರಾ ಟಿಆರ್‌ಪಿ ಆಸೆಗೆ ಬಾಯಗಲಿಸಿದಂತೆ' ವರ್ತಿಸಿದ ...ಝೀ ವಾಹಿನಿಯ ಆಡಳಿತ ಮಂಡಳಿ ಅದೆಲ್ಲವನ್ನು ...ಸಂತೋಷದಿಂದ ಸಹಿಸಿಕೊಳ್ಳಲಾರಂಭಿಸಿತು. ಇದರಿಂದ ...ನ್ನ ಕ್ವಿಂಟಾಲು ಬಾಡಿ ಆಕಾಶದಲ್ಲಿ ತೇಲಾಡಿದಂತೆ ...ಉತ್ತೇಜಿತನಾದ ಶರ್ಮಾ ಅದೊಂದು ದಿನ ಇದ್ದಕ್ಕಿದ್ದಂತೆ ...ಬಿದ್ದು ಜಗನ್ಮಾತೆಯೇ ಭೂಮಿಗಿಳಿಯುವುದಾಗಿ ತನಗೆ ...ಹೇಳಿರುವುದಾಗಿಯೂ, ಅದರಿಂದಲೇ ಪ್ರಳಯ ಸಂಭವಿಸು...ವುದಾಗಿಯೂ ಭಯಂಕರ ಬುರುಡೆ ಬಿಟ್ಟ. ಐದೆಣ್ಣೆ ದೀಪ ...ಹಚ್ಚುವಂತೆ ಫರ್ಮಾನನ್ನೂ ಹೊರಡಿಸಿದ. ಇದಕ್ಕೆ ಜನ ಮರುಳಾದ ರೀತಿ ಜಗತ್ತಲ್ಲಿ ಎಂಥಾ ಮೂರ್ಖರಿದ್ದಾರೆಂಬುದಕ್ಕೆ ಹಾಗೂ ಮೂರ್ಖತನಕ್ಕೆ ಎಂಥಾ ಲಾಭದಾಯಕ ಮಾರುಕಟ್ಟೆ ಮೌಲ್ಯವಿದೆಯೆಂಬುದಕ್ಕೆ ಪಕ್ಕಾ ಸಾಕ್ಷಿಯಾಯಿತು.

ಪ್ರಳಯಕ್ಕೆ ನಿಗದಿಗೊಳಿಸಿದ ಗಡುವುಗಳೆಲ್ಲವೂ ಮುಗಿದು ಮುಖಭಂಗವಾದರೂ ನರೇಂದ್ರ ಶರ್ಮಾ ಭಂಡತನ ಪ್ರದರ್ಶಿಸಲಾರಂಭಿಸಿದ. 'ನಾನು ಹೇಳಿದ್ದೇನೆಂಬ ಕಾರಣಕ್ಕಾದರೂ ಜಗನ್ಮಾತೆ ಪ್ರಳಯ ಮಾಡೇ ತೀರುತ್ತಾಳೆ' ಅಂತ ಮಾನಸಿಕ ಅಸ್ವಸ್ಥನಂತೆ ಅರಚಾಡಲಾರಂಭಿಸಿದ. ಈ ರೀತಿ ಶರ್ಮನ ರಂಪಾಟಗಳು ಮೇರೆ ಮೀರಿದ್ದೇ ಮಾಧ್ಯಮಗಳು ಅಟ್ಟಾಡಿಸಲಾರಂಭಿಸಿದವು. 'ಲಂಕೇಶ್' ಕೂಡಾ ಬಂಡಲ್ ಬ್ರಹ್ಮಾಂಡನ ಪೂರ್ತಿ ಜಾತಕ ಜಾಲಾಡಿತ್ತು. ಕೆಲ ಬ್ಲಾಗುಗಳೂ ಶರ್ಮಾ ವಿರುದ್ಧ ಕಹಳೆ ಮೊಳಗಿಸಲಾರಂಭಿಸಿದವು. ಆದರೂ ಕೂಡಾ ಝೀ ಟೀವಿಯಲ್ಲಿ ಕುಕ್ಕರಿಸಿದ್ದ ಗಲೀಜು ಬ್ರಹ್ಮಾಂಡ ಮಿಸುಕಾಡಿರಲಿಲ್ಲ.

ಝೀ ಆಡಳಿತ ಮಂಡಳಿಯಂತೂ ಈ ಅಸಹ್ಯವನ್ನು ಬೀದಿಗೆಸೆಯುವ ಬದಲು ಸಪೋರ್ಟ್ ಮಾಡಲಾರಂಭಿಸಿತು. ಬೊಟ್ಟಿ ಸಮಾವೇಶ ನಡೆಸಿ ಕಲ್ಪ ಜ್ಯೋತಿಷಿಯನ್ನು ವೈಭವೀಕರಿಸುವ ಕೆಲಸ ಶುರುವಿಟ್ಟಿತ್ತು. ಇದರಿಂದ ಉತ್ತೇಜಿತನಾದ ಬ್ರಹ್ಮಾಂಡ ಮತ್ತಷ್ಟು ಕೊಳಕು ಕಕ್ಕಲಾರಂಭಿಸಿದ. ಮಹಿಳೆಯರು ಚೂಡಿದಾರ್, ಜೀನ್ಸ್ ತೊಟ್ಟರೆ ಕ್ಯಾನ್ಸರ್ ಬರೋದು ಖಂಡಿತ ಅಂತೆಲ್ಲ ಏನೇನೋ ಒದರಲಾರಂಭಿಸಿದ.

ಇತ್ತೀಚೆಗಂತೂ ಮಾನಸಿಕವಾಗಿ-ದೈಹಿಕವಾಗಿ ಮೆಂಟಲ್‌ನಂತೆ ಕಾಣ ಹತ್ತಿದ್ದ. ಇದರೊಂದಿಗೆ ವಿಪರೀತ ಧನದಾಹವನ್ನು ಆವಾಹಿಸಿಕೊಂಡಿದ್ದ ಶರ್ಮಾ ಹೆಚ್ಚಿನ ಹಣಕ್ಕಾಗಿ ಪದೇಪದೆ ಡಿಮ್ಯಾಂಡಿಡುತ್ತಿದ್ದ. ಈ ಆಸಾಮಿಯ ವಿಕೃತಗಳನ್ನೆಲ್ಲ ಸಹಿಸಿಕೊಂಡಿದ್ದ ಝೀ ಆಡಳಿತ ಮಂಡಳಿಗೆ ಆತನ ಹಣದ ಹುಚ್ಚು ರೇಜಿಗೆ ಹುಟ್ಟಿಸಿತ್ತು. ಆದುದರಿಂದಲೇ ಬಂಡಲ್ ಬ್ರಹ್ಮಾಂಡವನ್ನು ಒದ್ದೋಡಿಸಲು ತೀರ್ಮಾನಿಸಿದ ಸುದ್ದಿಯಿದೆ.ಆದರೆ ಮತ್ತೆ ವಕ್ಕರಿಸಲು ಬ್ರಹ್ಮಾಂಡ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾನೆ. ಝೀ ಮುಖ್ಯಸ್ಥರು ಈ ಅಸಹ್ಯವನ್ನು ಮತ್ತೆ ಮೆತ್ತಿಕೊಂಡರೆ ಅದಕ್ಕಿಂತ ವಿಪರ್ಯಾಸ ಬೇರೊಂದಿಲ್ಲ.

ಇದರಲ್ಲಿ ಕೇವಲ ನರೇಂದ್ರ ಶರ್ಮನಷ್ಟೇ ತಪ್ಪಿತಸ್ಥನಲ್ಲ. ಆತನ ಒಟ್ಟಾರೆ ವಿಕೃತತೆಗಳಲ್ಲಿ ಜನಸಾಮಾನ್ಯರ ಪಾಲೂ ಬೆಟ್ಟದಷ್ಟಿದೆ. ಈ ಮತಿಗೇಡಿ ಏನೇನೋ ಒದರಿದನೆಂದಾಕ್ಷಣ ಅದನ್ನೇ ನಂಬಿ ಅಖಾಡಕ್ಕಿಳಿಯುವುದು ಮೂರ್ಖತನ ಮಾತ್ರವಲ್ಲ, ಅಸಹ್ಯವೂ ಹೌದು.

ಅಂತೂ ಪ್ರಜ್ಞಾವಂತರನೇಕರಿಗೆ ರೇಜಿಗೆ ಹುಟ್ಟಿಸಿ ಮೌಢ್ಯ ಹರಡುತ್ತಿದ್ದ ಬಂಡಲ್ ಬ್ರಹ್ಮಾಂಡ ಬೀದಿಗೆ ಬೀಳೋ ಘಳಿಗೆಗೆ ಕ್ಷಣಗಣನೆ ಆರಂಭವಾಗಿದೆ. ಆತ ಇದೀಗಲೇ ಕರ್ನಾಟಕವೆಂಬ ಬ್ರಹ್ಮಾಂಡದ ಬಹುತೇಕ ಚಾನೆಲ್‌ಗಳನ್ನು ಸುತ್ತಿ ಬಂದಿರುವುದರಿಂದ ಉಳಿದ ವಾಹಿನಿಗಳಿಗೆ ಅಟಕಾಯಿಸಿಕೊಳ್ಳೋ ಸನ್ನಾಹದಲ್ಲಿದ್ದಾನೆ. ಇಂಥಾ ಅಸಹ್ಯಕ್ಕೆ ಜಾಗ ಕೊಡುವಷ್ಟು ಯಾವ ಚಾನೆಲ್ಲುಗಳೂ ಬರಗೆಟ್ಟಿಲ್ಲವೆಂಬುದು ಸದ್ಯದ ನಂಬಿಕೆ.

ಜಗತ್ತಿನ ಚರಾಚರಗಳ ಚಲನೆಯೂ ತನಗೆ ತಿಳಿಯುತ್ತದೆಂಬಂತೆ ಹಾರಾಡುತ್ತಿದ್ದವನು ನರೇಂದ್ರ ಶರ್ಮ. ಇಂಥವನೀಗ ತಾನೇ ಕಸುಬು ಕಳಕೊಳ್ಳುವ ಹೆದರಿಕೆಯಿಂದ ಕಂಗಾಲಾಗಿದ್ದಾನೆ. ಝೀ ವಾಹಿನಿ ಮುಖ್ಯಸ್ಥರು ಇದೀಗ ತೆಗೆದುಕೊಂಡಿರುವ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಹಾದಿ ಬೀದಿಗಳಲ್ಲೇ 'ಬೃಹತ್ ಬ್ರಹ್ಮಾಂಡ' ಅವತರಿಸುವುದು ನಿಶ್ಚಿತ!

ಗುಲ್ಬರ್ಗಾ: ಕಳ್ಳ ಪೋಲೀಸರಿಗೆ ಹಂತಕರೂ ನೆಂಟರು!



ಗುಲ್ಬರ್ಗಾ ಜಿಲ್ಲೆಗೆ ಇದೀಗ ಎಸ್ಪಿಯಾಗಿ ಬಂದಿರುವ ಮಧುಕರ ಪವಾರ್ ...ಪೊಲೀಸ್ ಠಾಣೆ ಸ್ವಚ್ಛವಾಗಿರುವಂತೆ ನೋಡಿಕೊಳ್ಳಿ ಎಂದು ತಾಕೀತು ಮಾಡಿ...ದ್ದಾರೆ. ಅಲ್ಲದೆ ಪೊಲೀಸರು ಜನಸ್ನೇಹಿಯಾಗಿರಬೇಕು ಎಂದೂ ತಿಳಿಹೇಳಿದ್ದಾರೆ. ...ಆದರೆ ಜಿಲ್ಲೆಯ ಯಾವೊಬ್ಬ ಪೊಲೀಸನೂ ಯಾವ ಹಿತವಚನಗಳನ್ನೂ ...ಕೇಳುವ ಸ್ಥಿತಿಯಲ್ಲಿಲ್ಲ. ಇತ್ತೀಚೆಗೆ ಪೊಲೀಸರೇ ಎಟಿಎಂ ಒಡೆಯಲೆತ್ನಿಸಿ ...ಸಿಕ್ಕಿಬಿದ್ದು... ತಗುಲಿಕೊಳ್ಳುವ ಮೂಲಕ ಈ ಇಲಾಖೆ ಯಾವ ಪಾತಾಳದಲ್ಲಿದೆಯೆಂಬುದು ...ಜಗಜ್ಜಾಹೀರಾಗಿದೆ.

ಆಳಂದ ಠಾಣೆಯ ಇಬ್ಬರು ಪೇದೆಗಳೇ ದರೋಡೆಗೆತ್ನಿಸಿದ ಆತಂಕಕಾರಿ ...ಘಟನೆಯಿದು. ಪೊಲೀಸರಾದ ಅಂಬಾರಾಯ ಚಿಂಚನಸೂರ ಹಾಗೂ ವೆಂಕಟೇಶ್ ...ಗುಲ್ಬರ್ಗಾ ಎಂಬಿಬ್ಬರದ್ದು ರಾತ್ರಿ ಪಾಳಿ ಕೆಲಸ. ದರೋಡೆ, ಕಳ್ಳತನಗಳು ...ಸಾಮಾನ್ಯ...ಮೂಲಾಗಿರುವ ಈ ಭಾಗದಲ್ಲಿ ರಾತ್ರಿ ಪಾಳಿ ಸಿಬ್ಬಂದಿ ಎಚ್ಚರದಿಂದಿರುವುದು ...ಅಗತ್ಯ. ಆದರೆ ಈ ಇಬ್ಬರು ಪೇದೆಗಳು ಲಾಗಾಯ್ತಿನಿಂದಲೂ ತಾವೇ ದರೋಡೆ ...ನಡೆಸಿ ಶ್ರೀಮಂತರಾಗಲು ಹವಣಿಸುತ್ತಿದ್ದರು. ಕಳೆದ ಮೇ 26ರ ರಾತ್ರಿ ...ತಮ್ಮ ತೆವಲಿಗೊಂದು ಮುಹೂರ್ತವಿಟ್ಟೇ ಗಸ್ತಿಗಿಳಿದು, ನಸುಕಿನ ಸಮಯದಲ್ಲಿ ...ಎಟಿಎಂ ಒಡೆದು ಹಣ ಲೂಟಿ ಮಾಡಲೆತ್ನಿಸಿದರು. ಇವರೆಂಥಾ ಮುಠ್ಠಾಳರೆಂದರೆ ...ಎಟಿಎಂಗಳಲ್ಲಿ ಸಿಸಿ ಕ್ಯಾಮೆರಾದ ಕಣ್ಗಾವಲಿರುತ್ತದೆಂಬ ಪ್ರಾಥಮಿಕ ತಿಳಿವಳಿಕೆಯೂ ...ಇವರಿಗಿರಲಿಲ್ಲ. ಈ ಮೂರ್ಖ ಪೇದೆಗಳು ಎಟಿಎಂ ಒಡೆಯಲು ಪ್ರಯತ್ನ ...ನಡೆಸಿದ್ದೇ ನಡೆಸಿದ್ದು, ಅದೆಲ್ಲವೂ ಸಿಸಿ ಕ್ಯಾಮರಾದಲ್ಲಿ ...ಚಿತ್ರೀಕರಣಗೊಂಡಿತ್ತು. ತಾವು ಮಾಡಿದ ಘನಕಾರ್ಯ ...ಯಾರಿಗೂ ತಿಳಿಯದೆಂದುಕೊಂಡಿದ್ದ ಪೇದೆಗಳು ದಿನ ...ಕಳೆಯುತ್ತಲೇ ಚಿತ್ತಲಾಗಿದ್ದಾರೆ. ಇದು ನಿಜಕ್ಕೂ ಅತ್ಯಂತ ...ನಾಚಿಕೆಯ ಘಟನೆ. ಪೊಲೀಸರೇ ಕಳ್ಳರಾದರೆ ಸಮಾಜದ ...ಗತಿಯೇನೆಂದು ಕಂಗಾಲಾಗುವ ಸರದಿ ಜನಸಾಮಾನ್ಯರದ್ದು.

ಇದು ಕೇವಲ ಒಂದು ಠಾಣೆಯ ಕಥೆಯಲ್ಲ. ...ಗುಲ್ಬರ್ಗಾ ಜಿಲ್ಲೆಯ ಬಹುತೇಕ ಪೊಲೀಸರು ಒಂದಿ...ಲ್ಲೊಂದು ಅಡ್ಡದಾರಿ ಹಿಡಿದ ಘಟನೆಗಳು ಆಗಾಗ ...ಹೊರಬೀಳುತ್ತಿರುತ್ತವೆ. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕೆಡದಂತೆ ನೋಡಿಕೊಳ್ಳಬೇಕಾದ ಪೊಲೀಸರೇ ತಮ್ಮ ದುರ್ನಡತೆ, ದುರಾಚಾರ ಹಾಗೂ ಕಳ್ಳ-ಕಾಕರಿಗೆ ಉತ್ತೇಜನ ನೀಡುತ್ತಿರುವ ಸಂಗತಿ ಇಲ್ಲಿ ಮಾಮೂಲು. ಅಧಿಕಾರ ದುರುಪಯೋಗ ಪ್ರಕರಣದಲ್ಲಿ ಡಿವೈಎಸ್ಪಿ ಮಧುರವೀಣಾ ಅವರನ್ನು ಎ ಉಪವಿಭಾಗದಿಂದ ಐಜಿಪಿ ಕಚೇರಿಗೆ ವರ್ಗಾಯಿಸಲಾಗಿದೆ. ಅದೇ ರೀತಿ ಆಳಂದ ಎಟಿಎಂ ಒಡೆದು ದೋಚಲು ಹೊಂಚು ಮಾಡಿದ ಪೊಲೀಸ್ ಪೇದೆಗಳನ್ನು ಸಸ್ಪೆಂಡ್ ಮಾಡಲಾಗಿದೆ. ಆದರೆ ಪೊಲೀಸ್ ಇಲಾಖೆಯ ಮಾನವನ್ನು ಹರಾಜು ಹಾಕಿರುವ ಇವರುಗಳಿಗೆ ಇಷ್ಟೇ ಶಿಕ್ಷೆ ಸಾಕೆ ಎಂದು ಜನ ಬೀದಿ ಬೀದಿಗಳಲ್ಲಿ ಮಾತಾಡುತ್ತಿದ್ದಾರೆ.



ಇಂಥಾ ಘಟನೆಗಳನ್ನ ಅರಗಿಸಿಕೊಳ್ಳುವ ಮುಂಚೆಯೇ ಜಿಲ್ಲೆಯ ಜನರಿಗೆ ಮತ್ತೊಂದು ಶಾಕ್ ತಗುಲಿದೆ. ಶಹಾಪುರ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ರಾಜ್‌ಕುಮಾರ್ ವಾಜಂತ್ರಿ ಕೊಲೆ ಸುಪಾರಿ ಕೇಸೊಂದರಲ್ಲಿ ಕ್ರಿಮಿನಲ್‌ಗಳಿಗೆ ಸಹಕರಿಸಿ ಅರೆಸ್ಟಾಗಿದ್ದಾನೆ. ಇದು ಬೆಂಗಳೂರು ಭೂಗತ ಜಗತ್ತಿನ ನಟೋರಿಯಸ್ ಪಾತಕಿಗಳಾದ ಬೆತ್ತನಗೆರೆ ಸೀನ-ಶಂಕರರ ನಡುವಿನ ವೈಷಮ್ಯದ ರಿಮು. ಸೀನ-ಶಂಕರ ಇಬ್ಬರೂ ಜೈಲಿನಲ್ಲಿದ್ದಾರೆ. ಆದರೆ ಒಬ್ಬರನ್ನೊಬ್ಬರು ಮುಗಿಸುವ ಹುನ್ನಾರ ಮಾತ್ರ ಅವಿರತವಾಗಿ ನಡೆಯುತ್ತಿದೆ. ಇತ್ತೀಚೆಗೆ ಮೈಸೂರು ಜೈಲಲ್ಲೇ ಸೀನನ್ನ ಮುಗಿಸಲು ಶಂಕರ ಕೈದಿಯೊಬ್ಬನಿಗೆ ಸುಪಾರಿ ಕೊಟ್ಟಿದ್ದ. ಆದರೆ ಈ ಕೊಲೆ ಯತ್ನದಿಂದ ಸೀನ ಕೂದಲೆಳೆಯ ಅಂತರದಲ್ಲಿ ಪಾರಾಗಿದ್ದ. ತದನಂತರ ಸೀನ ಗುಲ್ಬರ್ಗ ಜೈಲಿಗೆ ಸ್ಥಳಾಂತರಗೊಂಡಿದ್ದ. ಜಿದ್ದಿಗೆ ಬಿದ್ದ ಸೀನ ಅಲ್ಲಿಂದಲೇ ಶಂಕರನಿಗೊಂದು ಗತಿ ಕಾಣಿಸಲು ಸ್ಕೆಚ್ ಹಾಕಿದ್ದ. ಈ ಸುಪಾರಿ ಪಡೆದ ಹಂತಕರಿಗೆ ನೆರವು ನೀಡಿದ ಆರೋಪ ಸದ್ಯ ಸರ್ಕಲ್ ಇನ್ಸ್‌ಪೆಕ್ಟರ್ ರಾಜ್‌ಕುಮಾರ್ ಮೇಲಿದೆ.

ಸುಪಾರಿ ಹಂತಕರು ಜೈಲಿಗೆ ಹೋಗಿ ಸೀನನೊಂದಿಗೆ ಮಾತುಕತೆ ನಡೆಸಲು ರಾಜ್‌ಕುಮಾರ್ ಸಹಕರಿಸಿದ್ದ. ಈತ ಹಂತಕರೊಂದಿಗೆ ನಂಟು ಹೊಂದಿರುವ ಹಲವಾರು ದಾಖಲೆಗಳು ಅಧಿಕಾರಿಗಳ ಬಳಿಯಿದೆ. ರಾಜ್‌ಕುಮಾರ್ ಹಂತಕರೊಂದಿಗೆ ಪಾರ್ಟಿ ನಡೆಸಿದ ಪಕ್ಕಾ ದಾಖಲೆಯೂ ಅವರ ಕೈಯಲ್ಲಿದೆ. ಈ ಬಗ್ಗೆ ರಾಜ್‌ಕುಮಾರ್ ವಿರುದ್ಧವೊಂದು ದೂರೂ ದಾಖಲಾಗಿದೆ. ಈ ಬಗ್ಗೆ ತನಿಖೆಗಿಳಿದ ಅಧಿಕಾರಿಗಳಿಗೆ ರಾಜ್‌ಕುಮಾರ್ ಹಂತಕರೊಂದಿಗೆ ಶಹಾಪುರ ಬಾರ್‌ನಲ್ಲಿ ಪಾರ್ಟಿ ನಡೆಸಿದ ಮಾಹಿತಿಗಳೂ ಸಿಕ್ಕಿವೆ. ಇಂತಹುದೊಂದು ಆಘಾತಕಾರಿ ಘಟನೆ ಜಗಜ್ಜಾಹೀರಾಗುತ್ತಲೇ ಅಧಿಕಾರಿಗಳು ರಾಜ್‌ಕುಮಾರ್‌ನನ್ನು ಅರೆಸ್ಟ್ ಮಾಡಿದ್ದಾರೆ.

ಜನಪರ ಸಂಘಟನೆಗಳು ಯಾವುದಾದರೂ ಚಳವಳಿ ನಡೆಸುತ್ತಿದ್ದರೆ, ತಮ್ಮ ಹಕ್ಕೊತ್ತಾಯಕ್ಕಾಗಿ ಸಾಮಾನ್ಯರು ಸತ್ಯಾಗ್ರಹದಲ್ಲಿ ತೊಡಗಿದ್ದರೆ, ಭ್ರಷ್ಟ ನೌಕರರ ವಿರುದ್ಧ ಬೀದಿಗಿಳಿದು ಹೋರಾಟ ನಡೆಸುತ್ತಿದ್ದರೆ ಅಂತಹವರ ವಿರುದ್ಧ ವಿನಾಕಾರಣ ಲಾಠಿ ಬೀಸಿ, ಗೋಲಿಬಾರ್ ಮಾಡಿ ತಮ್ಮ ಶೌರ್ಯ ಮೆರೆಯುತ್ತದೆ ಪೊಲೀಸ್ ಇಲಾಖೆ. ಉದಾಹರಣೆಗೆ ಗುಲ್ಬರ್ಗಾದ ಪೌರಕಾರ್ಮಿಕರ ಚಳವಳಿಯನ್ನು ಹಾಗೂ ಈ ಚಳವಳಿಯ ನಾಯಕತ್ವ ವಹಿಸಿಕೊಂಡಿದ್ದ ಎಸ್.ಕೆ. ಕಾಂತಾ ಅವರನ್ನು ಸದೆ ಬಡಿಯಲು ಪೊಲೀಸರು ಉಪಯೋಗಿಸಿದ ಕರಾಮತ್ತುಗಳನ್ನು ಇಲ್ಲಿನ ಜನ ಎಂದೂ ಮರೆಯಲಾರರು.

ಅಂತಹ ಪೊಲೀಸ್ ಇಲಾಖೆಯ ಸಿಬ್ಬಂದಿಯೇ ಇವತ್ತು ಸುಲಿಗೆ, ಕಳ್ಳತನ ಮತ್ತು ಸುಪಾರಿ ತರಹದ ಕ್ರಿಮಿನಲ್ ಚಟುವಟಿಕೆಗೆ ಇಳಿದಿದೆ ಎಂದರೆ ಇಲ್ಲಿನ ಜನರಿಗೆ ಈ ಪೊಲೀಸರಿಂದ ರಕ್ಷಣೆ ನೀಡುವವರು ಯಾರು?

• ವಿಶ್ವಾರಾಧ್ಯ ಸತ್ಯಂಪೇಟೆ

ಮಾಸ್ತಿ ಮನೆಯಲ್ಲಿ..... ಹೈದರ್‌ನ ಜಂಗ್‌ನಾಮಾ

ಇದೇ ಜೂನ್ 6 ಕ್ಕೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ತೀರಿಕೊಂಡು ಇಪ್ಪತ್ತೈದು ವರ್ಷಗಳಾಗುತ್ತಿದೆ. ಇವತ್ತಿನ ಗದ್ದಲದ, ರಭಸದ ಜೀವನದಲ್ಲಿ ನಮಗೆ ನಿನ್ನೆ ದಿನ ಹೇಗೆ ಕಳೆಯಿತು ಎನ್ನುವುದೇ ಕೆಲವೊಮ್ಮೆ ನೆನಪಿಗೆ ಬರುವುದಿಲ್ಲ. ಹಾಗಿರುವಾಗ ದಶಕಗಳ ಹಿಂದಿನ ಬದುಕು, ಹಿರಿಯ ತಲೆಮಾರಿನವರ ಕೊಡುಗೆಗಳನ್ನು ನೆನೆದುಕೊಳ್ಳುವ ವ್ಯವಧಾನ ಸಿಗುವುದು ಕಷ್ಟ.

ಆದರೆ ಹಿರಿಯಜ್ಜ ಮಾಸ್ತಿ ಹಾಗೆ ಕಳೆದುಹೋಗುವವರಲ್ಲ. ಅಂತವರು ಹಾಗೆ ಕಳೆದುಹೋಗಲೂ ಬಾರದು.

ಮಾಸ್ತಿಯವರದ್ದು ಬಹಳ ದೊಡ್ಡ ಕುಟುಂಬ. ಅವರ ಮಕ್ಕಳ ಪೈಕಿ ಅನೇಕರು ಈಗ ಇಲ್ಲ. 1986 ರಲ್ಲಿ ಮಾಸ್ತಿ ತೀರಿಕೊಂಡಾಗ ಅವರೇ ಸ್ಥಾಪಿಸಿದ್ದ 'ಜೀವನ ಕಾರ್ಯಾಲಯ' ಇತ್ತು. ಅದೇ ನಂತರ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ ಆಗಿ ಬದಲಾಗಿ ಮುಂದುವರೆಯಿತು. ಮಾಸ್ತಿಯವರ ಹೆಣ್ಣುಮಕ್ಕಳಾದ ಇಂದಿರಮ್ಮ, ಶ್ರೀರಂಗನಾಯಕಿ, ಪದ್ಮಮ್ಮ ಮತ್ತು ಮಗ ಅರವಿಂದು ಮುಂತಾದವರು ಟ್ರಸ್ಟ್‌ನ ಕೆಲಸ ಮುಂದುವರೆಸಿಕೊಂಡು ಬಂದರು. ಈಗದನ್ನು ಮೊಮ್ಮಕ್ಕಳಾದ ಡಾ. ವಸಂತಶ್ರೀ, ರಾಮಭದ್ರ ನೋಡಿಕೊಳ್ಳುತ್ತಿದ್ದಾರೆ. ವಿಜಯಾ ಕಾಲೇಜಿನ ಕನ್ನಡ ವಿಭಾಗದ ಶ್ರೀನಿವಾಸಮೂರ್ತಿ ಮುಂತಾದವರು ಜೊತೆಗಿದ್ದಾರೆ. ಮಾಸ್ತಿಯವರ ನೂರಾ ಇಪ್ಪತ್ತಕ್ಕೂ ಹೆಚ್ಚಿನ ಪುಸ್ತಕಗಳನ್ನು ಮುದ್ರಿಸುತ್ತಾ, ಪ್ರತಿಗಳು ಖಾಲಿಯಾದಾಗ ಪುನರ್ ಮುದ್ರಿಸುತ್ತಾ, ಚರ್ಚೆ ಸಂವಾದಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.


ಈ ಟ್ರಸ್ಟ್‌ನಿಂದ ಕಳೆದ ವಾರ ಒಂದು ಅತೀ ಮಹತ್ವದ, ಅಪರೂಪದ ಪುಸ್ತಕ ಬಂದಿದೆ.

ಅದು 'ಜಂಗ್‌ನಾಮಾ.'

"ಶ್ರೀರಂಗಪಟ್ಟಣದ ಅರಸು ನವಾಬ ಹೈದರಲ್ಲಿ ಖಾನ್ ಮತ್ತು ಟೀಪು ಸುಲ್ತಾನ್ ಇವರ ಆಳ್ವಿಕೆಯ ಚರಿತೆ ತಾರೀಖು 11.11.1891" ಎಂಬ ಹೆಸರಿನ ಈ ಪುಸ್ತಕದ ಹಸ್ತಪ್ರತಿಯು 1936 ರ ಸುಮಾರಿನಲ್ಲಿ ಬಿದನೂರಿನ (ಶಿವಮೊಗ್ಗ ಬಳಿಯ ನಗರ) ಡಾ. ಶಾಸ್ತ್ರಿ ಎಂಬುವರಿಂದ ಮಾಸ್ತಿಯವರಿಗೆ ಸಿಕ್ಕಿತು. ನಂತರ ಅದು ಮಾಸ್ತಿಯವರ ಬುಕ್‌ಶೆಲ್ಫ್‌ಗಳ ನಡುವೆ ಹುದುಗಿಹೋಯಿತು. ಇದು ನಿಜಕ್ಕೂ ಆಶ್ಚರ್ಯಕರ ಸಂಗತಿ. ಮಾಸ್ತಿ ಪ್ರಧಾನವಾಗಿ ಕಥಾ ಸಾಹಿತಿಯಾದರೂ ಮೈಸೂರರಸರ ಬದುಕನ್ನು,



ಆಳ್ವಿಕೆಯನ್ನು ಕತೆ, ಕಾದಂಬರಿಯಾಗಿ ಬಳಸಿಕೊಂಡ ಲೇಖಕ. ಅವರ ಚಿಕವೀರ ರಾಜೇಂದ್ರ, ಚೆನ್ನಬಸವನಾಯಕ, ಕಾಕನ ಕೋಟೆ, ಪಂಡಿತನ ತೀರ್ಪು ಮುಂತಾದವು ಮುದ ನೀಡುವ ಐತಿಹಾಸಿಕ ಹಿನ್ನೆಲೆಯ ಬರಹಗಳು. ಈಗಿನ 'ಜಂಗ್‌ನಾಮ' ಬರೆದವನು ಮೈಸೂರಿನ ಖಾಜಿಯಾಗಿದ್ದ ಮಿಸ್‌ಕೀನ್ ನಸಿರುದ್ದೀನ್ ಎನ್ನಲಾಗಿದೆ.



ಜಂಗ್‌ನಾಮ ಕೈಗೆ ಸಿಕ್ಕ ನರತರ ಸುಮಾರು 50 ವರ್ಷ ಕಾಲ ಮಾಸ್ತಿ ಬದುಕಿದ್ದರೂ ಸಹ ಅದನ್ನು ಅವರು ಮರೆತರೆಂಬುದು ಆಶ್ಚರ್ಯ ಹುಟ್ಟಿಸುತ್ತಿದೆ. ಆದರೇನು ಟ್ರಸ್ಟಿನ ಶ್ರೀನಿವಾಸಮೂರ್ತಿಯವರ ಪರಿಶ್ರಮದಿಂದ ಅದೀಗ ಪುಸ್ತಕವಾಗಿ ಹೊರಬಂದಿದೆ. ನಿಜಕ್ಕೂ ಇದೊಂದು ಅಮೂಲ್ಯ ದಾಖಲೆ. ಜಂಗ್‌ನಾಮಾಗೆ ಪ್ರಕಾಶಕರ ಮಾತು ಬರೆಯುವಾಗ ಹೈದರನ ಬದುಕಿಗೆ ಸಂಬಂಧಿಸಿದ ಇನ್ನೆರಡು ಪುಸ್ತಕಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದು ನಲ್ಲಪ್ಪ ಬರೆದ ಹೈದರ್‌ನಾಮ ಹಾಗೂ ಅಪ್ಪಣ್ಣ ಶೆಟ್ಟರ ಹೈದರ್‌ನಾಮ.




ಇದು ನಾನು ಬದಿಗಿರಿಸಿದ್ದ ಕೆಲಸಗಳನ್ನು ಮತ್ತೆ ನೆನಪಿಸಿದೆ. ಈಗ್ಗೆ ಕೆಲ ವರ್ಷಗಳ ಹಿಂದೆ ನಾನು ಮೊದಲ ಬಾರಿಗೆ ಹೈದರ್ ನಾಮ ಓದಿದೆ. ಹದಿನೆಂಟನೆಯ ಶತಮಾನದ ಕನ್ನಡದಲ್ಲಿರುವ ಹೈದರ್‌ನಾಮ ಕೂಡ ಅಪರೂಪದ ಒಂದು ಐತಿಹಾಸಿಕ ದಾಖಲೆ. ಹೈದರನ ಜೀವನ, ಯುದ್ಧಗಳ ವಿವರ ನೀಡುವ ಈ ಪುಸ್ತಕ ಬರೆದ ನಲ್ಲಪ್ಪ ಒಬ್ಬ ಧಾನ್ಯ ವರ್ತಕನೆಂದು ಅನೇಕರು ಹೇಳುತ್ತಾ ಬಂದಿದ್ದಾರೆ. ನನಗೆ ಈ ನಲ್ಲಪ್ಪನ ಬಗ್ಗೆ ಕುತೂಹಲ ಹುಟ್ಟಿ ಅವನ ಇತ್ಯೋಪರಿ ಹುಡುಕಲು ತೊಡಗಿದೆ. ಆ ಹುಡುಕಾಟ ವ್ಯರ್ಥವೇನೂ ಆಗಲಿಲ್ಲ. ತುಮಕೂರಿನ ಹತ್ತಿರ ಈ ನಲ್ಲಪ್ಪನ ವಂಶಸ್ಥರೇ ಸಿಕ್ಕರು. ಅಲ್ಲೇ ನಲ್ಲಪ್ಪನ ಒಂದು ಸೊಗಸಾದ ಚಿತ್ರವೂ ನನಗೆ ಸಿಕ್ಕಿತು. ತಲೆಗೆ ದೊಡ್ಡ ಪೇಟಾ ಸುತ್ತಿಕೊಂಡು ದವಡೆಗೆ ಎಲೆ ಅಡಿಕೆ ಒತ್ತರಿಸಿಕೊಂಡಿರುವ ನಲ್ಲಪ್ಪ ಓರ್ವ ಆಂಧ್ರ ಮೂಲದ ಬ್ರಾಹ್ಮಣ. ಆತ ವರ್ತಕನಾಗಿರಲಿಲ್ಲ, ಬದಲಾಗಿ ಸೈನಿಕನಾಗಿದ್ದ. ಹೈದರನಿಗೆ ಆಪ್ತನಾಗಿದ್ದ. ಹದಿನೇಳು ಹದಿನೆಂಟನೆ ಶತಮಾನ ಮರಾಠರ, ಹೈದರಾಬಾದ್ ನಿಜಾಮರ, ಮೈಸೂರಿನ ಅರಸರ, ತಮಿಳುನಾಡು, ಆಂಧ್ರದ ಪಾಳೆಯಗಾರರ ಹಾಗೂ ತುಂಡರಸರ ಚರಿತ್ರೆ ಓದುವಾಗ ನಮಗೆ ಅನೇಕ ಬ್ರಾಹ್ಮಣ ಯೋಧರು, ವಕೀಲರು ಕಾಣಸಿಗುತ್ತಾರೆ. ಸ್ವತಃ ಹೈದರನ ಕಾಲದಲ್ಲಿ ನಲ್ಲಪ್ಪ ಮಾತ್ರವಲ್ಲದೆ ಬೆಂಗಳೂರಿನ ಕೋಟೆಯ ಕಮಾಂಡರ್ ಆಗಿದ್ದ ಕತ್ತಿ ಗೋಪಾಲರಾಯನೂ ಇದ್ದ. ಇವರದೆಲ್ಲಾ ಅತ್ಯಂತ ಸಾಹಸಮಯ ಬದುಕು.

ನಾನು ನಲ್ಲಪ್ಪನ ಹೈದರ್ ನಾಮಾವನ್ನು ಆಧುನಿಕ ಕನ್ನಡಕ್ಕೆ ಪರಿವರ್ತಿಸುವ ಕೆಲಸ ಮಾಡುತ್ತಿದ್ದೇನೆ. ಅದರ ಜೊತೆ ಈ ನಲ್ಲಪ್ಪನ ಬದುಕಿನ ವಿವರಗಳನ್ನು ಸೇರಿಸಿ ಪ್ರಕಟಿಸುವ ಯೋಚನೆ ಇದೆ. ಅದಕ್ಕಾಗಿ ಬಿಡುವು ಸಿಕ್ಕಾಗೆಲ್ಲಾ ತುಮಕೂರಿಗೆ ಹೋಗಿ ನಲ್ಲಪ್ಪನ ಮನೆತನದವರನ್ನು ಕಂಡು ನೋಟ್ಸ್ ಮಾಡಿಕೊಳ್ಳುವ ಕೆಲಸ ನಡೆದಿದೆ.

ಈಗ ಮಾಸ್ತಿ ಟ್ರಸ್ಟಿನವರು ಪ್ರಕಟಿಸಿರುವ ಜಂಗ್‌ನಾಮಾ ಕೂಡ ಆಧುನಿಕ ಪೂರ್ವ ಕನ್ನಡದಲ್ಲಿದೆ. ಸಹನೆಯಿಂದ, ಆಸ್ಥೆಯಿಂದ ಓದಲು ಕೂರದೇ ಹೋದರೆ ಈ ಪುಸ್ತಕ ಕಠಿಣ. ಇತಿಹಾಸದ ಓದಿನ ಒಲವಿರುವವರಿಗೆ ಇದೊಂದು ಜೇನಿನ ಸವಿ.

ಇಲ್ಲಿ ಮಾಸ್ತಿ ಟ್ರಸ್ಟಿನ ರಾಮಭದ್ರ ಹಾಗೂ ಡಾ. ವಸಂತಶ್ರೀಯವರ ಬಗ್ಗೆ ಒಂದೆರಡು ಮಾತು ಹೇಳಬೇಕು. ಇವರಿಬ್ಬರೂ ಮಾಸ್ತಿಯವರ ಮೊಮ್ಮಕ್ಕಳು. ರಾಮಭದ್ರರವರು ಅನೇಕ ದೇಶಗಳನ್ನು ಸುತ್ತಿ ಕೆಲಸ ಮಾಡಿ ಬಂದವರು. ಹಿಂದೂಸ್ತಾನ್ ಕನ್‌ಸ್ಟ್ರಕ್ಷನ್ ಕಂಪನಿಯ ಮುಖ್ಯ ಹುದ್ದೆಯಲ್ಲಿದ್ದ ಅವರು ಇತ್ತೀಚೆಗೆ ಮುಂಬೈನಲ್ಲಿ ನಿರ್ಮಾಣಗೊಂಡ 14 ಕಿ.ಮೀ.ನಷ್ಟು ಉದ್ದನೆಯ ಸಮುದ್ರ ಸೇತುವೆಯನ್ನು ಕಟ್ಟಿರುವ ಇಂಜಿನಿಯರ್‌ಗಳಲ್ಲಿ ಒಬ್ಬರು. ಡಾ. ವಸಂತಶ್ರೀ ಮೆಟಲರ್ಜಿ ಓದಿ ಇಂಗ್ಲೆಂಡ್‌ನಲ್ಲಿ ವಿಜ್ಞಾನಿಯಾಗಿ ಅನೇಕ ವರ್ಷ ಕೆಲಸ ಮಾಡಿದವರು. ಬಹಳ ದೊಡ್ಡ ಮನಸಿನ, ಪ್ರೀತಿ ತುಂಬಿದ ಮಾತಿನವರು. ಇವರೆಲ್ಲಾ ಹಿರಿಯಜ್ಜ ಮಾಸ್ತಿಯವರನ್ನು,



ಜಂಗ್‌ನಾಮದ ಮುಖಪುಟ...


ಅವರ ಬರಹ-ಬದುಕನ್ನು ಹೊಸ ತಲೆಮಾರಿನವರಿಗೆ ಪರಿಚಯಿಸುವ ತಲುಪಿಸುವ ಕೆಲಸವನ್ನು ಶ್ರದ್ಧೆ ಪ್ರೀತಿಯಿಂದ ಮಾಡುತ್ತಿದ್ದಾರೆ. ಇದು ಆಗಬೇಕಾದ ಕೆಲಸ ಹೌದು. ಆದರೆ ಒಂದು ಪುಟ್ಟ ಆದರೆ ಸೂಕ್ಷ್ಮ ಸಂಗತಿಯೊಂದನ್ನು ಇಲ್ಲಿ ಹೇಳಬೇಕು. ಈ ಟ್ರಸ್ಟಿನ ಸುತ್ತಮುತ್ತ ಹಾಗೂ ಸಂವಾದ ಕಾರ್ಯಕ್ರಮಗಳಲ್ಲಿ ಕೇವಲ ಒಂದೇ ಜಾತಿಯ ಜನ ಕಾಣಿಸಿಕೊಳ್ಳುತ್ತಿರುತ್ತಾರೆ. ಮಾಸ್ತಿ ಸಂಪ್ರದಾಯಸ್ಥರಾಗಿದ್ದರೂ ಸಹ ಹಾರ್ಡ್‌ಕೋರ್ ಜಾತಿವಾದಿಯಾಗಿರಲಿಲ್ಲ. ಮಾಸ್ತಿಯವರಿಗೆ 1950-60 ರ ದಶಕದಲ್ಲಿ ರಾಷ್ಟ್ರೋತ್ಥಾನ ಪರಿಷತ್, ಕೇಶವ ಶಿಲ್ಪಗಳ ಸಮಾಜ ಕಂಟಕರ ಜೊತೆಗೂ ಒಡನಾಟ ವಿತ್ತಾದರೂ ಆ ದುರುಳತನ ಮಾಸ್ತಿಯವರ ವ್ಯಕ್ತಿತ್ವವನ್ನು ಅಷ್ಟಾಗಿ ಪ್ರಭಾವಿಸಿರಲಿಲ್ಲ. ಕುವೆಂಪು ಜೊತೆಗಾದ ಒಂದು ಕೆಟ್ಟ ಜಗಳ ಮಾತ್ರ ಮಾಸ್ತಿಯವರ ಜೀವನದ ಕಪ್ಪುಚುಕ್ಕೆಯಾಗಿದೆ. ಆದರೆ ಕುವೆಂಪುರವರ ಮೊದಲ ಕವನ ಸಂಕಲನ ಪ್ರಕಟಿಸಿದವರು ಮಾಸ್ತಿ. 'ಜೀವನ' ಪತ್ರಿಕೆಯನ್ನು 21 ವರ್ಷ ಏಕಾಂಗಿಯಾಗಿ ನಡೆಸಿದವರೂ ಮಾಸ್ತಿಯವರೆ. ಆದರೆ ಈಗಿನ ಟ್ರ್ಯಾಜಿಡಿ ಏನೆಂದರೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಹಾಗೂ ಚೆಡ್ಡಿಗಳ ಗೋಖಲೆ ಇನ್‌ಸ್ಟಿಟ್ಯೂಟ್‌ನಿಂದಾಚೆಗೆ ಮಾಸ್ತಿ ಹೆಸರು ಕೇಳಿಸದಂತೆ ಬಂಧಿಸಿಡಲಾಗುತ್ತಿದೆ.

ಅದನ್ನು ಹೊರತುಪಡಿಸಿದರೆ ಮಾಸ್ತಿ ಈ ತಲೆಮಾರಿನವರಿಗೂ ಬೇಕು. ಆದರೆ ಅನೇಕ ಜಾತಿ, ಜನಾಂಗ, ಸಂಸ್ಕೃತಿ ಪರಂಪರೆಗಳಿರುವ ಕನ್ನಡ ಸಮಾಜದೊಂದಿಗೆ ಒಡನಾಡುವಾಗ ಮಾಸ್ತಿ ಟ್ರಸ್ಟಿನವರು ಎಲ್ಲರನ್ನೂ ಒಳಗೊಳ್ಳುವ ಒಂದು ಆರೋಗ್ಯಕರ ಧೋರಣೆ ಅಳವಡಿಸಿಕೊಂಡರೆ ಉತ್ತಮ ಅಲ್ಲವೆ.

ಕವಿ ಕನ್ನಿಮೋಳಿಯ 'ಆತ್ಮಹತ್ಯೆ'

ನಾನು ಈ ಅಗ್ನಿಯನ್ನು ಪ್ರವೇಶಿಸುತ್ತಿರುವುದು
ನನ್ನ ಪಾವಿತ್ರತೆಯನ್ನು ಸಾಬೀತುಪಡಿಸಲಲ್ಲ,
ಬದಲಾಗಿ ನಿನ್ನ ಸ್ಪರ್ಶದ ಕಲೆಯನ್ನು
ನನ್ನ ದೇಹದಿಂದ ತೊಳೆದುಹಾಕಲು.

- 'ಅಗ್ನಿಪರೀಕ್ಷೆ' ಎಂಬ ಕವನದಲ್ಲಿ ಕನ್ನಿಮೋಳಿ ಹೀಗೆ ಬರೆದಿದ್ದಾಳೆ.



ಇಂತಹ ಸೂಕ್ಷ್ಮ ಕವನವನ್ನು ಬರೆದ ತಮ್ಮ ಗೆಳತಿ ಕನ್ನಿಮೋಳಿಯನ್ನು ಕುರಿತು ಖ್ಯಾತ ಮಲೆಯಾಳಿ ಕವಿ ಕೆ. ಸಚ್ಚಿದಾನಂದನ್ ಅವರು ಒಂದು ಪುಟ್ಟ ಲೇಖನವನ್ನು ಇತ್ತೀಚೆಗೆ ಬರೆದಿದ್ದಾರೆ. ಅದರ ಸಾರಾಂಶ ಹೀಗಿದೆ:

"ಸಂಕಷ್ಟದಲ್ಲಿರುವ ನಮ್ಮ ಪ್ರೀತಿಯ ಪರಿಚಿತರ ಬಗ್ಗೆ ಬರೆಯುವುದು ತೀವ್ರ ನೋವನ್ನು ಉಂಟುಮಾಡುತ್ತದೆ. ಅದರಲ್ಲೂ ಅವರ ಮೇಲಿರುವ ಆರೋಪಗಳು ಸತ್ಯವೋ ಅಸತ್ಯವೋ ಎಂದು ಗೊತ್ತಿಲ್ಲದಿರುವಾಗ. ರಾಜ್ಯಸಭಾದ ಸದಸ್ಯೆಯಾಗಿದ್ದ ಈಗ ದೇಶವನ್ನೇ ಅಲುಗಾಡಿಸಿರುವ ಹಗರಣದಲ್ಲಿ ಭಾಗಿಯಾಗಿ ಜೈಲುಪಾಲಾಗಿರುವ ರಾಜಕಾರಣಿ ಕನ್ನಿಮೋಳಿ ನನಗೆ ಪರಿಚಯವಿಲ್ಲ. ಆದರೆ ಕಳೆದ 18 ವರ್ಷಗಳಿಂದ ಸೂಕ್ಷ್ಮಮತಿಯ ಕವಿಯತ್ರಿಯಾದ, ಪುರುಷಪ್ರಧಾನ ಮೌಲ್ಯಗಳನ್ನು ಪ್ರಶ್ನಿಸುತ್ತಿದ್ದ ಮಹಿಳಾ ಪರ ದನಿ ಎತ್ತುತ್ತಿದ್ದ, ಎಲ್ಲಕ್ಕಿಂತ ಮುಖ್ಯವಾಗಿ ನಿರಹಂಕಾರಿಯಾದ, ಗಾಂಭೀರ್ಯಳಾದ, ಬುದ್ಧಿವಂತಳಾದ ಕನ್ನಿಮೋಳಿ ನನಗೆ ಪರಿಚಯವಾಗಿದ್ದಳು.

ನಾನು ಕನ್ನಿಮೋಳಿಯ ಬಗ್ಗೆ ಮೊದಲು ಕೇಳಿದ್ದು ನನ್ನ ತಮಿಳು ಮಿತ್ರರಿಂದ. ಆಕೆಯನ್ನು ನಾನು ಮೊದಲು ಭೇಟಿ ಆಗಿದ್ದು ಫ್ರಾನ್ಸ್ ದೇಶದಲ್ಲಿ ನಡೆದ ಒಂದು ಕವಿಗೋಷ್ಠಿಯಲ್ಲಿ. ಆ ಗೋಷ್ಠಿಗೆ ಕನ್ನಿಮೋಳಿ ಸೇರಿದಂತೆ ಕನ್ನಡದ ಪಾ.ಮಾ. ಕನಕಾ, ಬೆಂಗಾಲಿ ಕವಿಯತ್ರಿ ಅನುರಾಧ ಮಹಾಪಾತ್ರ, ಹಿಂದಿಯ ಉದಯನ್ ವಾಜಪೇಯಿ, ಇತರರೂ ಬಂದಿದ್ದರು. ಅಂದು ಪ್ಯಾರಿಸ್ ಸೆಂಟ್ರಲ್ ಜೈಲಿನಲ್ಲಿದ್ದ ಮಹಿಳಾ ಕೈದಿಗಳು ಸೇರಿದಂತೆ ನಾನು ಮತ್ತು ಕನ್ನಿಮೋಳಿ ಪ್ಯಾರಿಸ್‌ನ ವಿವಿಧ ಕಡೆ ನಮ್ಮ ಕವನಗಳನ್ನು ಓದಿದ್ದೆವು. ಅವತ್ತು ಕನ್ನಿಮೋಳಿ ತನ್ನ ಕನಸುಮನಸ್ಸಿನಲ್ಲೂ ತಾನು ಮುಂದೊಂದು ದಿನ ಅಂತಹದ್ದೇ ಜೈಲಿನಲ್ಲಿ ಇರುತ್ತೇನೆ ಎಂದು ಕಲ್ಪಿಸಿಕೊಂಡಿರಲಿಕ್ಕಿಲ್ಲ.

ನಮ್ಮೆಲ್ಲರಿಗೂ ಕನ್ನಿ ಇಷ್ಟವಾದಳು. ಸಭ್ಯಳಾಗಿದ್ದ ಆಕೆ ತನ್ನ ತಂದೆಯ ಹೆಸರನ್ನು ಎಲ್ಲೂ ಹೇಳುತ್ತಿರಲಿಲ್ಲ. ಆಕೆಯ ಪತಿ ಅರವಿಂದನ್ ತನ್ನ ಹಾಸ್ಯ ಸ್ವಭಾವದಿಂದಾಗಿ ಎಲ್ಲರ ಮೆಚ್ಚುಗೆ ಪಡೆದ. ಆಗ ಕನ್ನಿ ಮತ್ತು ಅರವಿಂದನ್ ಸಿಂಗಪೂರ್‌ನಲ್ಲಿ ವಾಸಿಸುತ್ತಿದ್ದರು. ಕವಿಗೋಷ್ಠಿಯ ಕೊನೆಯ ದಿನ ನನಗಿನ್ನೂ ಚೆನ್ನಾಗಿ ನೆನಪಿದೆ. ಕನ್ನಿ ಮತ್ತು ನನಗೆ ಡ್ಯಾನ್ಸ್ ಮಾಡಲು ಬಾರದಿದ್ದರೂ ನಾವಿಬ್ಬರೂ ಫ್ರೆಂಚ್ ವೈನ್ ಕುಡಿದಿದ್ದರಿಂದ ಅದರಿಂದ ನಮ್ಮ ನಾಚಿಕೆ ಸ್ವಭಾವವನ್ನು ತೊರೆದು ಜೊತೆಯಾಗಿ ಡ್ಯಾನ್ಸ್ ಮಾಡಿದ್ದೆವು.

ಅದಾದನಂತರ, ಇಂಗ್ಲಿಷ್‌ಗೆ ಅನುವಾದಗೊಂಡ ಆಕೆಯ ಹಲವಾರು ಕವನಗಳನ್ನು ನಾನು ಓದಿದೆ. ಅವುಗಳು ಸಾಹಿತ್ಯ ಅಕಾಡೆಮಿ ಪ್ರಕಟಿಸುವ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು. ಖ್ಯಾತ ಮಲೆಯಾಳಿ ಕವಿ ಅಟ್ಟೂರು ರವಿವರ್ಮ ಆಕೆಯ ಕವನಗಳನ್ನು ಮಲೆಯಾಳಂಗೆ ಅನುವಾದಿಸಿ ತಮಿಳು ಕವನಗಳ ಸಂಕಲನದಲ್ಲಿ ಪ್ರಕಟಿಸಿದರು. ಮೇಲೆ ನೀಡಲಾಗಿರುವ 'ಅಗ್ನಿಪರೀಕ್ಷೆ' ಎಂಬ ಕವನವಲ್ಲದೆ ಆಕೆ ಬರೆದಿದ್ದ 'ಆಸರೆ' ಎಂಬ ಇನ್ನೊಂದು ಪದ್ಯವೂ ನನ್ನ ನೆನಪಿನಲ್ಲಿದೆ. ಅದರಲ್ಲಿ ಆಕೆ ಹೀಗೆ ಬರೆದಿದ್ದಳು: "ದಿನವಿಡೀ ದುಡಿದು
ದಣಿದಿರುವ ನಾನು
ಬೆಳ್ಳಿತೆರೆಯ ಮೇಲೆ ಬಾಡಿಗೆ ಪಡೆದು
ಕಾಣುವ ಕನಸುಗಳಿಗೆ ಕಾದಿರುವೆ
ಅಪ್ಪನ ಸೂಚನೆ ಮೇರೆಗೆ
ಶಾಲೆ ಸೇರಿದೆ,
ಕೂದಲನ್ನು ಬಾಚಿಕೊಂಡು
ಹಲವರನ್ನು ದೂರವಿಟ್ಟು
ಚೆನ್ನಾಗಿ ಬಟ್ಟೆ ತೊಟ್ಟು
ಹಲ್ಲನ್ನು ಉಜ್ಜಿ
ಪ್ರಾರ್ಥಿಸಿದೆ. ಮದುವೆಯಾದೆ
ಈಗ ನನ್ನ ಸರದಿಗಾಗಿ ಕಾದು ನಿಂತಿರುವೆ."


ಆನಂತರ ನಾನು ಆಕೆಯನ್ನು ಹಲವಾರು ಬಾರಿ ಭೇಟಿ ಮಾಡಿದೆ. ಕಳೆದ ವರ್ಷ ಆಕೆ ಚೆನ್ನೈನಲ್ಲಿ ನಡೆಸುವ 'ಚೆನ್ನೈ ಸಂಗಮಂ' ಎಂಬ ಕವಿಗೋಷ್ಠಿ ಮತ್ತು ಕಲಾ ಸಂಭ್ರಮವನ್ನು ನಾನೇ ಉದ್ಘಾಟಿಸಿದ್ದೆ.

ಆಕೆ ಬಹಳ ದೂರವಿಟ್ಟಿದ್ದ ರಾಜಕೀಯಕ್ಕೆ ಕೊನೆಗೂ ಕನ್ನಿ ಧುಮುಕಿದ್ದನ್ನು, ಆ ಮೂಲಕ ಡಿಎಮ್‌ಕೆ ಪಕ್ಷದಲ್ಲಿನ ವಂಶಸ್ಥರ ಕಿತ್ತಾಟದ ಭಾಗವಾಗಿದ್ದನ್ನು ಕೇಳಿ ಅಚ್ಚರಿಪಟ್ಟಿದ್ದೆ. ಆನಂತರವೇ ಕಲೈಂಗರ್ ಟಿವಿಯಲ್ಲಿನ ಆಕೆಯ ಪಾಲುದಾರಿಕೆ ಮತ್ತು ಇತರೆ ಸಂಗತಿಗಳ ಬಗೆಗಿನ ಕೆಟ್ಟ ಸುದ್ದಿಗಳು ನನ್ನ ಕಿವಿಗೆ ಬೀಳಲಾರಂಭಿಸಿದ್ದು. ಈ ದೇಶದ ಕಾನೂನು ತನ್ನ ಪಾತ್ರವನ್ನು ನಿರ್ವಹಿಸುತ್ತದೆ ಎಂಬ ನಂಬಿಕೆ ನನಗಿದೆ. ಆದರೂ ಸೂಕ್ಷ್ಮಮತಿಯಾದ ಕವಿ ಕನ್ನಿ ನಿರ್ದೋಷಿಯಾಗಿರಲಿ ಎಂದು ಆಶಿಸುತ್ತೇನೆ.



ಈ ಹಿಂದೆ ಹಲವಾರು ಕವಿಗಳು ವಿವಿಧ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಯಾರೂ ಕನ್ನಿಮೋಳಿಯಂತೆ ಆತ್ಮಹತ್ಯೆ ಮಾಡಿಕೊಂಡಿದ್ದು ನಾನರಿಯೆ."

- ರಾಜಕೀಯ ಎಂಬ ಹೊಲಸು ಎಂಥವರನ್ನೂ ಹಾಳುಮಾಡುತ್ತದೆ ಎಂಬುದನ್ನು ಕನ್ನಿಮೋಳಿಯ ವೃತ್ತಾಂತವೇ ಸೂಚಿಸುತ್ತದಲ್ಲವೇ?



ಮಾಸ್ತಿ ಮೊಮ್ಮಗನ ಮನದಾಳದ ಮೆಲುಕುಗಳು

ಮಾಸ್ತಿಯವರ ಮೂರನೇ ಮಗಳ ಮಗ ಹಾಗೂ ಅವರ ಹಿರಿಯ ಮೊಮ್ಮಗರಾದ ರಾಮಭದ್ರರವರು ತಮ್ಮ ತಾತನ ಒಡನಾಟದಲ್ಲಿ ಬೆಳೆದ ಅಚ್ಚುಮೆಚ್ಚಿನ ಮೊಮ್ಮಗ. ಅವರೇ ಹೇಳಿಕೊಂಡ ಮಾಸ್ತಿಯವರ ಒಡನಾಟದ ನೆನಪುಗಳ ಮೆಲುಕು ಇಲ್ಲಿದೆ.

ಮಾಸ್ತಿ ಅಲ್ಲ ಪ್ರೀತಿಯ ಮುತ್ತಣ್ಣ

ನಿಮಗೆ ಅವರು ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ 'ಮಾಸ್ತಿ ವೆಂಕಟೇಶ್ ಅಯ್ಯಂಗಾರ್' ಆಗಿರಬಹುದು. ಆದರೆ ಮೊಮ್ಮಕ್ಕಳಾಗಿ ನಾವೆಲ್ಲ ಅವರನ್ನು ಕರೆಯುತ್ತಿದ್ದುದು 'ಮುತ್ತಣ್ಣ' ಅಂತಲೇ. ನನ್ನ ತಂದೆಯೂ ಸೇರಿದಂತೆ ನನ್ನ ಚಿಕ್ಕಪ್ಪ-ದೊಡ್ಡಪ್ಪಂದಿರೆಲ್ಲ ಅಂದರೆ ಮಾಸ್ತಿಯ ಅಳಿಯಂದಿರೆಲ್ಲ ನೌಕರಿ ನಿಮಿತ್ತ ಅಲ್ಲಿಂದಿಲ್ಲಿಗೆ ವರ್ಗಾವಣೆಗೊಳ್ಳುತ್ತಿದ್ದುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆಲ್ಲಿ ಅಡ್ಡಿಯಾಗಿಬಿಡುತ್ತೋ ಅಂತ ಸ್ವತಃ ತಾತನವರೇ ಒತ್ತಾಯ ಮಾಡಿ ನಮ್ಮನ್ನೆಲ್ಲ ಅವರ ಜೊತೆ ಇರಿಸಿಕೊಂಡಿದ್ದರು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅವರಿಗಿದ್ದ ಕಾಳಜಿ ಅಂತಹುದು.

ಹಸಿದೇ ಬೆಳೆದವರ ಅನ್ನದ ಮಾತು

ನಮ್ಮ ಮುತ್ತಣ್ಣ ಚಿಕ್ಕ ವಯಸ್ಸಿನಲ್ಲಿ ತುಂಬಾ ಕಷ್ಟಪಟ್ಟು ಬೆಳೆದವರು. ಓದುವ ಸಲುವಾಗಿ 'ವಾರಾನ್ನ'ದ ಹುಡುಗನಾಗಿ ಒಂದೊಂದು ದಿನ ಒಬ್ಬೊಬ್ಬರ ಮನೆಯಲ್ಲಿ ಊಟ ಮಾಡಿ ವಿದ್ಯಾಭ್ಯಾಸ ಕಲಿತಿದ್ದ ಅವರಿಗೆ ಅನ್ನದ ಮೇಲೆ ತುಂಬಾ ಗೌರವ. ಒಂದು ದಿನ ನಮ್ಮ ಮನೆಯಲ್ಲಿ ನಾವೆಲ್ಲ ಊಟಕ್ಕೆ ಕುಳಿತಿದ್ದೆವು. ಈಗಿನಂತೆ ಆಗ ಅನ್ನ ಬಡಿಸಲು ಸೌಟು ಇರಲಿಲ್ಲ. ಕೈಯಲ್ಲೇ ಅನ್ನವನ್ನು ತಟ್ಟೆಯಿಂದ ತಟ್ಟೆಗೆ ಸುರಿದುಬಿಡುತ್ತಿದ್ದರು.ಅವತ್ತು ನನ್ನ ತಟ್ಟೆಗೆ ಸ್ವಲ್ಪ ಜಾಸ್ತಿಯೇ ಅನ್ನ ಬಿದ್ದಿತ್ತು. ಅಷ್ಟನ್ನೂ ತಿಂದು ಮುಗಿಸುವುದು ನನ್ನಿಂದಾಗಲಿಲ್ಲ. ಉಳಿದದ್ದೆಲ್ಲ ತಗೊಂಡು ಹೋಗಿ ಚೆಲ್ಲಿ ಬಂದೆ. ಅದನ್ನು ಸುಮ್ಮನೆ ಗಮನಿಸುತ್ತಿದ್ದ ಮುತ್ತಣ್ಣ ನಂತರ ನನ್ನನ್ನು ಕರೆದು 'ಯಾಕೆ ಅನ್ನ ಚೆಲ್ಲಿದೆ' ಎಂದು ಕೇಳಿದರು. 'ನನ್ನ ತಟ್ಟೆಗೆ ಅನ್ನ ಜಾಸ್ತಿ ಬದ್ದಿತು. ನನಗೆ ತಿನ್ನಲಾಗಲಿಲ್ಲ;/ ಅದಕ್ಕೆ ಚೆಲ್ಲಿ ಬಂದೆ' ಅಂತ ಹೇಳಿದ ನನಗೆ ಅವರು ಅವತ್ತೊಂದು ಮಾತು ಹೇಳಿದರು. ನನಗದು ಇವತ್ತಿಗೂ ಚೆನ್ನಾಗಿ ನೆನಪಿದೆ "ಇವತ್ತು ನೀನು ಚೆಲ್ಲಿದ ಅನ್ನಕ್ಕೆ ನಾನು ಎಷ್ಟು ಸಾರಿ ಬೀದಿ ಬೀದಿ ಸುತ್ತಿ ಕಷ್ಟಪಟ್ಟಿದ್ದೆ ಗೊತ್ತಾ? ಅನ್ನ ಸಂಪಾದಿಸುವುದು ಸುಲಭದ ಮಾತ್ರವಲ್ಲ. ಅದನ್ನು ಗೌರವಿಸುವುದನ್ನು ಕಲಿತುಕೊಳ್ಳಬೇಕು. ನೀನು ಚೆಲ್ಲಿದ ಆ ಅನ್ನಕ್ಕಾಗಿ ಪಾಪ ಎಷ್ಟೋ ಬಡಹುಡುಗರು ಮನೆಮನೆ ಅಲೆದಾಡುತ್ತಿರುತ್ತಾರೆ. ಬೇಕಾದರೆ ಎರಡು ಬಾರಿ ಹಾಕಿಕೊಂಡು ಊಟಮಾಡು, ಈ ರೀತಿ ಅನ್ನವನ್ನು ಬಿಸಾಡುವ ತಪ್ಪು ಮಾಡಬೇಡ."

ದುಡಿಮೆಯ ದಿಕ್ಕು ತೋರಿಸಿದ ನುಡಿ

ನಾನಾಗ ಬಿ.ಎಂ.ಎಸ್. ಕಾಲೇಜಿನಲ್ಲಿ ಇಂಜಿನಿಯರಿಂಗ್ ಓದು ಮುಗಿಸಿದ್ದೆ. ಕ್ರಿಕೆಟ್ ಅಂದ್ರೆ ನನಗೆ ತುಂಬಾ ಹುಚ್ಚು. ಯಾವಾಗಲೂ ಕ್ರಿಕೆಟ್‌ನಲ್ಲಿ ಕಾಲ ಕಳೆಯುತ್ತಿದ್ದೆ. ಇದನ್ನು ಗಮನಿಸುತ್ತಲೇ ಇದ್ದ ಮುತ್ತಣ್ಣ ಒಂದು ದಿನ ನನ್ನನ್ನು ಕರೆದು "ನೋಡಪ್ಪ, ನೀನು ಅತಿಯಾಗಿ ಹಚ್ಚಿಕೊಂಡಿರುವ ಕ್ರಿಕೆಟ್ ನಿನಗೆ ಎರಡೊತ್ತು ಊಟ ಹಾಕುತ್ತೆ ಅನ್ನೋ ನಂಬಿಕೆ ನಿನಗಿದೆಯೋ" ಅಂತ ಕೇಳಿದರು. ಆಗಿನ್ನೂ ಕ್ರಿಕೆಟ್ ಈಗಿನಷ್ಟು ಜನಪ್ರಿಯವಾಗಿರಲಿಲ್ಲ, ನಾನು ಸುಮ್ಮನೇ ಇದ್ದೆ. "ಒಂದು ವೇಳೆ ಅದು ನಿನಗೆ ಅನ್ನ ಹಾಕುತ್ತೆ ಅನ್ನೋ ನಂಬಿಕೆ ನಿನಗಿದ್ದರೆ ನೀನು ಖಂಡಿತ ಅದರಲ್ಲೇ ಮುಂದುವರೆ ನಾನದಕ್ಕೆ ಬೆಂಬಲಿಸುತ್ತೇನೆ, ಆದರೆ ಅದರ ಬಗ್ಗೆ ನಿನಗೇ ಗೊಂದಲವಿದ್ದರೆ ದಯವಿಟ್ಟು ನಿನ್ನ ಬದುಕನ್ನು ಮೊದಲು ರೂಪಿಸಿಕೋ." ಅವರ ಆ ಮಾತು ಅವತ್ತೇ ನಾನು ಕೆಲಸಕ್ಕೆ ಸೇರಲು ಪ್ರಯತ್ನಮಾಡುವಂತೆ ಮಾಡಿತ್ತು.

ಗುರಿ ತೋರಿಸಿದ ಗುರು ಅವರು

ಮುಂಬೈನ ಹಿಂದೂಸ್ತಾನ ಪೆಟ್ರೋಲಿಯಂ ಕನ್‌ಸ್ಟ್ರಕ್ಷನ್ ಕಂಪೆನಿಯಲ್ಲಿ ಜೂನಿಯರ್ ಇಂಜಿನಿಯರ್ ಆಗಿ ನನಗೆ ಕೆಲಸ ಸಿಕ್ಕಿತ್ತು. ಅಲ್ಲಿಗೆ ಹೋದಾಗ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದ ವರದರಾಜನ್ ಅನ್ನುವವರನ್ನು ಕಾಣಲು ಹೋದೆ. ಅವರು ನಮ್ಮ ತಾತನ ಸ್ನೇಹಿತರೇ ನಾನು ಮಾಸ್ತಿಯವರ ಮೊಮ್ಮಗ ಎಂದು ಅವರಿಗೆ ಗೊತ್ತಾಯಿತು. "ನೋಡಪ್ಪ ನೀನು ಮಾಸ್ತಿಯವರ ಮೊಮ್ಮಗ, ಮುಂದೊಂದು ದಿನ ನಾನು ಕೂತಿರೋ ಈ ಕುರ್ಚಿಯಲ್ಲಿ ನೀನು ಕುಳಿತುಕೊಳ್ಳಬೇಕು." ಅಂತ ಹೇಳಿದ್ರು. ನನಗಾಗ ತುಂಬಾನೇ ಗಾಬರಿ ಆಯ್ತು ಮನೆಗೆ ಬಂದು ಮುತ್ತಣ್ಣನ ಹತ್ತಿರ ಹೀಗೆಲ್ಲ ಅಂದ್ರು ಅಂದೆ. ಆದಕ್ಕವರು "ಅವರು ಹೇಳಿದ್ರಲ್ಲಿ ತಪ್ಪೇನಿದೆ. ಮನುಷ್ಯನಿಗೆ ಗುರಿ ಅಂತ ಒಂದಿರ್ಲೇಬೇಕು. ಹಾಗಿದ್ದರೆ ಮಾತ್ರ ಏನಾದ್ರೂ ಸಾಧಿಸೋಕೆ ಸಾಧ್ಯ. ಅದನ್ನ ಮುಟ್ಟಕ್ಕೆ ಆಗದೆ ಇದ್ರು ಕೊನೇಪಕ್ಷ ಅದ್ರ ಹತ್ತಿರಕ್ಕಾದ್ರೂ ಹೋಗಬಹುದು" ಅಂತ ಹೇಳಿದ್ದು ನನಗೆಷ್ಟು ಸ್ಫೂರ್ತಿ ಆಯ್ತು ಅಂದ್ರೆ ಮುಂದೊಂದು ದಿನ ನಾನು ಆ ಕುರ್ಚಿಯಲ್ಲಿ ಕುಳಿತೆ, ಆ ಸಂತಸವನ್ನು ತಾತನ ಮುಂದೆ ಹಂಚಿಕೊಂಡಾಗ ಸಣ್ಣಗೆ ನಕ್ಕು ತಲೆ ನೇವರಿಸಿದ್ದರು.

ಸಂಸ್ಕಾರ ಇತ್ತು ಮೂಢತ್ವವಲ್ಲ

ನಾನು ಮದ್ರಾಸ್‌ನಲ್ಲಿ ಸಮುದ್ರದ ಮೇಲೆ ಸೇತುವೆ ನಿರ್ಮಾಣದ ಕೆಲಸ ಮಾಡಬೇಕಾಗಿ ಬಂತು. ಆಗ ಮುತ್ತಣ್ಣ 'ನಿನಗೆ ಈಜು ಬರುತ್ತಾ' ಅಂತ ಕೇಳಿದ್ರು. ನಾನು 'ಬರಲ್ಲ' ಅಂತ ಹೇಳಿದ್ದೆ. ಆ ಮಾತುಕತೆ ಅಲ್ಲಿಗೇ ಮುಗಿದಿತ್ತು. ಒಮ್ಮೆ ನಾನು ಕೆಲಸ ಮಾಡುವಾಗ ಆಕಸ್ಮಿಕವಾಗಿ ಸಮುದ್ರಕ್ಕೆ ಬಿದ್ದುಬಿಟ್ಟೆ. ಬೇರೆ ಯಾರೋ ನನ್ನ ಕಾಪಾಡಿದರು. ಈ ವಿಷಯ ನನ್ನ ಹೆಂಡತಿ ಮೂಲಕ ತಾತನಿಗೂ ತಿಳಿಯಿತು. ತಕ್ಷಣವೇ ಒಂದು ತಿಂಗಳು ರಜೆ ಹಾಕಿ ಊರಿಗೆ ಬರುವಂತೆ ಮುತ್ತಣ್ಣ ನನಗೆ ತಿಳಿಸಿದರು. ಇಲ್ಲಿಗೆ ಬಂದವನನ್ನು ಸ್ವತಃ ತಾತನೇ ಹಲಸೂರು ಸ್ವಿಮ್ಮಿಂಗ್ ಪೂಲ್‌ಗೆ ಕರೆದುಕೊಂಡುಹೋಗಿ ಈಜು ಕಲಿಯಲು ಅಡ್ಮಿಷನ್ ಮಾಡಿಸಿ ಬಂದ್ರು. ಒಂದು ತಿಂಗಳಲ್ಲಿ ನಾನು ಈಜು ಕಲಿತೆ. ಕೊನೆಗೊಂದು ದಿನ ತಾತನೇ ಖುದ್ದಾಗಿ ನನ್ನ ಈಜು ನೋಡಲು ಬಂದರು. ಕಲಿತಿದ್ದ ಹುಮ್ಮಸ್ಸಿನಲ್ಲಿದ್ದ ನಾನು ಜೋರಾಗೇ ನೀರಿಗೆ ಬಿದ್ದು ಈಜಿದೆ. ತಾತ ಆಗ ಏನೂ ಹೇಳಲಿಲ್ಲ ಸುಮ್ಮನೆ ಮನೆಗೆ ಬಂದರು.

ರಾತ್ರಿ ಊಟಕ್ಕೆ ಕುಳಿತಾಗ ತಟ್ಟೆಯ ಸುತ್ತ ನೀರು ಸಿಂಪಡಿಸಿಕೊಳುವುದು ನಮ್ಮ ಮನೆಯ ರೂಢಿ. ಅದನ್ನು ಮಾಡಲು ಹೋದಾಗ ತಡೆದ ಮುತ್ತಣ್ಣ "ನಿನಗೆ ಇವುಗಳ ಮೇಲೆ ನಂಬಿಕೆ ಇದ್ದು ಮಾಡುತ್ತಿರುವೆಯೋ ಅಥವಾ ನಮ್ಮಗಳ ಬಲವಂತಕ್ಕೆ ಮಾಡುತ್ತಿರುವೆಯೋ" ಎಂದರು. ನನಗಾಗ ಅಚ್ಚರಿಯಾಯ್ತು "ಯಾಕೆ ಹೀಗೆ ಕೇಳುತ್ತಿರುವಿರಿ" ಅಂತ ಕೇಳಿದ್ದಕ್ಕೆ "ಮಧ್ಯಾಹ್ನ ನೀನು ಈಜುವಾಗ ನಿನ್ನ ಮೈಮೇಲೆ ಜನಿವಾರ ಇರಲಿಲ್ಲ, ಅದಕ್ಕೇನು ನನಗೆ ಬೇಜಾರಿಲ್ಲ. ಆಚರಣೆಗಳನ್ನು ಮತ್ತೊಬ್ಬರ ಬಲವಂತಕ್ಕೆ ಅನುಸರಿಸುವುದಕ್ಕಿಂತ ಅವುಗಳ ವಿಶ್ಲೇಷಣೆ ಮತ್ತು ನಂಬಿಕೆಗಳನ್ನು ತಿಳಿದುಕೊಂಡು ಅನುಸರಿಸಬೇಕು. ಮೂಢತ್ವಕ್ಕಿಂತ ವೈಚಾರಿಕತೆ ಮುಖ್ಯ" ಅಂತ ಹೇಳಿದರು. ಇದು ನಮ್ಮ ಮುತ್ತಣ್ಣ ನಮಗೆ ಕಲಿಸಿದ ಸಂಸ್ಕಾರ.

ಕಿವಿಯಲ್ಲಿ ಉಸುರಿದ ಕೊನೇ ಆಸೆ

ನಿಮಗೆಲ್ಲ ತಿಳಿದಿರುವಂತೆ ನಮ್ಮ ತಾತನಿಗೆ ಗಂಡುಮಕ್ಕಳಿರಲಿಲ್ಲ. ಎಲ್ಲಾ ಹೆಣ್ಣುಮಕ್ಕಳೇ. ಆದ್ದರಿಂದ ಮೊದಲನೇ ಮೊಮ್ಮಗನಾದ ನನ್ನ ಮೇಲೆ ಎಲ್ಲಿಲ್ಲದ ಅಕ್ಕರೆ. ಆದರೂ ಹೆಣ್ಣು ಮಕ್ಕಳೆಂದರೆ ಅವರಿಗೆ ತುಂಬಾ ಪ್ರೀತಿ. ಮನೆಯವರು ಮಾತ್ರವಲ್ಲದೆ ಹೊರಗಿನ ಹೆಣ್ಮಕ್ಕಳನ್ನು ಸಹ 'ತಾಯಿ' ಅಂತಲೇ ಮಾತಾಡಿಸುತ್ತಿದ್ದರು. ಅವರ ಆರೋಗ್ಯ ತೀರಾ ಹದಗೆಟ್ಟ ದಿನ ಅದು. ಅವರನ್ನು ನೋಡಲೆಂದು ನಾನು ಮುಂಬೈನಿಂದ ಬಂದಿದ್ದೆ. ಹಾಸಿಗೆಯ ಮೇಲೆ ತಾತ ಮಲಗಿದ್ದರು. ಮನೆಯವರೆಲ್ಲ ಸುತ್ತ ನಿಂತಿದ್ದರು. ಅಷ್ಟೂ ಜನ ಅಳಿಯಂದಿರು ಪಕ್ಕದಲ್ಲಿದ್ರು ಅವರನ್ನೆಲ್ಲ ದೂರ ಕಳುಹಿಸಿದ ನಮ್ಮ ಮುತ್ತಣ್ಣ ನನ್ನನ್ನು ಹತ್ತಿರ ಕರೆದು ಕಿವಿಯಲ್ಲಿ "ನನಗೇನಾದರೂ ಹೆಚ್ಚುಕಡಿಮೆ ಆದರೆ ನೀನೇ ಅಂತ್ಯಸಂಸ್ಕಾರ ಮಾಡಬೇಕು" ಅಂತ ಹೇಳಿದರು. ನನ್ನ ಮುತ್ತಣ್ಣ ನನ್ನ ಮೇಲಿಟ್ಟಿದ್ದ ಪ್ರೀತಿ ಅದೆಷ್ಟಿದೆ ಎಂದು ಹೆಮ್ಮೆ ಎನಿಸುವಂತ ವಿಷಯ ಅದಾದರೂ ತಾತನ ಆ ಮಾತು ಕೇಳಿ ದುಃಖ ಉಮ್ಮಳಿಸಿತು. ನನ್ನಮ್ಮನ ಮಡಿಲಲ್ಲಿ ತಲೆ ಇಟ್ಟು ಕಣ್ಣು ಒದ್ದೆ ಮಾಡಿಕೊಂಡಿದ್ದು ನನಗೆ ಈಗಲೂ ನೆನಪಿದೆ.

ಮಾಸ್ತಿ...

(12ನೇ ಪುಟದಿಂದ)



ಬಂತು ನೋಡಿದವರಿಗೆ, ಮತ್ಸರವಿಲ್ಲದೆ ಧ್ಯಾನಿಸಿದವರಿಗೆ ಮಾಸ್ತಿಯವರಲ್ಲಿನ ಕಂದಾಚಾರ ವನ್ನು ಮೀರಿದ ಶಿಸ್ತಿನ ಹೊಂದಾಣಿಕೆ, ಮೌಢ್ಯದ ಸೋಂಕಿಲ್ಲದ ಧಾರ್ಮಿಕತೆ, ಆಡಂಬರವಿಲ್ಲದ ಮಾನವೀಯತೆ ಇಷ್ಟವಾಗತೊಡಗಿದವು. ಮಾಸ್ತಿಯ ಮೌಲ್ಯಗಳು ಹಲವೇ: ಈ ಜನಸಮೂಹದ ಬದುಕನ್ನು ನಡೆಸಿಕೊಂಡು ಬಂದಿರುವ ನಂಬಿಕೆ, ವಿಶ್ವಾಸ, ಪ್ರೀತಿ, ಕಲಾರಾಧನೆ. ಆದರೆ ಬಿರುಗಾಳಿಗೆ ಸಿಕ್ಕರೂ ತೂರಿ ಹೋಗಲಾರದ ಈ ಹಲವು ಅನ್ನಿಸಿಕೆಗಳನ್ನು ಕಲೆಯಾಗಿಸುವ ಮಾಧ್ಯಮ ಅವರ ಚೆಲುವನಿ, ಸ್ಪಷ್ಟತೆ, ಅನ್ಯೋನ್ಯ ಇತ್ಯಾದಿ—ಇವೇ ಮೌಲ್ಯಗಳೋ ಅನ್ನಿಸುವಷ್ಟು ಮಟ್ಟಿಗೆ.

ಮಾಸ್ತಿ ಎಂದೂ ತೀರಾ ಆಳವಾದ ಖಾಸಗಿ ಗುಟ್ಟುಗಳನ್ನು ಬರವಣಿಗೆಯಲ್ಲಿ ಬಿಟ್ಟುಕೊಡದ ಮನುಷ್ಯ. ಅವರಲ್ಲಿ ವೆಂಕಟಶಾಮಿಯ ಅಂಶಗಳಿದ್ದುವೆ? ಜ್ಯೋಗ್ಯೋರ ಅಂಜಪ್ಪ ಇದ್ದನೆ? ಅವರು ಎಂತೆಂಥ ವ್ಯಸನಗಳನ್ನು ಪಡೆದಿದ್ದರು? ಎಂಥ ತಿಕ್ಕಲು ಅಥವಾ ಸಹಜ ಮನುಷ್ಯರಾಗಿದ್ದರು?

ಶಿಸ್ತು, ಶಿಷ್ಟಾಚಾರಗಳಿಂದಲೇ ಕಲೆಯಾಗುವುದಿ ಲ್ಲವೆಂಬುದನ್ನು ಅರಿತಿದ್ದ ಮಾಸ್ತಿಯವರಲ್ಲಿ ವ್ಯಂಗ್ಯ ಹಾಸ್ಯಗಳೂ ಇದ್ದವು.

ಅವೆಲ್ಲ ಇರಲಿ, ಮಾಸ್ತಿಯವರು ಸಭೆಗಳಲ್ಲಿ ಮಾತಾಡುತ್ತಿದ್ದ ಶೈಲಿ ನಿಮಗೆ ನೆನಪಾಗುತ್ತಿದೆಯಾ? ವೇದಿಕೆಯನ್ನು ತಿರಸ್ಕರಿಸುತ್ತಿದ್ದ ಆಡುಮಾತಿನ, ತಮಾಷೆ ತುಂಬಿದ, ಆದರೆ ಗಾಂಭೀರ್ಯ ಬಿಟ್ಟುಕೊಡದ ಧ್ವನಿ; ವಿವೇಕ ಹೊಮ್ಮುತ್ತಿದ್ದ ವ್ಯವಹಾರಜ್ಞಾನ ಧಾಟಿ. ಅಕಾಡೆಮಿಕ್ ಜನರ ಭಾರವಿಲ್ಲದೆ, ಅವಿದ್ಯಾವಂತರ ಬೇಜವಾಬ್ದಾರಿತನವಿಲ್ಲದೆ ಚಿಮ್ಮುತ್ತಿದ್ದ ಕೀರಲು ಕೀರಲಾದರೂ ಅಕ್ಕರೆ ತುಂಬಿದ ಮಾತುಗಳು. ಹುಡುಗರಲ್ಲಿ ಉತ್ಸಾಹ ತುಂಬುತ್ತಿದ್ದ ಮುದುಕರ ಬದುಕನ್ನು ಸಹ್ಯಗೊಳಿಸುತ್ತಿದ್ದ ಮಾಸ್ತಿಯವರ ಜೀವನೋತ್ಸಾಹದ ಧ್ವನಿ.

ಕೊನೆಯ ಮಾತು: 'ಕನ್ನಡವೆನೆ ಕುಣಿದಾಡುವುದೆನ್ನದೆ' ಎಂದು ಯಾರಾದರೂ ಹೇಳಿದರೆ ನಿಜಕ್ಕೂ ಕುಣಿದಾಟದ ಬಗ್ಗೆ ವಿಶ್ವಾಸ ಬರುತ್ತಿದ್ದುದು ಮಾಸ್ತಿಯವರ ಕನ್ನಡಾಭಿಮಾನ ಕಂಡು.

ಇಷ್ಟಾದರೂ ಈ ಮಾಸ್ತಿ ನಿಗೂಢ, ಎಲ್ಲ ಕಲಾವಿದರಂತೆ; ಅಥವಾ ದೀಲ್ ಶೋ ಮಾಡಲಿದ್ದರೂ ಕೆಟ್ಟ ಕಾರ್ಡ್‌ಗಳನ್ನು ಹಿಡಿದಂತೆ ಪೋಕರ್ ಮುಖ ಮಾಡಿಕೊಂಡರೂ ಒಳಗಿನ ಹಿಗ್ಗನ್ನು ಹತ್ತಿಕ್ಕದ ಮುಗುಳ್ನಗುವ ಇಸ್ಪೀಟ್ ಆಟಗಾರ ಈ ಮಾಸ್ತಿ ಎನ್ನೋಣವೆ?


ಜೂನ್, ೧೫, ೧೯೮೬

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

ಲೇಖಕರು: ರಮೇಶ ಅರೋಲಿ
ಪ್ರಕಾಶಕರು : ಅಭಿನವ
ನಂ.17/18-2, ಮೊದಲನೆಯ ಮುಖ್ಯರಸ್ತೆ
ಮಾರೇನಹಳ್ಳಿ, ವಿಜಯನಗರ
ಬೆಂಗಳೂರು-560 040
ಪುಟಗಳು: 88, ಬೆಲೆ: ರೂ.50, ಪ್ರಕಟಣೆ: 201



ಎಳೆಯ ಪಾಪದ ಹೆಸರು ನಿಮ್ಮಿಚ್ಛೆಯಂತೆ ಇಟ್ಟುಕೊಳ್ಳಿ

ಇವತ್ತು ಸಲೀಸಾಗಿ ದಕ್ಕುವ ಕಂಪ್ಯೂಟರ್ ಇಂಟರ್ನೆಟ್ ತರಹದ ಆಧುನಿಕ ಬದುಕಿನ ನಾಗರೀಕರಣದ ಸವಲತ್ತುಗಳಿಂದ ಪತ್ರಿಕೆಗಳಲ್ಲಿ ಪದೇಪದೇ ಮುಖದೋರುವ, ಪತ್ರಿಕೆಗಳ ಸಂಪಾದಕ, ಉಪಸಂಪಾದಕರೊಂದಿಗಿನ ಆಪ್ತ ಸಂಪರ್ಕದಿಂದಾಗಿ ಸಾಪ್ತಾಹಿಕದ ಸಾಹಿತ್ಯ ಪುರವಣಿಗಳಲ್ಲಿ ಸದಾ ಕಾಣಿಸಿಕೊಳ್ಳುವ ರಾಜಧಾನಿ ಕವಿಗಳು ಮತ್ತು ಅವರಷ್ಟೇ ಕವಿಗಳೆಂದು ನೆಲೆಗೊಳಿಸಲು ಹೊರಟ ಅವರ ಜಾತಿವಂತರ ಸಾಹಿತ್ಯ ಮಠಗಳು ಈಗ ಈ ಹಿಂದೆಂದೂ ಕಾಣದಷ್ಟು ಕ್ರಿಯಾಶೀಲವಾಗಿ ತಮ್ಮ ಮಠಗಳ ಜಗಲಿ ಪಡಸಾಲೆಗಳನ್ನು ಸಾಹಿತ್ಯದ ಶಕ್ತಿಕೇಂದ್ರಗಳಾಗಿ, ಎಲ್ಲರ ಅಭಿಪ್ರಾಯ ರೂಪಿಸುವ ಮುಖವಾಣಿಗಳಾಗಿ ರೂಪುಗೊಳ್ಳುತ್ತಿವೆ. ಸತ್ವಶಾಲಿ ಕವಿಗಳ ಪಕ್ಕದಲ್ಲಿಯೇ ಟಿ.ಎ./ಡಿ.ಎ. ಕವಿಗಳು ಮಿಂಚುತ್ತಿದ್ದಾರೆ.

ಇಂತಹ ಹೊತ್ತಲ್ಲಿ ತಮ್ಮ ಪದ್ಯಗಳಲ್ಲಿ ಸೇಡುಕೇಡಿಲ್ಲದ ಮನುಷ್ಯ ಸಂವೇದನೆಯ ಹಸಿಹಸಿ ಪ್ರತಿಮೆಗಳ ಮೂಲಕ ಕಾವ್ಯಕ್ಕೆ ಜೀವಮಿಡಿತದ ತೊಗಲು ತೊಡಿಸುತ್ತಿರುವವರಲ್ಲಿ ಈ ತಲೆಮಾರಿನ ಆರೀಫ್ ರಾಜ, ನಾಗಣ್ಣ ಕಿಲಾರಿ, ವೀರಣ್ಣ ಮಡಿವಾಳರ, ಕೈದಾಳ್ ಕೃಷ್ಣಮೂರ್ತಿ, ಅರುಣ್ ಜೋಳದಕೂಡ್ಲಿಗಿ ಮತ್ತು ರಮೇಶ ಅರೋಲಿ ಪ್ರಮುಖರು. ಅದರಲ್ಲೂ ರಮೇಶರ ಪದ್ಯಗಳನ್ನು ಓದುವುದೆಂದರೆ ಸೂತಕದ ಮನೆಯೆದುರು ಮಧುಶಾಲೆ ತೆರೆದಂತೆ. ಸೂತಕ ಮತ್ತು ಮಧುಶಾಲೆ ಇವೆರಡು ಅವರ ಟ್ರೇಡ್‌ಮಾರ್ಕ್‌ನಂತೆ ಇಡೀ ಸಂಕಲನದುದ್ದಕ್ಕೂ ಹರಡಿಕೊಂಡಿವೆ. ಕಳೆದ ವರ್ಷ ಜಿಂಬಾಬ್ವೆ ರಕ್ಷಣಾಪಡೆಯಿಂದ ಅಕ್ರಮವಾಗಿ ಬಂಧಿಸಲ್ಪಟ್ಟ **'Members of Democratic Change'** ಎಂಬ ಮಾನವ ಹಕ್ಕುಗಳ ಸಂಘಟನೆಯೊಂದರ ಕಾರ್ಯಕರ್ತರ ಮೂರು ವರ್ಷದ ಮಗು ನಿಜೆಲ್ ಮುಟೆಮಗೌನನ್ನು ಅಲ್ಲಿಯ ನ್ಯಾಯಾಲಯವೊಂದು ಭಯೋತ್ಪಾದಕ ಚಟುವಟಿಕೆಗಳಡಿ ಹೆತ್ತವರೊಂದಿಗೆ ಮೂರು ತಿಂಗಳ ಕಾರಾಗೃಹವಾಸ ಶಿಕ್ಷೆ ವಿಧಿಸಿ ಜಗತ್ತಿನ ಅತಿ ಕಿರಿಯ ಉಗ್ರಗಾಮಿಯೆಂಬ ಹಣೆಪಟ್ಟಿ ಹಚ್ಚಿ ಮಾಧ್ಯಮಗಳಿಗೆ ಬ್ರೇಕಿಂಗ್ ನ್ಯೂಸ್ ತರಹದ ಸುದ್ದಿಯನ್ನು ಹಂಚಿತು. ಆ ಕ್ಷಣದಲ್ಲಿ ಈ ಘಟನೆಯೆದುರು ಮುಖಾಮುಖಿಯಾಗಿ ನಿಲ್ಲುವ ರಮೇಶ್ 'ದುಃಖ ದಾಖಲಿಸುವವನೆ ಇದನ್ನು ಬರೆದಿಟ್ಟುಕೊ' ಎಂಬ ಪದ್ಯದಲ್ಲಿ ಬರೆಯುತ್ತಾರೆ:

ಕಟಕಟೆಯ ಕಿತಾಬಿನ ಹಾಳೆ ನಿನ್ನವು
ಹಿಡಿದ ಲೇಖನಿಯ ಶಾಯಿಗೂ
ನಿನ್ನ ನೆತ್ತರಿನ ಗುಣ
ಇನ್ನು ತೀರ್ಪು ನಿನ್ನಿಚ್ಛೆಯಂತೆ ಬರೆದುಕೊಂಡಲ್ಲಿ
ಪ್ರತಿಸಲ ನಾನೇಕೆ ಆಶ್ಚರ್ಯಪಡಲಿ
ತಮಾಷೆಯೆಂದರೆ ಇಷ್ಟು ಹೇಳಲೂ ನಿನಗೆ
ಸುತ್ತಲೂ ಭದ್ರತೆ; ನನಗೊ ತುಕ್ಕು ತಕ್ಕಡಿಯಡಿ
ಪಕ್ಕಲು ಆಯಸ್ಕಾಂತದ ನೆನಪು
ಮೈದಾನಗಳು ಧಿಕ್ಕರಿಸಿದವನ ಪಾದದ ಹೆಸರು
ಕಡಲ ಅಲೆಗಳ ಮಾತುಬಿಡು
ಮೊದಲಿನಂತೆ ಮರೆವಿನ ಖಯಾಲಿ
ಅವಕ್ಕೆ; ಆದರೆ ಈ ಸಲ
ಜಗದ ಎಂಥ ಕಲ್ಲಿನ ಮೇಲಾದರು ಕೆತ್ತಿಸು
ಸಿಕ್ಕ ತುಫಾಕಿಯ ಮೇಲಿನ ಬೆರಳ ನಿಶಾನೆ
ಕೇವಲ ಮೂರು ವರಷದ ನನ್ನದೇ ಎಂದು!



ಈಗ ದಿಲ್ಲಿಯ ಕಮಲಾನೆಹರೂ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ರಮೇಶ್ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಲಂಕೇಶರು ಬದುಕಿದ್ದಾಗ ರೂಪಿಸಿದ 'ಲಂಕೇಶ್ ಪತ್ರಿಕೆ'ಗಳ ಕುರಿತೇ ಪಿಎಚ್.ಡಿ. ಮಾಡುತ್ತಿದ್ದಾರೆ. 'ಹುಟ್ಟಿದ್ದು ರಾಯಚೂರಿನ ಅಸ್ಕಿಹಾಳ. ಎರಡನೆಯ ತರಗತಿಯಿಂದ ಇಲ್ಲಿಯವರೆಗೆ ಹಾಸ್ಟೆಲ್‌ನಲ್ಲಿ ಓದು, ಓದಿನ ಭಾಗವಾಗಿದ್ದ ಹಾಸ್ಟೆಲ್ ಕೋಣೆಗಳು ಒಂಟಿತನ, ಬೇಸರ, ಹಸಿವು, ಶಿಸ್ತು, ಆಳು ಮತ್ತು ಹೊಸ ಹುಡುಗರೊಂದಿಗೆ ಬೆರೆತು ನಗುವ ಬಗೆಯನ್ನು ಕಲಿಸಿದವು' ಎಂದು ಹೇಳುವ ರಮೇಶ್ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಹೆಡೆಯಾಡುವ ಭೂಮಾಲಿಕತೆ, ಜಾತಿ ತಾರತಮ್ಯ, ಗೌಡರ ಮನೆಗಳಲ್ಲಿನ ಮದುವೆ; ಅವರ ಮಕ್ಕಳ ಸಂಭ್ರಮ, ಒಂದು ಸಂಜೆ ಯಾರೋ ನೆತ್ತಿಯ ಮೇಲೆ ಹೊತ್ತು ಬೇಲಿಯಲ್ಲಿ ಬಿಸಾಡಿದ್ದು ಮಲವೆಂದು, ಆ ಯಾರೋ ದಲಿತರೆಂದು, ಅವರಷ್ಟೇ ಆ ಊರಿನಲ್ಲಿ ಮಲಹೊರುತ್ತಿದ್ದದ್ದನ್ನು ಕಂಡು ಕುದ್ದುಹೋಗುತ್ತಾರೆ.

ಧಾರವಾಡದಲ್ಲಿ ಪತ್ರಿಕೋದ್ಯಮದ ಓದು, ಚಳವಳಿ, ಸಾಹಿತ್ಯದ ಒಡನಾಟ. ಕೆಲವು ದಿನ ಕಾರವಾರದಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ರಿಪೋರ್ಟರ್ ಆಗಿ ಕೆಲಸ ಮಾಡಿದ ನೆನಪು, ಆ ಮಧ್ಯೆ ಕಾಲೇಜಿನ ರಜೆಯಲ್ಲಿ ಹೋಟೆಲ್‌ಗಳಲ್ಲಿ ಕ್ಲೀನರ್, ಸಪ್ಲೈಯರ್, ರೂಂ ಬಾಯ್ ಆಗಿ ಕೆಲಸ ಮಾಡಿದ ನೆನಪುಗಳು ರಮೇಶರನ್ನು **down to earth** ನೆಲೆಗಟ್ಟಿನ ಅಪ್ಪಟ ಕವಿಯನ್ನಾಗಿ ರೂಪಿಸಿವೆ.

ಸಿಟಿಬಸ್ಸಿನ ಲೇಡಿಸ್ ಸೀಟಿನಿಂದ ಗದರಿಸಿಕೊಂಡು ಎದ್ದು ಪೆಚ್ಚಾಗಿ ನಿಂತವನ ಮುಖದ ಸ್ಲೇಟಿನ ಮೇಲೆ ಯಾರೋ ಕಿಸಕ್ಕನೆ ನಕ್ಕಂತೆ ಎಳೆದ ಅವಮಾನದ ರೇಖೆಗಳು, ನಡುರಾತ್ರಿಯಲ್ಲಿ ಹಾಸಿಗೆಯಿಂದೆಬ್ಬಿಸಿ ದರದರನೆ ಎಳೆದೊಯ್ದು ಟೇಬಲ್ಲಿಗೆ ಕುಕ್ಕರಿಸಿ 'ತಗೋ ಬರಿ' ಎಂದಾಗಿನ ಕಿರಿಕಿರಿಗಳು, ನಿರ್ಜನ ಲೈಬ್ರರಿಯಿಂದ ದಿಢೀರನೆ ಅಕಾಡೆಮಿಕ್ ಓದಿನಿಂದ ಓಡಿ ಹೋಗಬೇಕೆನಿಸಿ ಹೊರಡದೆ ಕೂತು ಗೀಚಿಕೊಂಡಾಗ ದಕ್ಕಿದ ಸಾಲುಗಳು... ರಮೇಶರ ಕೈಗೆ ಹಠಾತ್ ಸಿಕ್ಕಿ ಕಾವ್ಯದ ದಿರಿಸು ತೊಡುತ್ತವೆ:

ಹಾಗೆ ಮೈದಾನದಲಿ ಮೈಮರೆತ
ಅವರ ಮಕ್ಕಳು ಕುಡುಕ, ತಲೆಹಿಡುಕ
ಇಲ್ಲ ಕೊಲೆಗಡುಕರಾಗುತ್ತಾರೆ; ಮತ್ತೆ
ಅವರೂ ವಿಳಾಸ ಹುಡುಕಿ ಹೊರಡುತ್ತಾರೆ
ಹೀಗೆ ಇತಿಹಾಸ ನೆಪವಾಗುತ್ತದೆ
ಮನೆಯೆದುರು ಬದುಕುವವನಿಗೆ!

ಆತ್ಮಮರುಕವಿಲ್ಲದ ರಮೇಶರ ಪದ್ಯಗಳು ಕಾವ್ಯವಾಗಲೇಬೇಕೆಂಬ ರಚ್ಚೆ ಹಿಡಿಯುವುದಿಲ್ಲ; ಕಂಡದ್ದರ ಮೇಲೆ ಪ್ರಶ್ನೆ ಎಸೆದು ಉತ್ತರಕ್ಕೂ ಕಾಯದೆ ಮತ್ತೊಂದು ತಲ್ಲಣಕ್ಕೆ ಸಾಕ್ಷಿಯಾಗುವ ತುರ್ತಿನಲ್ಲಿ ಹೊರಟುನಿಲ್ಲುತ್ತವೆ.

ಸರಿ ನಿಮ್ಮ ರಿವಾಜಿನರ್ಥದಂತೆ
ಕಡೆಯ ಸಲಹೆ ಕೊಡಿ
ಪುಕ್ಕಟೆಯಲ್ಲ ಮತ್ತೊಂದು ಕಾಸಿಗೆ
ಯಾವ ದೇವರ ಹೆಸರಿಡುವುದೊಳಿತು
ಅಪ್ಪ ಸತ್ತ ದಿನ ಕಣ್ಬಿಟ್ಟ ಕೂಸಿಗೆ!
ಪುಸ್ತಕದ ಹಿನ್ನುಡಿಯಲ್ಲಿ
ಡಾ.ಬಂಜಗೆರೆ ಜಯ ಪ್ರಕಾಶರು
ಕಣ್ಣಿದ್ದರೆ ಕಂಡು; ಎತ್ತಿ ಎದೆಗವಚಿಕೊಳ್ಳಿ
ನಿಮ್ಮ ಪಂಚೇಂದ್ರಿಯಗಳಿನ್ನೂ
ನಿರ್ದೋಷಿಯಾದಲ್ಲಿ
ಎಳೆಯ ಪಾಪದ ಹೆಸರು
ನಿಮ್ಮಿಚ್ಛೆಯಂತೆ ಇಟ್ಟು ಕೊಳ್ಳಿ!

ಎಂಬ ರಮೇಶರ ಸಾಲುಗಳನ್ನು ಓದಿ 'ಎಳೆಯ ಪಾಪ-ಅದಕ್ಕೆ ಬೇಕಾದ ಹೆಸರಿಡುವ' ಸ್ವಾತಂತ್ರ್ಯ ಪಂಚೇಂದ್ರಿಯಗಳು ನಿರ್ದೋಷಿಯಾಗಿರುವವರಿಗೆ ಮಾತ್ರ ಇದೆ ಎಂಬ ಶರತ್ತು ಒಡೆದು ಹೇಳುತ್ತಿರುವ ಸತ್ಯಕ್ಕೆ ಉತ್ತರಿಸಬೇಕಿರುವುದು 'ಮನುಷ್ಯ ಲೋಕ' ಎಂದು ಷರಾ ಹೊರಡಿಸಿರುವುದು ರಮೇಶ ಅರೋಲಿಯವರ ಕಾವ್ಯದ ಯಶಸ್ಸಿಗೆ ಪುಟ್ಟ ನವಿಲುಗರಿ ತೊಡಿಸಿದಂತಿದೆ. ಓದುಗರು ರಮೇಶರ ಈತನಕದ ಎಲ್ಲ ಬರೆಹಗಳಿಗಾಗಿ ಅವರ **http://www.naditeera.blogspot.com** ಕದ ಬಡಿಯಬಹುದು.

❖



ಅನ್ಯಾಯ ಅನ್ಯಾಯವೆಂದು
ವಚನ ಭ್ರಷ್ಟರೆಂದು
ಗಲ್ಲಿಗಲ್ಲಿಗಳಲ್ಲಿ ಕೂಗಿ
ಹೇಳಿದವರು ನಾವು!

ಕೋಟಿ ಕೋಟಿ ಮನಸುಗಳ
ಮರಳು ಮಾಡಿ
ಗದ್ದುಗೆ ಗದ್ದುಗೆಯೇರಿದ
ಅಮಲಿನಲಿ,
ಅನ್ನದಾತನ ಎಟ್ಟಕ್ಕೇರಿಸಿ
ಲಾಟಿ, ಬೂಟು, ಬಂದೂಕಿನ
ಬುತ್ತಿಯ ನೀಡಿ,
ಜೈಲಿಗಟ್ಟಿ ಚಟ್ಟಕ್ಕೇರಿಸಿದವರು ನಾವು!
ಹಸಿದ ಹೊಟ್ಟೆ ಕಣ್ಣೀರಿಟ್ಟು
ಉಕ್ಕಿನ ಹಕ್ಕಿಗೆ
ಕೊಳಗ ಕೈಚಾಚುವಾಗ
"ಕ್ಷೀರಬಂಧು" ಕಿರೀಟ ತೊಟ್ಟು
ಸಂತಸಪಟ್ಟವರು ನಾವು!
ವಿರುಪಾಕ್ಷನೂರಿನಲ್ಲಿ (ಹಂಪಿ)

ಕೊಚ್ಚಿ ಹೋದವು
ಜನ, ಜಾನುವಾರು, ಸೂರುಗಳು.
ಸಾವಿರಾರು, ಶವಗಳು.
ತಪಾಸಣ ಮಾಡುತ್ತಾ (ಕುತ್ತೂರಿನಲಿ)
ಚಾಮುಂಡಿಯ ತವರಿನಲ್ಲಿ
ಕಾಲ ಕಳೆದವರು ನಾವು!

ದೇವರ ದೇವ
ಮಹದೇವನ ಮಡಿಲಲ್ಲಿ
ಗಂಗೆಯ ದರ್ಶನವಿಲ್ಲ,
ಪಕ್ಕದ ಪೆರಿಯಣ್ಣಗಳ
ನೋಡಿಯೂ ನಾವು ಕಲಿಯಲಿಲ್ಲ,
ಚಿನ್ನದ ನಾಡಿನ
ಚಿನ್ನ ತಂಬಿಗಳು ನಾವು!

ಅತ್ಯಾಚಾರಿಗಳ ಜತೆ
ಹೆಜ್ಜೆ ಮೇಲೆ ಹೆಜ್ಜೆ ಹಾಕಿ,
ತಿಲುಬೆಗಳ ಚೂರು ಮಾಡಿ,
ಲಂಚಕೋರರಿಗೆ ಗೆಜ್ಜೆ ಕಟ್ಟಿ,
ಕರುನಾಡಿಗೆ ಪ್ರಥಮ ಸ್ಥಾನ
ಗಿಟ್ಟಿಸಿಕೊಟ್ಟವರು ನಾವು!

ನಾಡಿನ ಗಡಿ, ಗಣಿ, ನೆಲ, ಜಲ,
ಸಂಪತ್ತು ರಕ್ಷಿಸುವ
ಪುಣ್ಯ ಕೋಟಿಯ ನಾಡಿನ
ಪುಣ್ಯವಂತರು ನಾವು
ಭಲೆ ಪುಣ್ಯವಂತರು.

-ಬಿ.ಆರ್. ನಾಗೇಶ್ ಜರಗನಹಳ್ಳಿ

ಪ್ರಜಾಪ್ರಭುತ್ವದ ಲೋಪತೆಗಳು

ಎರಡು ಟಿಪ್ಪಣಿಗಳು

ಒಂದು ಪತ್ರ

ನಮ್ಮ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಇವತ್ತಿನ ರಾಜಕೀಯ ನಯವಾಗಿ ಗಾಳಿಗೆ ತೂರಿ ತನ್ನ ಪರಾಕಾಷ್ಠತೆಯನ್ನು ಮೆರೆಯುತ್ತಿದೆ. ಜಾತಿ ರಾಜಕಾರಣ, ಸ್ವಹಿತಾಸಕ್ತಿಗಳನ್ನು ಮುಂದಿಟ್ಟುಕೊಂಡು ಬಡವರ-ಶೋಷಿತರ ಬದುಕನ್ನು ದಮನ ಮಾಡಲಾಗುತ್ತಿದೆ. ರಾಜಕೀಯ ಪಕ್ಷಗಳು ಮತದಾರರನ್ನು ವೋಟ್‌ಬ್ಯಾಂಕ್‌ಗಳಾಗಿ ಪರಿವರ್ತಿಸಿ ತಮ್ಮ ಅರಾಜಕತೆಯನ್ನು ವಿಜೃಂಭಿಸುತ್ತಿವೆ. ಇಂದಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅನ್ಯಾಯದ ವಿರುದ್ಧ ಹೋರಾಡುವುದನ್ನೇ ಆಳುವ ಸರ್ಕಾರ ಮತ್ತು ಕಾನೂನು ವ್ಯವಸ್ಥೆ ಅಪರಾಧವೆಂದು ಪರಿಗಣಿಸುತ್ತಿವೆ. ಈ ಮಧ್ಯೆ ಜನರಿಗೆಂದು ರೂಪಿಸಿರುವ ಯೋಜನೆಗಳ ಅನುಷ್ಠಾನ ಮತ್ತು ಸದ್ಬಳಕೆ ಸರಿಯಾಗಿ ಆಗುತ್ತಿದೆಯೇ? ಇತ್ತೀಚಿನ ಎರಡು ಘಟನೆಗಳನ್ನು ಉದಾಹರಿಸಬಹುದು.

ಪ್ರಕರಣ ಒಂದು:

ಕಳೆದ ಮಾರ್ಚ್ 25ರಂದು ಕೊಪ್ಪಳದಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿ ದುಡಿದ ಬಡ ರೈತಾಪಿಗಳು ತಾಲ್ಲೂಕು ಪಂಚಾಯತ್ ಆವರಣಕ್ಕೆ ತಮಗೆ ಬರಬೇಕಿದ್ದ ಕೂಲಿ ಹಣ ಕೇಳಲುಹೋದರೆ ಅವರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದರು. ಬಡ ಕಾರ್ಮಿಕ ವರ್ಗವು ಹೋರಾಟ ನಿರತರಾಗಿದ್ದಾಗ ಹೆಣ್ಣುಮಕ್ಕಳು ಎಂಬುದನ್ನೇ ಲೆಕ್ಕಿಸದೆ ಪೊಲೀಸರು ಎಲ್ಲರ ಮೇಲೂ ಮನಸೋ ಇಚ್ಛೆ ಲಾಠಿ ಬೀಸಿ ತಮ್ಮ ಅಧಿಕಾರ ದರ್ಪತೆಯನ್ನು ಮೆರೆದರು. ಈ ಪ್ರಕರಣವನ್ನು ಎಲ್ಲರೂ ಖಂಡಿಸಿದಾಗ ಕೆಲವು ಪೊಲೀಸ್ ಪೇದೆಗಳನ್ನು ಅಮಾನತು ಮಾಡಲಾಗಿದೆ ಎಂದು ಹೇಳಿದ ಸರ್ಕಾರ ತಿಪ್ಪೆಸಾರಿಸಲು ಯತ್ನಿಸಿತು. ಆದರೆ ಲಾಠಿ ಪ್ರಹಾರ ಮಾಡಲು ಆದೇಶವಿತ್ತ ಉನ್ನತ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಯಿತು? ಈ ಪ್ರಶ್ನೆಗೆ ಉತ್ತರವಿಲ್ಲ.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸಾಮಾನ್ಯರ ಹೋರಾಟಕ್ಕೆ ಆಸ್ಪದವೇ ಇಲ್ಲದಂತಾಗಿದೆ. ಇದು ಪ್ರಜಾಪ್ರಭುತ್ವದ ಕಗ್ಗೊಲೆ.

ಪ್ರಕರಣ ಎರಡು:

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಹಂಚಿನಾಳಕ್ಯಾಂಪ್ ಎಂಬ ಊರು ಗೊರೇಬಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರಮುಖ ನೀರಾವರಿ ಹಳ್ಳಿ. ಪ್ರತಿವರ್ಷ ಬೇಸಿಗೆ ಸಂದರ್ಭದಲ್ಲಿ ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ನೀರಿನ ಹರಿಯುವಿಕೆ ಸ್ಥಗಿತಗೊಳ್ಳುವುದರಿಂದ ಊರಿನ ಜನರೆಲ್ಲಾ ಕೆರೆಯ ನೀರನ್ನೇ ಎಲ್ಲದಕ್ಕೂ ಬಳಸುತ್ತಾರೆ. ಹಾಗಾಗಿ ಇಲ್ಲಿನ ಬಹುತೇಕ ಗ್ರಾಮಪಂಚಾಯತಿ ಸದಸ್ಯರುಗಳು ಪ್ರತಿವರ್ಷ ಕೆರೆ ಹೂಳೆತ್ತುವುದು, ಕೆರೆ ಸ್ವಚ್ಛ ಮಾಡುವುದೆ ಎಂದೆಲ್ಲ ಬಿಲ್ ಮಾಡಿಸಿಕೊಳ್ಳುತ್ತಾರೆ.

ಪ್ರಸಕ್ತ ವರ್ಷದಲ್ಲಿ ಕೇಂದ್ರ ಸರ್ಕಾರದ ಜಲ ನಿರ್ಮಲ ಯೋಜನೆಯಡಿ ಸುತ್ತಮುತ್ತಲಿನ ಉಳಿದೆಲ್ಲಾ ಹಳ್ಳಿಗಳಿಗಿಂತಲೂ ಹಂಚಿನಾಳಕ್ಯಾಂಪಿಗೆ ಹೆಚ್ಚಿನ 2.15 ಕೋಟಿ ಹಣ ಮಂಜೂರು ಆಗಿದೆ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ತಂಡವೊಂದು ಇಲ್ಲಿಗೆ ಭೇಟಿ ನೀಡಿ ಬೃಹತ್ ಕೆರೆಗೆ ಅಗತ್ಯವಾದ ಜಮೀನಿನ ಪರಿಶೀಲನೆಯನ್ನು ನಡೆಸಿದೆ.

ಇದರ ನಡುವೆ ಸ್ಥಳೀಯ ಪಂಚಾಯತ್ ಅಧಿಕಾರಿಗಳು ಪ್ರತ್ಯೇಕವಾಗಿ ಮನೆಮನೆಗೆ ನಲ್ಲಿಯನ್ನು ಹಾಕಿಸಲು ಪ್ರತಿ ಮನೆಯಿಂದ 3000 ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ. ಶ್ರೀಮಂತ ಕುಟುಂಬಗಳು ಮನೆಯ ನಲ್ಲಿಗಾಗಿ ಸಂಭ್ರಮಿಸುತ್ತಿವೆ. ಮಧ್ಯಮವರ್ಗದ ಕುಟುಂಬಗಳು ಸಾಲಸೋಲ ಮಾಡಿ ಪೈಪೋಟಿಗೆ ಬಿದ್ದು ಹಣವನ್ನು ಪಾವತಿಸುತ್ತಿದ್ದಾರೆ. ಆದರೆ ದುಡಿಯುವ ಬಡವರ್ಗ ಮಾತ್ರ ಹಣ ತೆರಲಿಕ್ಕಾಗದೇ ಅನಾಥವಾಗಿದೆ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಕೋಟ್ಯಾಂತರ ರೂಪಾಯಿಗಳಲ್ಲಿ ಎಲ್ಲಾ ಮನೆಗಳಿಗೂ ನಲ್ಲಿಗಳನ್ನು ಹಾಕಿಸಲಿಕ್ಕೆ ಆಗುವುದಿಲ್ಲವೇ? ಪಂಚಾಯತಿಯ ಪ್ರತಿನಿಧಿಗಳು ಪ್ರಾಮಾಣಿಕತೆಯಿಂದ ಯೋಜನೆಯ ಹಣವನ್ನು ಬಳಕೆ ಮಾಡಿಕೊಳ್ಳಬಾರದೇ?

-ಬಸವರಾಜ ಬಳಿಗಾರ, ಹಂಪಿ

ಈ ಸಿನುಮಾದವ್ರುಕೆ ಸ್ವಂತ ತಲೆನೆ ಇಲ್ಲ ಕಣ್ರೊ!

ಯಾವುದೊ ಕೆಟ್ಟ ಅನುಭವ ಪಡೆದವಳಂತೆ ಜುಮ್ಮಿ ಣಗಿಕೊಂಡೇ ಬಂದು,

"ಅಸ್ ನಾರಾಯ್ಣ ಹೋಗತ್ತಗೆ" ಎನ್ನುತ್ತಾ ಕುಳಿತಳು.

"ಅದ್ಯಾಕ್ ನಳ್ಳತಿಯಲ್ಲ ಉಸಾರಿಲ್ಲವೇನೆ?" ಎಂದ ಳಮಾವ.

"ರಾತ್ರೆ ವಡದ ಮಳಿಗೆ ಮನೆ ಸೋರ್ತು ಕಣ ಮಾವ. ದ್ದೆ ಮಾಡಕ್ಕೆ ಆಗಲಿಲ್ಲ. ಈ ಉಗ್ರಿ ಬ್ಯಾರೆ ಅದ್ಯಾವುದೊ ಮುಮಕ್ಕೆ ಕರಕಂಡೋಗಿದ್ದ. ಆಟೋರಿಕ್ಷಾದಲ್ಲಿ ಬರೊವತ್ತಿಗೆ ರ್ಧರಾತ್ರಿಯಾಗಿತ್ತು. ಉಂಡು ಮನುಗೊ ವತ್ತಿಗೆ ಳಿಬಿತ್ತು. ರಾತ್ಯೆಲ್ಲ ನಿದ್ದಿಲ್ಲ ಹೋಗತ್ತಗೆ."

"ಸಿನುಮ ಯಾವುದ್ದೆ?" ಎಂದ ಸೀರ.

ಬ ಯ ಲು ಸೀ ಮೆ ಕಟ್ಟೆಪುರಾಣ

▶ ಬಿ. ಚಂದ್ರೇಗೌಡ

"ಕ್ಯಂಪೇಗೌಡ ಅಂತ."

"ಅಂಗರೆ ವಳ್ಳೆ ಸಿನುಮ ನೋಡಿದ್ದಿ ಬುಡು. ಪೇಗೌಡನ ಮ್ಯಾಲೂ ಸಿನುಮ ತಗದವುರೆ ಅಂದ್ರೆ ಡಬೇಕಾದ್ದೆಯ" ಎಂದ ಸೀರ.

"ಕ್ಯಂಪೇಗೌಡ ಬೆಂಗಳೂರು ಕಟ್ಟಬೇಕಾದ್ರೆ ಮಾಗಡಿಯ ಳೆಪಟ್ಟ ಮಾಡಿಕಂಡಿದ್ದ ಇಲ್ಲಿಗಂಟ ಬೆಂಗಳೂರು ಬ್ಯಳಿತದೆ ತ ನಾಕಾಮೂಲಿಗೂ ಮಂಟಪ ಮಾಡಿದ್ನಂತೆ. ಈಗ ಮಂಟಪ ಎಲ್ಲಿದ್ದವೊ ಏನೊ" ಎಂದ ಕಾಳಮಾವ.

"ಏ, ನೀನೇಳೊ ಕ್ಯಂಪೇಗೌಡನ ಸಿನುಮಲ್ಲ ಕಣಮಾವ ದು."

"ಅಂಗರಿನ್ಯಾವುದ್ದೆ?"

"ಹೆಸರಿಗಷ್ಟೇ ಕ್ಯಂಪೇಗೌಡ ಕಣಮಾವ. ಇದು ಾವನೋ ಪೊಲೀಸ್ ಇನ್ಸ್‌ಪೆಕ್ಟರ್ ಮ್ಯಾಲೆ ತಗದಿರೊ ನುಮ" ಎಂದ ಉಗ್ರಿ.

"ಓ, ಇನ್ಸ್‌ಪೆಕ್ಟರು ಕ್ಯಂಪೇಗೌಡ ಅನ್ನು" ಎಂದ ರ.

"ಊ ಕಣ ಮಾವ."

"ಅಂಗರೆ ಕ್ಯಂಪೇಗೌಡನ ಮ್ಯಾಲೆ ಸಿನುಮ ತಗಿವಾಗ ನೆಸರಿಡತರೇ?"

"ಏನಿಡತರಪ್ಪ ಅವುರನೆ ಕೇಳಬೇಕು. ಈಗ ಸಂಗೊಳ್ಳಿ ಯಣ್ಣಾ ಅಂತ ಸಿನುಮ ತಗಿತ ಅವುರೆ. ಆ ಸಿನುಮಕೆ ದೇ ಹೆಸುರು ಮಡಗ್ಯವುರೆ. ಆದೇನೊ ಸರಿ. ಆದ್ರೆ ಾವುದೊ ಪೊಲೀಸ್ ಕತಿಗೆ ಕ್ಯಂಪೇಗೌಡ ಅಂತ ಹೆಸುರು ಡಿಗ್ಯವುರಲ್ಲಾ ಇವುರಿಗೇನೇಳನಾ?"

"ಅಂತ ಸಿನುಮನ್ಯಲ್ಲ ನೋಡಕ್ಕೋಗಬಾರ್ದು ಕಂಡ್ಯ" ಎಂದ ಕಾಳಮಾವ.

"ನಾನು ಹೋಯ್ತಿರಲಿಲ್ಲ ಕಣಮಾವ. ಈಚಿಗೆ ಸಿನುಮ ನೋಡದ್ನೆ ಬುಟ್ಟದ್ದಿನಿ. ಕೆಂಪೇಗೌಡ ಅನ್ನೊ ಸಿನುಮದಲ್ಲೇನದೆ ಅಂತ ಹೋಗಿದ್ದೆ. ಅದು ತಮುಳು ಸಿನುಮ ತಂದು ತಗದಿದ್ದರಂತೆ. ಆ ಸರೋವರ ಸಂಜೀವನ ಮಗನಿಗೆ ಸ್ವಂತ ತಲಿಯೇ ಇಲ್ಲ."

"ಸರೋವರ ಸಂಜೀವ ಅಂದ್ಯಾರು?"

"ಅವುನು ಅಂಬರೀಸ್ ಪ್ರೆಂಡು. ಹೋಟ್ಳುಮಡಗಿ ಭಾಳ ದುಡುದವುನೆ. ಅವುನ ಮಗನೆ ಸುದೀಪ ಅಂತ. ಅಪ್ಪನ ದುಡ್ಡನ್ಯಲ್ಲ ತಂದು ಸಿನುಮಾಕ್ಕೆ ಸುರುದು ಈರೊ ಆದ. ಆಗ್ಲಿ, ನಾನೇನು ಬ್ಯಾಡ ಅನ್ನದಿಲ್ಲ. ಆದ್ರು ಕೆಲವು ಚೇಷ್ಟೆ ಮಾಡ್ತನೆ. ಅದೇ ನನಿಗಾಗದಿಲ್ಲ."

"ಅದೇನು ಚೇಷ್ಟೆ ಮಾಡಿದಾ?"

"ಏನಪ್ಪಾ ಅಂದ್ರೆ, ಕಮಲಾಹಾಸನ್ ಸಿನುಮವ ಕನ್ನಡದಲ್ಲಿ ತಗುದು ತಾನೇ ಆಕ್ಟಿಂಗ್ ಮಾಡ್ತನೆ. ಕಮಲಾಹಾಸನ್ ಎಲ್ಲೀ ಇವುನೆಲ್ಲೀ. ನವುಲಾಡ್ತದೆ ಅಂತ ಕ್ಯಂಬೂತ ಪುಕ್ಕ ತರಕಂಡು ಕುಣಿತಂತೆ, ಅಂಗಾಯ್ತು ಇವುನ ಕತೆ. ಅದೋಗ್ಲಿ, ಈಗ ಕ್ಯಂಪೇಗೌಡ ಅನ್ನೊ ಹೆಸರಿಗೇ ಹತ್ತು ಲಕ್ಷ ಕೊಟ್ಟು ತಗದನಂತೆ. ಇವ್ಯಲ್ಲ ನನ್ನ ಲ್ಯಕ್ಕದಲ್ಲಿ ಚೇಷ್ಟೆ."

"ಏನಾರ ಮಾಡಿಕಳ್ಳಿ, ವಳ್ಳೆ ಸಿನುಮ ಬಂದ್ರೆ ನೋಡಿ, ಇಲ್ಲಾ ಅಂದ್ರೆ ಸುಮ್ಮನಿರಿ ಅತ್ತಗೆ. ನಾವು ನಿಮ್ಮೊಟ ಸಿನುಮ ನೋಡ್ಯೆಯಿಲ್ಲ, ಏನಾಗಿದ್ದಿವೀ?"

"ನೀವು ಚನ್ನಾಗೇ ಇದ್ದೀರಿ ಕಣಮಾವ. ಅದಲ್ಲ ನಾನೇಳದು. ಸ್ವಂತುಬುದ್ದಿ ಉಪಯೋಗ ಸಕ್ಕೇನೂ ಅಂತ. ಕತೆನೂ ತಮುಳಿಂದ್ಲೇ ತರ್‍ತವೆ. ಈಗ ಮಲ್ಲಿಕಾರ್ಜುನ ಅಂತ ರವಿಚಂದ್ರನ್ ಸಿನುಮ ಬಂದದೆ. ಅದೂ ಓಬೀರಾಯನ ಕಾಲದ ತಮುಳ ಸಿನುಮವಂತೆ."

"ರವಿಚಂದ್ರನ ಸಿನುಮನು ಓಡ್ತಾಯಿಲವಂತೆ ಈಗ?" ಎಂದಳು ಜುಮ್ಮಿ.

"ಯಂಗೋಡಬೇಕಕ್ಕಾ? ಅಂಗೆ ನೋಡಿದ್ರೆ ಅವುನು ಇಲ್ಲಿಗಂಟ ಸಿನುಮದಲ್ಲಿ ಇದ್ದಿದ್ದೇ ಹೆಚ್ಚು, ಅವುನು ತಮುಳ ಸಿನುಮದಲ್ಲಿ ಇದ್ದಿದ್ರೆ ಮೂರು ಸಿನುಮಕ್ಕೆ ಮನಿಗೆ ಕಳಸೋರು" ಎಂದು ವಾಟಿಸ್ಸೆ ಹಾಜರಾದ.

"ಅದ್ಯಾಕ್ಲ ಅಂಗಂತೀ?"


"ಯಾಕಂದ್ರೇ ತಮುಳಲ್ಲಿ ಪ್ರತಿಭೆ ಇದ್ದೊರು, ಆಕ್ಟಿಂಗ್ ಕ್ಯಪಾಸಿಟಿ ಇದ್ದೊರು ಮಾತ್ರ ಫಿಲಂ ಪೀಲ್ಡಲ್ಲಿ ಇರತರೆ ಕಣಕ್ಕ, ಅದೇ ನಮ್ಮ ಕೆನಡಾದಲ್ಲಿ ನೋಡು. ಚನ್ನೇಗೌಡನ ಹುಡುಗ್ರು ಈರೋಗಳು. ಲೂಜ್ ಮಾದನೂ ಈರೊ. ಅವುನಿಗಾಗ್ಲೆ ಅವಾರ್ಡು ಬಂದದೆ ಅಂದ್ರೆ ಕನ್ನಡ ಸಿನುಮದ ಕತೆ ಎಲ್ಲಿಗೆ ಬಂದದೆ ನೋಡು."

"ತೂಗುದೀಪನ ಮಗನಿಗೆ ಹೋಲಿಸಿದ್ರೆ ಲೂಜಮಾದ ಪರವಾಗಿಲ್ಲ ಕಣೊ" ಎಂದ ಉಗ್ರಿ.

"ಅದೇನೊ ನಿಜ. ದರ್ಶನ ಸಿನುಮಕ್ಕೆ ಬಂದಾಗ ಲೂಜ್‌ಮಾದನಷ್ಟೇ ಇದ್ದ. ಪಾಪ ಬಡಸ್ತನವೇನೋ ವಟ್ಟೆಗಿರಲಿಲ್ಲ, ತ್ಯಳ್ಳಗಿದ್ದ. ಅದೇ ಈಗ ಯಂಗಾಗ್ಯವುನೆ ನೋಡು. ಒಂದೊಂದು ತೊಡೆ ನೇಗಲ ತುಂಡಗಾತ್ರ ಅವೆ. ಈರೊಗಳಾಗಿದ್ದಕಂಡು ಒಂದಿಷ್ಟು ಪರ್ಸನಾಲಿಟಿ ಮೇಂಟೇನ್ ಮಾಡಿಕಳಕ್ಯಾಗದಿಲವೆ. ಅದೇ ನಾನ್ನೊಡು, ಕಳದ ಇಪ್ಪತ್ತು ವರುಸದಿಂದ ಕರಟ್ಟಾಗಿ ಐವತ್ತು ಮೂರು ಕೆಜಿ ಇದ್ದಿನಿ. ಏರಲೂ ಇಲ್ಲ, ಇಳೀಲೂ ಇಲ್ಲ, ಹಿಂಗಿರಕೇನು ಈ ಸಿನುಮ ಆಕ್ಟ್ರುಗೆ" ಎಂದ ವಾಟಿಸ್ಸೆ.

"ನೀನು ನಮ್ಮೂರ ಈರೊ ಬುಡು" ಎಂದು ಜುಮ್ಮಿ ನಕ್ಕಳು.

"ಇವತ್ತಿನ ದಿವಸದಲ್ಲಿ ಈರೊ ಆಗದೇನು ಕಷ್ಟಯಿಲ್ಲ ಕಣಕ್ಕ. ನನ್ನ ಮನೇಲಿ ದುಡ್ಡಿದ್ರೆ ನಾನೇ ಯೀರೊ. ಇವತ್ತು ಕನ್ನಡ ಸಿನುಮದಲ್ಲಿ ಹೀರೊ ಅನ್ನಿಸಿಕೊಂಡಿರೊ ಅರ್ಧ ಜನ ಮನೆ ದುಡ್ಡ ತಂದು ಹೀರೋ ಆದೋರೆಯ. ಅದ್ಕೆ



ನೋಡಾಗ್ಲೆ ಮೈಸೂರಲ್ಲಿ ಏಳು ಸಿನುಮ ಟಾಕೀಸಿಗೆ ಬೀಗ ಹಾಕಿದರಂತೆ ಇದಕೇನೇಳ್ತೀ."

"ಇನ್ನೇನೇಳದೊ? ಮೈಸೂರಿಗಾದದ್ದು ಇಡೀ ಕರ್ನಾಟಕಕ್ಕೆ ಆದ್ರೆ ಸಿನುಮಾರಂಗ ಹೋಗಿ ರಂಗಭೂಮಿ ಆಯ್ತದೆ. ನಾಟಕ ಸುರುಮಾಡಕ್ಕೆ ವಳ್ಳೆ ಟೀಮಿದ."

"ಮೈಸೂರಲ್ಯಾಕೆ ಬಾಗಲಾಕಿದುರ್ಲ್ಪ?" ಎಂದಳು ಜುಮ್ಮಿ ಕುತೂಹಲದಿಂದ.

"ಯಾಕೆ ಅಂದ್ರೆ ಗಲಾಟಿ ಕಾರಣಕ್ಕೆ ಕಣಕ್ಕ. ದರ್ಶನ, ಸುದೀಪ, ನಾರಾಯಣ, ಲೂಜ್ ಮಾದ, ಪ್ರಜ್ವಲ ಇಂತ ಮಹಾನ್ ಈರೊಗಳ ಸಿನುಮ ರಿಲೀಜಾದಾಗ ಜನಗಳು ಟಿಕೆಟ್ ತಗಳಕ್ಕೆ ನುಗ್ಗಿ ಗಾಜು ಕುರ್ಚಿ ಪರದೆನ್ಯಲ್ಲ ಪುಡಿ ಮಾಡಿದರಂತೆ. ಅಂತ ಲಾಸ ತಡಿಯಕ್ಯಾಗದೆ ಥಿಯೇಟರ್ ಮಾಲೀಕರು ಬಾಗಲಾಕಿ ಬೀಗ ಜಡದರಂತೆ" ಎಂದು ವಾಟಿಸ್ಸೆ ನಕ್ಕ.

"ಇವುನ ಮಾತ ಕೇಳೆ ನೀನು. ಅದಂಗಲ್ಲ, ಈಚಿಗೆ ಜನಗಳು ನಮ್ಮ ಕನ್ನಡ ಸಿನುಮ ನೋಡದ ಬುಡ್ತಾ ಅವುರೆ. ಯಾಕಂದ್ರೆ ಸಿನುಮ ಟಿಕೆಟ್, ಆಟೊ ಚಾರ್ಜು ಲ್ಯಕ್ಕ ಹಾಕಿದ್ರೆ ಮನೆಲೆ ಕುತಗಂಡು ಟಿವಿ ನೋಡನ ಅನುಸ್ತ ಅದೆ. ಜೊತೆಗೆ ಮರಿಯಾದಸ್ತುರು ಕುಟುಂಬದ ಸಮೇತ ಹೋಗಿ ಈಗಿನ ಈರೊ ಸಿನುಮ ನೋಡದು ತುಂಬಾ ಕಷ್ಟ."

"ನಿಜ ಕಣೊ ಉಗ್ರಿ. ಆಗ ಪುಟ್ಟಣ್ಣ ಸಿನುಮ ತಗಿತನೆ ಅಂದ್ರೆ ಇಡೀ ಕರ್ನಾಟಕ ನೋಡಕ್ಕೆ ರಡಿಯಾಗದು. ಅದೇ ತರ ದೊರೆ ಭಗವಾನ್, ಸಿದ್ಲಿಂಗಯ್ಯ ಇನ್ನ ಅಣ್ಣಾವ್ರುರಂತು ಬುಡು. ನನ್ನಂಥೋರ್‍ಯಲ್ಲ ವಾರಕ್ಕೆ ಮೊದಲೆ ದುಡ್ಡು ಕೂಡಾಯ್ಕಂಡು, ಒಂದು ದಿನ ಮದ್ಲೆ ಹೋಗಿ ಕ್ಯೂ ನಿಂತಗತಿದ್ದೊ. ಅದೇ ಇವತ್ತು ಯಂಗಾಗ್ಯದಪ್ಪ ಅಂದ್ರೆ ಅಂತ ರವಿಚಂದ್ರನ್ ಸಿನುಮದ ಮೊದಲ ದಿನದ ಕಲಕ್ಷನ್ ಯರಡು ಸಾವುರುಪಾಯಂತೆ. ಥಿಯೇಟ್ರು ಬೀಗಹಾಕದಿಲವೆ ಹೇಳು?"

"ಅಂತೂ ಸಿನುಮಕೂ ಕಡಿಗಾಲ ಬಂದುಬುಡ್ತು ಅನ್ನು" ಎಂದ ಕಾಳಮಾವ.

"ಅಂಗೇ ಕಾಣ್ತಾ ಅದೆ ದ್ವಡಪ್ಪ, ಆಗ ಇಡೀ ಕರ್ನಾಟಕದ ತುಂಬಾ ನಾಟಕದ ಕಂಪನಿಗಳಿದ್ದೊ. ಸಿನುಮಾ ಬಂದು ಅವ್ಯಲ್ಲ ಬಂದಾದೊ. ಈಗ ಮನಿಮನಿಗೆ ಟಿವಿ ಬಂದು ಸಿನುಮಾ ಟಾಕೀಸು ಬಂದಾಯ್ತಾ ಅವೆ."

"ಒಂದು ಬಂದ್ರೆ ಇನ್ನೊಂದು ಬಲಿಯಾಗ್ಲೇಬೇಕಲ್ಲೊ. ಈಗ ನಿನ್ನ ಉದಾರಣೆನೆ ತಗೊ. ಶರಾಪು ನಿಂತೋಯ್ತು, ರಾಜಾ ವಿಸ್ಕಿ ಬಂತು. ಅಂಗಲವೆ."

"ಎಗ್‌ಜಾಂಪಲ್ಲ ಸರಿಯಾಗಿ ಕೊಡೊ ಉಗ್ರಿ. ಶರಾಪಿನ ಪೋರ್ಸು ಇದ್ದೇ ಅದೆ. ಎಡೂರಪ್ಪ ಬಂಗಾರಿ ಕಡಿಯೋರ ಮಟ್ಟಹಾಕಬೇಕು ಅಂತ ಶರಾಪು ನಿಲ್ಲಿಸ್ಯವುನೆ ಅಷ್ಟೆ. ಅದ ಈಗ ಬುಟ್ರು ಇಡೀ ಕರ್ನಾಟಕಕ್ಕೆ ಒಂದುಕಳೆಬತ್ತದೆ. ಅದೊಂದು ಮರೆಯಾದ ಕಲೆ ಅಲ್ಲ, ಮರೆಲಿರೊ ಕಲೆ. ಅದ್ಕೂ ಇದ್ಕೂ ಹೋಲಸಬ್ಯಾಡ. ಯಾವತ್ತೂ ಹೋಲಕೆ ಸರಿಯಾಗಿರಬೇಕು."

"ಅದಿರ್ಲಿ, ಸ್ತ್ರೀಕಂಠನ ಮಗಳ ಮದಿವಿಗೆ ಬತ್ತಿಲ ಹೋಗನ."


"ಬರದಿಲ್ಲ ಕಣಕ್ಕ. ಆ ಪೂಲಿಸ್‌ಫೆಲೊ ಮದುವೆ ಇನ್‌ವಿಟೇಶನ್ನ ಇಂಗ್ಲಿಸಲಿ ಮಾಡಿಸ್ಯವುನೆ. ಇವುನೇನು ಇಂಗ್ಲೀಸ್‌ನೋರಿಗೆ ಹುಟ್ಟದ್ನೆ?"

"ಮತ್ತೆ ನೀನು ಇಂಗ್ಲಿಸ್ ಮಾತಾಡ್ತಿ?"

"ಮಾತು ಬ್ಯಾರೆ ಕಣಕ್ಕ. ಆದ್ರೆ ಕೃತಿಲಿ ಕನ್ನಡ ಇರಬೇಕು. ಸೊ ಐ ಡೋಂಟ್ ಕಂ!" ●

ಮತ್ತೆ ಮತ್ತೆ ಬರುವ ರೋಗ

ಚೆಗೇವೇರಾ, ಎಲಿಯಟ್, ಏಟ್ಸ್ ಮುಂತಾದವರ ಬಗ್ಗೆ ಓದುತ್ತಿದ್ದ ಪುಸ್ತಕಗಳನ್ನೆಲ್ಲ ಮುಚ್ಚಿಟ್ಟು ಆನ್ ಮ್ಯಾರೋ ಎಂಬುವಳ ಒಂದು ಪುಸ್ತಕ ಓದಿದೆ. ಇದು ಹತ್ತಿರದ ಕಪಾಟಿನಲ್ಲೇ ಇತ್ತು. ಹಲವು ಅಧ್ಯಾಯಗಳನ್ನು ಓದಿ ಮುಚ್ಚಿಟ್ಟಿದ್ದೆ. ಎಲಿಯಟ್, ಏಟ್ಸ್ ಇಂಥವರ ಬಗ್ಗೆ ಓದಿ ಬೇಸರ ಬಂದಿತ್ತು. ಮನುಷ್ಯರಾರೂ ದೊಡ್ಡವರ ಪುಸ್ತಕಗಳನ್ನೇ ಓದುವುದಿಲ್ಲ. ಪತ್ತೆದಾರಿ, ಪೋಲಿ ಪುಸ್ತಕ, ಸಾಹಸಗಳು, ಪ್ರೇಮಕತೆಗಳು, ಮಕ್ಕಳ ಕತೆಗಳು, ದೆವ್ವಗಳನ್ನು ಕುರಿತ ಜಾನಪದಗಳು... ಎಲ್ಲವನ್ನೂ ಓದಿದರೆ ಮಹಾನ್ ವ್ಯಕ್ತಿಗಳ ಬಗ್ಗೆ ಒಮ್ಮೊಮ್ಮೆ ಓದಲು ಸಾಧ್ಯವಾಗುವುದು. ಯಾಕೆಂದರೆ ಮನುಷ್ಯರ ಜೀವನವೆಲ್ಲ ಸಣ್ಣಪುಟ್ಟ ಸಂಗತಿಗಳಿಂದ ತುಂಬಿರುತ್ತದೆ. ಸಾರಿಗೆ ಹಾಕಿದ ನುಗ್ಗೇಕಾಯಿ ಸ್ವಲ್ಪ ಬಲಿತಿತ್ತು ಅನ್ನುವುದರಿಂದ ವಾಕ್ ಮಾಡುವಾಗ ಕೈಯಲ್ಲಿದ್ದ ನಾಯಿ ಚೈನ್ ಕಿತ್ತುಕೊಂಡು ಓಡಿ ಬೀದಿನಾಯಿಗಳ ಜೊತೆಗೆ ಆಟ ಆಡತೊಡಗಿತು ಎಂಬುದರವರೆಗೆ, ಅನೇಕ ವರ್ಷಗಳ ಮೇಲೆ ಸಿಕ್ಕ ಅತ್ಯಂತ ಕರುಣಾಜನಕ ವ್ಯಕ್ತಿ ಈಗ ನಿವೃತ್ತನಾಗಿರುವ ಗೂಂಡಾ ಎಂಬುದರವರೆಗೆ, ಇವತ್ತು ಟೂತ್‌ಪೇಸ್ಟ್ ಮುಗಿದಿದೆ, ನಲ್ಲಿಯಲ್ಲಿ ನೀರು ಬಂದಿಲ್ಲ ಎನ್ನುವವರೆಗೆ ನಮ್ಮ ಜೀವನ ಹಬ್ಬಿರುತ್ತದೆ. ಮುಖದ ಮೇಲಿನ ಗುಳ್ಳೆಯೊಂದು ಶೇವ್ ಮಾಡುವಾಗ ಕಿತ್ತು ಬಂದು ರಕ್ತಬಂತು. ಅಲ್ಲಿ ಕ್ಯಾನ್ಸರ್ ಆಗಿಬಿಟ್ಟರೆ! ಎಂಬುದೆಲ್ಲ ಯೋಚನೆ. ಇನ್ನೊಂದು ದಿನ ಯಾವುದೇ ಬರವಣಿಗೆ, ಸಾಹಸ, ಪ್ರೇಮ, ವಿರಹವಿಲ್ಲದೆ ಪೋಲಾಯಿತು ಎಂಬ ವ್ಯಥೆ. ಹೀಗಿದೆ ಮನುಷ್ಯನ ಬದುಕು. ಆನ್ ಮ್ಯಾರೋಳ ಪುಸ್ತಕ ಭಾರತದ ರಾಜರನ್ನು ಕುರಿತದ್ದು; ಈ ರಾಜರೆಲ್ಲ 'ರಾಜರಂತೆ' ಬೆಳೆದ ಗುಗ್ಗುಗಳು. ಒಬ್ಬನಿಗೆ ಇದ್ದಕ್ಕಿದ್ದಂತೆ ಪ್ಯಾರಿಸ್‌ನಲ್ಲಿ ಬಾದಾಮ್ ಹಲ್ವಾ ತಿನ್ನಬೇಕೆನ್ನಿಸುತ್ತದೆ. ಅದು ಪ್ಯಾರಿಸ್‌ನಲ್ಲಿ ಸಿಕ್ಕುವುದಿಲ್ಲ ಎಂಬುದನ್ನು ಆತ ಕೇಳಲಾರ. ಕೂಡಲೇ ಅದನ್ನು ಭಾರತದಿಂದ ತರಿಸಿಕೊಡಬೇಕು. ಆತನಿಗೆ ಹುಡುಗಿಯರನ್ನು ಕಂಡರೆ ಇಷ್ಟ. ಆದರೆ ಲೈಂಗಿಕತೆಯ ಬಗ್ಗೆ ಅಜ್ಞಾನಿ. ಈ ಎಲ್ಲ ಸಮಸ್ಯೆ ಕೂಡಲೇ ಬಗೆಹರಿಯಬೇಕು. ಸಮಸ್ಯೆ ಆದದ್ದು ಆತನಿಗೆ, ಆದರೆ ಬಗೆಹರಿಸಬೇಕಾದವರು ಸಹಾಯಕರು. ಆದರೆ ಒಂದು ಜೀವ ಹೇಗಿರುತ್ತೆ ಅಂದರೆ-ಸಮಸ್ಯೆ ಯಾರಿಗೆ ಇರುತ್ತೋ ಆತನೇ ಬಗೆಹರಿಸಿದರೆ ಅದು ಆತನ ಆತ್ಮಕ್ಕೆ ದೇಹಕ್ಕೆ, ಸಮಾಜಕ್ಕೆ ಒಳ್ಳೆಯದು. ನಮ್ಮ ವ್ಯಾಯಾಮ ಬೇರೆಯವರು ಮಾಡಲಾಗುವುದಿಲ್ಲ, ನಮ್ಮ ಅನ್ನ ಬೇರೆಯವರು ನುಂಗಿಯಲಾಗುವುದಿಲ್ಲ ಅದು ಮನುಷ್ಯನ ಬದುಕಿನ ಮೂಲಭೂತ ಪ್ರಶ್ನೆ. ಆ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲಾರದವನು ತೀರಾ ಕೊಳಕಾದ ಬಂಡವಾಳಶಾಹಿ ಆಗುತ್ತಾನೆ; ಎಲ್ಲರನ್ನು ಅವಲಂಬಿಸಿ ಬದುಕಿದ್ದೂ ಎಲ್ಲರನ್ನೂ ಆಳುತ್ತಿರುವುದಾಗಿ ತಿಳಿಯುತ್ತಾನೆ. ಬಗ್ಗಿ ವಸ್ತುಗಳನ್ನು ಎತ್ತಿಕೊಳ್ಳಲಾರದ ರಾಜ ಮಿಂಚಿನ ಚಲನೆ ಪಡೆದ ಬಡವನಿಗಿಂತ ಉತ್ತಮ ಎಂದು ಭ್ರಮಿಸುತ್ತಾನೆ. ಆರೋಗ್ಯವೇ ಭಾಗ್ಯ, **Health is wealth** ಎಂಬುದು ಹೀಗೆ ಹುಟ್ಟಿಕೊಂಡಿತು. ಅದು ಗಾದೆಯ ರೂಪ ತಾಳಿದೊಡನೆ ಕೃತಕ, ಅಸತ್ಯ ಅನ್ನಿಸತೊಡಗಿತು. ಆದರೆ ಆ ಕೃತಕ ಮಾತಿನಲ್ಲೇ ಸತ್ಯವಿದೆ. ಯಾಕೆಂದರೆ



ಆರೋಗ್ಯವೆನ್ನುವುದು ದೇಹದ, ಮನಸ್ಸಿನ, ಆತ್ಮದ ಸಂಪತ್ತು. ಅವೆಲ್ಲ ಇದ್ದವನಿಗೆ ಆರ್ಥಿಕ ಸಂಪತ್ತು ಬೇಕೆನ್ನಿಸಬಹುದು. ಆದರೆ ಅದು ಸಿಗದೇ ಇದ್ದಾಗಲೂ ಬದುಕು ವ್ಯರ್ಥ ಅನ್ನಿಸುವುದಿಲ್ಲ.

ರೋಗಗ್ರಸ್ತ ವ್ಯಕ್ತಿ ಮತ್ತು ಸಮಾಜದಲ್ಲಿ ಕ್ರೌರ್ಯ, ಅನ್ಯಾಯ ಇರುತ್ತದೆ ಎಂಬುದನ್ನು ಅರ್ಜೆಂಟೀನಾದ ಕ್ರಾಂತಿಕಾರಿ ಚೆಗೇವೇರಾ ಕಂಡುಕೊಂಡ. ಆತ ವೈದ್ಯನಾಗಿದ್ದ, ವೈದ್ಯ ವೃತ್ತಿಯಲ್ಲಿದ್ದಾಗಲೇ ತನ್ನ ಸುತ್ತಣ ಅನ್ಯಾಯ, ರೋಗ ನೋಡಿದ ಚೆಗೇವೇರಾ ಪರಿಪೂರ್ಣ ಮನುಷ್ಯನಾಗಿ ಹೋರಾಡಲು ನಿರ್ಧರಿಸಿ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊರಟ. ದಕ್ಷಿಣ ಅಮೆರಿಕದ ಅನೇಕ ಸಮಾಜಗಳು, ವ್ಯಕ್ತಿಗಳು ಜಾಡ್ಯದಿಂದ ತುಂಬಿದ್ದವು. ಅಲ್ಲೆಲ್ಲ ಕಮ್ಯುನಿಸ್ಟ್ ಸುಖೀರಾಜ್ಯಕ್ಕಾಗಿ ಕ್ರಾಂತಿಕಾರಿ ಗುಂಪು ಕಟ್ಟಿ ಆಂದೋಲನ ನಡೆಸಿದ. ಆತ ಹೇಳಿದ: 'ನಾನು ಹೇಳುತ್ತಿರುವುದು ಒಬ್ಬ ಮನುಷ್ಯ ಎಷ್ಟು ಪೌಂಡ್ ಮಾಂಸವನ್ನು ಕೊಂಡು ತಿನ್ನಬಲ್ಲ ಎಂಬುದನ್ನು ಅವಲಂಬಿಸಿಲ್ಲ, ವರ್ಷದಲ್ಲಿ ಎಷ್ಟು ಸಲ ಸಮುದ್ರ ತೀರಕ್ಕೆ ವಿಹಾರ ಹೋಗಬಲ್ಲೆ ಎಂಬುದು ಮುಖ್ಯವಲ್ಲ; ನಿನ್ನ ವರಮಾನದಿಂದ ಎಷ್ಟೊಂದು ಅನರ್ಘ್ಯ ಒಡವೆಗಳನ್ನು ದೇಶ-ವಿದೇಶಗಳಲ್ಲಿ ಕೊಂಡುಕೊಳ್ಳಬಲ್ಲೆ ಎಂಬುದು ಮುಖ್ಯವಲ್ಲ; ನಾನು ಯಾವುದಕ್ಕೆ ಪ್ರಯತ್ನಿಸುತ್ತಿದ್ದೇನೆಂದರೆ ಹೊಸ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ರೂಪಿಸಿಕೊಳ್ಳುವಂತಾಗಬೇಕು; ಆತನ ಅಂತರ್ಯದ ಸಂಪತ್ತು ಅವನನ್ನು ಎಷ್ಟು ನೆಮ್ಮದಿಯಾಗಿ, ಹೊಣೆವಂತನನ್ನಾಗಿ ಮಾಡುತ್ತದೆ ಎಂಬುದು ಮುಖ್ಯ...'

ಸುಖೀರಾಜ್ಯದ ಕನಸು ಅರ್ಥಪೂರ್ಣವಾಗಿತ್ತು, ಚೆಗೇವೇರಾ ಮೈಮೇಲೆ ಬಂದವನಂತೆ ಹೋರಾಡಿದ. ಕ್ಯೂಬಾದಲ್ಲಿ ಕ್ಯಾಸ್ಟ್ರೋ ಜೊತೆಗೆ ಸೇರಿಕೊಂಡು ಕದನಕ್ಕಿಳಿದ. ಕ್ಯೂಬಾ ಅಮೆರಿಕದ ಹತ್ತಿರದಲ್ಲಿ ರೋಗದಿಂದ ನರಳುತ್ತಿದ್ದ ದೇಶ. ಅಲ್ಲಿಯ ಅನ್ಯಾಯ, ಶೋಷಣೆ, ಕ್ರೌರ್ಯ ಹೋಲಿಕೆಗೆ ಸಿಕ್ಕದಂತಿದ್ದವು. ಅಲ್ಲಿಗೆ ಕ್ರಾಂತಿಯನ್ನು ತಂದ ಚೆಗೇವೇರಾ ಕ್ಯೂಬಾ ಬ್ಯಾಂಕಿನ ಅಧ್ಯಕ್ಷನಾದ. ಆಡಳಿತದ ರುಚಿ ನೋಡಿದ. ಪರಿಪೂರ್ಣತೆಯ ಕಡೆಗೆ ನಡೆಯುತ್ತಿದ್ದ ಆತ ಪರಿಪೂರ್ಣ ಪ್ರೇಮ ಬೇಕೆಂದು ಚಡಪಡಿಸಿದ.

ಪೂರ್ಣ ವ್ಯಕ್ತಿಯಾಗಲು ತೀವ್ರ ಪ್ರೇಮ ಬೇಕು. ಇವೆರಡೂ ಬೇಕೆಂದರೆ ಹೋರಾಟ ಅನಿವಾರ್ಯ. ಕೆಲವೊಮ್ಮೆ ಹೋರಾಟವೇ ಬದುಕಾಗಿ ವಿಫಲತೆ ಕಾಡತೊಡಗುತ್ತದೆ..

ಇವತ್ತು ಕ್ಯೂಬಾ ದೇಶ ತಬ್ಬಲಿಯಾಗಿ ನಿಂತಿದೆ. ಚೆಗೇವೇರಾ ಎಂದೋ ತೀರಿಕೊಂಡು ಚರಿತ್ರೆಯ ಪುಟವಾಗಿದ್ದಾನೆ. ಮುಪ್ಪಿನ ಹೊಸ್ತಿಲಲ್ಲಿರುವ ಕ್ಯಾಸ್ಟ್ರೋ ದಿಕ್ಕೆಟ್ಟ ನಾಯಕನಂತಿದ್ದಾನೆ. ಕ್ಯೂಬಾಕ್ಕೆ ಇನ್ನಾವುದೋ ವ್ಯಾಧಿ ಬಂದಂತಿದೆ.

ಮತ್ತೆ ಮತ್ತೆ ನಡೆದಿದೆ ಪೂರ್ಣತೆಯ ಪ್ರಯತ್ನ.

ಮೇ 31, 1995



ಶುಭ ಅಶುಭ ಅನ್ನೋದು ಜಾತಿ ಮೇಲೆ ನಿಂತದೆ

ಪಾಪ ಸೊಗಡು ಶಿವಣ್ಣೋರು ವಿಲಿವಿಲಿ ಅಂತ ಒದ್ದಾಡ್ತ ಬಿದ್ದವ್ನಂತೆ. ಹೆಂಗೆ ಅಂದ್ರೆ ನೀರಿನಿಂದ ನೆಲಕ್ಕೆ ಬಿದ್ದ ಮೀನು ಒದ್ದಾಡ್ತದಲ್ಲ ಹಂಗೆ. ಅವರ ದುರಾದೃಷ್ಟಕ್ಕೆ ಏನು ಹೇಳಾನ. ತುಮಕೂರಿನಿಂದ ಸತತವಾಗಿ ನಾಲ್ಕನೆ ಸಾರಿಗೆ ಶಾಸಕರಾದರೂ, ವೀರಶೈವ ಯಡ್ಯೂರಪ್ಪನವರು ಚಕ್ರಾಧಿಪತ್ಯ ಸ್ಥಾಪಿಸಿದ್ದರೂ, ಮಂತ್ರಿಗಿರಿ ಅನ್ನೋದು ಕನಸಿನ ಮಾತಾಗೇ ಉಳೀತಂತೆ. ಜಾತಿಯಿಂದ ಲಿಂಗಾಯಿತರಾದರೂ ಯಾಕೋ ಏನೋ ಯಡ್ಯೂರಪ್ನೋರು ಅವರನ್ನ ಜಾತಸ್ತ ಅಂತ ಗುರುತಿಸಿ ಸಲ್ಲಬೇಕಾದ ಮರ್ಯಾದೆ ಸಲ್ಲಿಸಲೇ ಇಲ್ಲವಂತೆ. ಮಂತ್ರಿ ಆಗದಿದ್ದರೆ ಕತ್ತೆಬಾಲ, ಕುದುರೆ ಜುಟ್ಟು; ಲಿಂಗಾಯಿತರ ಸಾಮ್ರಾಜ್ಯದಲ್ಲಿ ಪಂಪ ಹೇಳಿದಂತೆ 'ಕೋಗಿಲೆಯಾಗಿ ಮೇಣ್ ಮರಿ ದುಂಬಿಯಾಗಿ' ಹಾರಾಡಾನ ಅಂತಾವ ತುಮಕೂರು ಅಂಚಿನಲ್ಲಿ ಒಂದೂವರೆ ಕೋಟಿ ರೂಪಾಯಿ ನೀರಿನಂಗೆ ಸುರ್ದು ಜನರ ಕಣ್ಣು ಕುಕ್ಕುವಂಗೆ ಭರ್ಜರಿ ಬಂಗಲೆ ಕಟ್ಟಿಸಿಕೊಂಡರಂತೆ. ವಿಲಾಸಿಜೀವನದ ಕನಸು ಕಾಣುತ್ತಿದ್ದರಂತೆ.



ಈ ನಡುವೆ ಒಂದು ಮಾತು. ಹಿಂಗೆ ಊರಗಲ ಮನೆ ಕಟ್ಟಿಸಿಕೊಂಡೋರು ಅಂದ್ರೆ ಜನಕ್ಕೆ ವೊಸೊಸಿ ಅಂಗೇಯ. ರೈತ ಸಂಘದ ಪುಟ್ಟಣ್ಣಯ್ಯ ಅವರ ಬಾಯಿಗೆ ಎಲಡಿಕೆ ಹಾಕದಂಗೇಯ. ಜಗ್ದು ಜಗ್ದು ಬಿಸಾಕ್ತಾರೆ. 'ಒಬ್ಬ ಮನ್ಸಂಗ್ಯಾಕೆ ಆಪಾಟಿ ಜಾಗ ಅಂತೀನಿ. ಎಷ್ಟು ಆಗಲ ಮನೆ ಕಟ್ಟಿದ್ರೂ ಮನಗೋದು ಇಷ್ಟರಲ್ಲೇ, ಅಲ್ವೇನಪ್ಪಾ' ಅಂತ ಬಲಗೈಲಿ ಜಾಗದಗಲಾವ ಸಾಂಕೇತಿಕವಾಗಿ ತೋರಿಸುತ್ತಾ 'ಮನಗ್ಗೋದ್ರೇನು ಜಾಗ ಅದೆ ಅಂತಾವ ಮನೇಲೆಲ್ಲ ಒದ್ದಾಡ್ತಾರಾ' ಅಂತೆಲ್ಲ ಗೇಲಿ ಮಾಡಿ ಬಿಸಾಕ್ತಾರೆ. ಅದು ನಾನೂ ಒಂದ್ಸಲ ಕೇಳಿದ್ದೆ. 'ಸರಿಯಾಗಿ ಬೆಂಡೆತ್ತ ಅವ್ರಲ್ಲ, ಪರ್ವಾಗಿಲ್ವೆ' ಅಂದ್ಕಂಡಿದ್ದೆ. ಆಮೇಲೆ ಗೊತ್ತಾದದ್ದು ಏನು ಅಂದ್ರೆ ಮೈಸೂರಲಿ ಪುಟ್ಟಣ್ಣಯ್ಯನೋರ್ದೂ ಅಂತದೆ ಮನೆ ಇದ್ದತ್ತಂತೆ!

ಇರಲಿ. ಸೊಗಡು ಶಿವಣ್ಣನವರ ವಿಷಯಕ್ಕೆ ಬರಾನ. ಅವ್ರು ಬಂಗ್ಲೆ ಕಟ್ಟಿಸಿದ್ರಲ್ಲಾ... ಬಾಗಿಲು, ಕಿಟಕಿ, ಕಕ್ಕಸುಮನೆ, ಊಟದ ಮನೆ ಎಲ್ಲಾನೂ ವಾಸ್ತು ಶಾಸ್ತ್ರದ ಪ್ರಕಾರವೇ ಕಟ್ಟಿಸಿದ್ರಂತೆ. ಹಿಂಗೆ ಕಟ್ಟುನಿಟ್ಟಾಗಿ ವಾಸ್ತು ಅನುಸರಿಸಿ ಮನೆ ಕಟ್ಟಿಸಿದ್ರೂ ಅದ್ಯಾವ ಸಂದೀಲಿ ಅಡಗಿತ್ತೋ ಕಾಣೆ. ಹಾಳಾದ ಆ ದೆವ್ವ ಯಾವುದೋ ಮಾಯದಲ್ಲಿ ಮನೆ ಒಳಕ್ಕೆ ಸೇರ್ಕಂಬುಟ್ಟದಂತೆ. ಹಿಂಗಿಂಗೆ ಸೇರ್ಕಂಡಿವ್ನಿ ಅನ್ನೊ ಸುಳಿವ್ನೂ ಕೊಡ್ತಂತೆ. ಅದೆಂಗೆ ಅಂದ್ರೆ ಮನೆ ಕಟ್ಟಿಸಿದ ಮೇಲೆ ಗೃಹಪ್ರವೇಶ ಅಂತ ಆಗಬೇಕಲ್ಲ, ದೊಡ್ಡ ಮನುಸ್ರನೆಲ್ಲ ಕಲ್ದಿದ್ದರಂತೆ. ಈ ಲಿಸ್ಟಲಿ ಯಡ್ಯೂರಪ್ನೋರು ಇಲ್ದಿದ್ರೆ ಆಯ್ತದಾ. ಅವರೂ ಇದ್ರಂತೆ. ಏನೋ ಕುಲಸ್ತ ಕರ್ದವ್ನೆ ಅಂತ ಗೃಹಪ್ರವೇಶಕ್ಕೆ ಬಂದಿದ್ರಂತಲ್ಲಾ, ಆವಗಾ ಏನಾಗದೆ ಒಂದು ಹಾಳುಬಸ್ತಿ ಕೋಳಿ ಅವರ ಕಾರಿನ ಚಕ್ರಕ್ಕೆ ಸಿಕ್ಕಿ ಸತ್ತೋಗದಂತೆ!

ಅರೆರೆ ಮನೆಗೆ ಕೋಳಿಬಲಿ ಕೊಟ್ಟಂಗೆ ಆಯ್ತಲ್ಲ, ಅದು ಒಳ್ಳೇದೆ ಅಲ್ವಾ ಅಂದ್ರೆ ಅದು ಹಂಗಲ್ಲವಂತೆ. ಶುಭ, ಅಶುಭ ಅನ್ನೋದು ಜಾತಿ ಮೇಲೆ ನಿಂತದಂತೆ. ಮಾಂಸ ಮಡ್ಡಿ ತಿನ್ನೋರ ಹೊಸಮನೆ ಪ್ರವೇಶದ ದಿನ ಹಿಂಗಾದ್ರೆ ಅದು ಒಳ್ಳೆ ಶಕುನ ಅಂತೆ. ತಿನ್ನೋದ್ರ ಮನೆ ಪ್ರವೇಶದದಿನ ಹಿಂಗಾದ್ರೆ ಅದು ಕೆಟ್ಟ ಶಕುನ ಅಂತೆ!


ಅಲ್ಲಿಂದ ಶುರುವಾಯ್ತು ನೋಡಿ ದೆವ್ವದ ಕಾಟ. ಶಿವಣ್ಣೋರ್ಗ ಬರೀ ಆಗಬಾರದ್ದೇ ಆಗ್ತ ಬಿದ್ದದಂತೆ. ಹೋದ ತಿಂಗಳು ಎಲ್ನೋಡಿದ್ರೂ ಅವರ ಮಗದ್ದೇ ಸುದ್ದಿ, ಅದು ನೆನಪಿನಲ್ಲಿಟ್ಟುಕೊಂಡು ಮೆಲುಕು ಹಾಕೋ ಅಂತದ್ದಲ್ಲ, ಸದ್ಯ ಮರ್ತ್ರೋದ್ರೆ ಸಾಕಪ್ಪ ಅನ್ನೊ ಸುದ್ದಿ ಅಂತೆ. ಅಂತದ್ದೇನಪ್ಪ ಅಂದ್ರೆ ಇಂಪೋರ್ಟೆಡ್ ಬೈಕ್‌ನಲ್ಲಿ ಜಾಲಿ ರೈಡ್ ಹೋಗ್ತಿದ್ದ ಹುಡುಗ ಆಟೋರಿಕ್ಷಾಗೆ ಗುದ್ದಿದ್ದನಂತೆ. ಯಾರೂ ಸತ್ತಿಲ್ಲ ಗಿತ್ತಿಲ್ಲ, ಏನೋ ಆರು ವಿದ್ಯಾರ್ಥಿಗಳಿಗೆ ಗಾಯ ಆಗಿತ್ತಂತೆ. ಬಲವಾದ ಗಾಯವೇ ಆದ್ರೂ ಯಾರೂ ಸತ್ತೇ ಇರ್ಲಿಲ್ಲ, ಆದ್ರೂ ಶಾಸಕರ ಮನೆ ಸುದ್ದಿ ಅಲ್ವಾ ಎಲ್ರ ಬಾಯಿಗೂ ಎಲಡಿಕೆ ಆಯ್ತು, ಪೇಪರು, ಟಿವಿಲೂ ಬಂದಿತ್ತು, ಅದ ನೋಡ್ದಾಗ ಎಲ್ಲೋ ಪೋಲಿ ಬಡ್ಡಿಹೈದ, ಧಿಮಾಕಲಿ ಹೋಗಿ ಗುದ್ದದೆ ಅಂದ್ಕೊಂಡಿದ್ದೆ, ಅದು ಹಂಗಲ್ವಂತೆ. ಅದ್ರಲ್ಲಿ ದೆವ್ವದ ಕೈವಾಡ ಇದ್ದದಂತೆ. ಆ ದೆವ್ವ ಅನ್ನೋದು ವಿನ್ಮಾಡದಂತೆ ಅಂದ್ರೆ, ಆ ಹುಡುಗನ ಮೆದುಳ್ಗೇ ಕೈಹಾಕುಬ್ಟು, ಬುದ್ದೀನೆಲ್ಲ ಕೆಡಿಸಿ ಬುಟ್ಟದಂತೆ. ಆ ಪಾಟಿ ಬ್ರೇಕ್ ಹಾಕೋದ್ರ ಬದ್ಲು ಆಕ್ಸಿಲರೇಟರ್ ಒತ್ತೊ ಹಂಗೆ ಮಾಡಿಬುಟ್ಟುದಂತೆ. ಅದ್ಯಾಕೆ ಅದು ಹಂಗ್ಮಾಡ್ತು ಅಂದ್ರೆ ಶಿವಣ್ಣೋರ ವಂಶಾನೆ ನಿರ್ವಂಶ ಮಾಡ್ಬೇಕು ಅಂತಲಂತೆ.

ಎಲ್ಲಾನ ಉಂಟಾ ಹಿಂಗಾಗೋದು ಅಂದ್ರೆ.... ಆಯ್ಯೋ ಸಿವನೆ ಜನಾದ ಜನೆಲ್ಲ ಹಂಗಂತ ಬಿದ್ದವೆ ಅಂದ್ಮೇಲೆ ಇದ್ನೆ ಸುಳ್ಳು ಅಂದ್ರೇನೇಳಾನ. ಪೊಲೀಸ್ನೋರು ಇದನ್ನ ನಂಬಿರ್ಬೇಕು. ಅದ್ಕೆಯೇ ಏನೋ ಜೈಲಲಿ ಇರಬೇಕಾದ ಹೈದ ಆರಾಮವಾಗಿ ಓಡಾಡ್ಕಂಡಿರೋದು. ಕೇಸು ಹಾಕೋ ಪೊಲೀಸ್ನೋರೆ ಒಪ್ಪವ್ರೇ ಅಂದ್ಮೇಲೆ ನಿಜ ಇರ್ಲೇಬೇಕು!

ಇನ್ನೂ ಒಂದು ಅದೆ. ದೆವ್ವ ಮಗನಿಗೆ ಹಿಂಗೆಲ್ಲ ಮಾಡ್ತಲ್ಲ, ಐದು ತಿಂಗಳ ಹಿಂದೆ ಅದೇನು ಮಾಡಿದ್ದತಂತೆ ಅಂದ್ರೆ... ಶಿವಣ್ಣೋರ ಮುದ್ದಿನ ಮೊಮ್ಮಗು ಇತ್ತಲ್ಲ ಅದೆ, ಬಂಗ್ಲೆ ಒಳಗೆ ಇತ್ತಲ್ಲ ಈಜುಕೊಳ ಅದ್ರಲಿ ಮುಳುಗಿಸಿ ಸಾಯಿಸಿಬುಟ್ಟದೆ. ಹಿಂಗೆ ಶಿವಣ್ಣೋರ ಒಂದೊಂದೆ ಕುಡಿಯ ಕಡೀತಾಬಿದ್ದದಂತೆ ಆ ಹಾಳುಮನೆ ದೆವ್ವ.

ಇದ್ನೂ ನಂಬಲ್ಲ ಅನ್ನೋರ್ಗೆ ಏನು ಹೇಳಾನ. ವಂಶ ನಿರ್ವಂಶ ಮಾಡಬೇಕು ಅಂತ ಇಲ್ಲದಿದ್ದರೆ ಹಿಂಗೆಲ್ಲ ಯಾಕೆ ನಡುಸ್ತಿತ್ತು? ವಂಶೋದ್ಧಾರರನ್ನಷ್ಟೇ ಅಲ್ಲ ಮೂಲ ಬೀಜನೇ ಕಿತ್ತೊಗಿಬೇಕು ಅಂತಾಲ್ದೂ ಇದ್ದದಂತೆ. ದೂರ ಹೋಗಬೇಕಿಲ್ಲ, ಕಳೆದ ವಾರ ಸೊಗಡು ಶಿವಣ್ಣೋರು ಬೆಂಗಳೂರಿನಿಂದ ಬರ್ತಿದ್ರಲ್ಲಾ ಆವಾಗ ರಸ್ತೇಲಿ ಹೋಗ್ತಿದ್ದ ಲಾರಿ ಇವರ ಕಾರಿಗೆ ಬಂದು ಗುದ್ದಂಗೆ ಮಾಡದಂತೆ. ಇದು ಮೂರನೆ ಸಲವಂತೆ ಅವರಿಗೆ ಹಿಂಗೆ ಮಾಡಿರೋದು. ಆದ್ರೂ ಗಟ್ಟಿ ಜೀವ. ಹೆಂಗೋ ಬದುಕ್ಕಂಡವ್ರೆ.

ಇದೆಲ್ಲದರಿಂದ ಬೇಸತ್ತ ಶಿವಣ್ಣೋರು ಈ ಮನೇಲಿ ಇರೋಗಂಟ ದೆವ್ವದ ಕಾಟ ತಪ್ಪುವಲ್ತು, ಹೋದಷ್ಟಕೆ ಹೋಗ್ಲಿ ಸುಟ್ಟಾಕುಬ್ಡಾನ ಅಂದ್ರೆ 'ದೆವ್ವದ ಮನೆ' ಅಂತ ಗಿರಾಕಿಗಳೇ ಬರ್ತಿಲ್ಲವಂತೆ! ಹಿಂಗಾಯ್ತಲ್ಲೊ ಸಿವನೆ ಅಂತಾವ ಮಲೆಯಾಳಿ ಮಾಂತ್ರಿಕರನ್ನು ಕರೆಸಿ ಕಟ್ಟು ಮಾಡಿಸಿದ್ರಂತೆ. ಹಿಂಗೆ ಮಾಡ್ಸಿದ ಮೇಲೂ ಅವರ ಕಾರಿಗೆ ಲಾರಿ ಬಂದು ಗುದ್ದದೆ ಅಂದ್ರೆ ಅದು ಪವರ್‌ಫುಲ್ ದೆವ್ವಾನೇ ಇರಬೇಕು!



ಎಚ್.ಎಲ್. ಕೇಶವಮೂರ್ತಿ

ಅಣಕ

ಇತ್ತದರಿ ಅತ್ತ ಪುಲಿ

ಹೊಸದಾಗಿ ಅಧಿಕಾರದ ಗದ್ದುಗೆ ಏರಿದಾಗ ಗೋಣಿ ಎತ್ತಿಎತ್ತಿ ಒಗೀಬೇಕು ಅನ್ನಿಸುವುದು ಸಹಜ. ಮಮತಾ ದೀದಿಗೂ ಹಾಗೆ ಅನ್ನಿಸಿರಬೇಕು. ಎಂಟು ಖಾತೆಗಳ ಜೊತೆಗೆ ಆರೋಗ್ಯ ಖಾತೆಯೂ ಅವರ ಬಳಿ ಇದ್ದಿತು. ಸರ್ಕಾರಿ ಆಸ್ಪತ್ರೆಗಳು ಅಂದರೆ ಭೂಲೋಕದ ನರಕಗಳು ಅನ್ನುವ ಅಭಿಪ್ರಾಯ ಜನರದ್ದು; ಇದನ್ನು ಅವರ ಮನಸ್ಸಿನಿಂದ ಕಿತ್ತೊಗೆಯಬೇಕು, ಅಂತಹ ಸುಧಾರಣೆಗಳನ್ನು ತರಬೇಕು ಅನ್ನಿಸಿರಬೇಕು ದೀದಿಗೆ. ಸಮಯ ನಿಗದಿ ಮಾಡಿ ಹೋದ್ರೆ ಆ ಹೊತ್ತಿನಲ್ಲಿ ಎಲ್ಲಾ ಸರಿಯಾಗೇ ಇದೆ ಅಂತ ತೋರಿಸೋಕೆ ತೇಪೆ ಹಾಕಿರ್ತಾರೆ; ಅನಿರೀಕ್ಷಿತ ಭೇಟಿ ನೀಡಿದ್ರೆ ಅವರ ಬಂಡವಾಳ ಬಯಲಾಗುತ್ತೆ ಎಂದೆಲ್ಲ ಯೋಚಿಸಿದರು. ಅಧಿಕಾರ ವಹಿಸಿಕೊಂಡ ಮೊದಲನೆ ವಾರವೇ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದರು. ಕುಂದು ಕೊರತೆಗಳನ್ನು ಗಮನಿಸಿ ಸೂಕ್ತ ಪರಿಹಾರ ಸೂಚಿಸಿದರು.

ಈಯಮ್ಮ ಹೊಸದಾಗಿ ಮುಖ್ಯಮಂತ್ರಿ ಆಗಿರೋದು. ಜನಮೆಚ್ಚಲಿ ಅಂತ ಹೀಗೆಲ್ಲ ಮಾಡುತ್ತೆ. ಆಮೇಲೆ ತೆಪ್ಪನಾಗುತ್ತೆ ಅನ್ನುವುದನ್ನು ಆಸ್ಪತ್ರೆ ಸಿಬ್ಬಂದಿ 'ಅನುಭವ'ದಿಂದ ತಿಳಿದುಕೊಂಡಿತ್ತು, ಮತ್ತೆ ಭೇಟಿ ನೀಡೋದು ಯಾವ ಕಾಲಕ್ಕೋ ಎಂದು ಉಡಾಫೆ ಹೊಡೆಯುತ್ತಾ ಎಂದಿನ ತಮ್ಮ ಕಾರ್ಯವೈಖರಿಯನ್ನೇ ಮುಂದುವರೆಸಿತ್ತು, ಹೀಗೆ ಆದರೂ ಆಗಬಹುದು ಎಂದು ಯೋಚಿಸಿದ ದೀದಿ ಎರಡನೇ ವಾರವೂ ಅದೇ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿದರು!

ಅನಿರೀಕ್ಷಿತ ಭೇಟಿ ಆಗಿದ್ದರೂ ದೀದಿ ಬಂದಿರುವ ಸುದ್ದಿ ಅದು ಯಾವ ಮಾಯದಲ್ಲೋ ಎಲ್ಲೆಡೆ ಹರಡಿತು. ಅವರನ್ನು ನೋಡುವ ಕುತೂಹಲದಿಂದ ಜನರ ಗುಂಪು ಸೇರಿತು. ಸಾಮಾನ್ಯವಾಗಿ ರಾಜಕಾರಣಿ ಆದವರು ಜನ ಕಿಕ್ಕಿರಿದು ನೆರೆದು, ನೂಕುನುಗ್ಗಲು ಉಂಟಾಗಿ, ಪೊಲೀಸಿನವರು ನಿಯಂತ್ರಿಸೋಕ್ಕೆ ಅಸಾಧ್ಯ ಎಂಬ ಸಂದರ್ಭ ಬಂದರೆ ತಮ್ಮ ಜನಪ್ರಿಯತೆ ಕಂಡು ಒಳಗೊಳಗೇ ಖುಷಿಪಡುತ್ತಾರೆ. ಮಂದಹಾಸದಿಂದ ಬೀಗುತ್ತಾರೆ. ಅಂತಹ ಆನಂದಾನುಭವದೀದಿಗೂ ಆಗಿದ್ದಿರಬಹುದು. ಆದರೆ ಅದು ಹೇಳಿಕೇಳಿ ಆಸ್ಪತ್ರೆ, ಶಬ್ದಮಾಲಿನ್ಯ ಆಗಬಾರದು. ಕಾಯಿಲೆ ಕಸಾಲೆಯವರು ಅನಿರೀಕ್ಷಿತ ಭೇಟಿ ಸಂಕಟವನ್ನು ಅನಿವಾರ್ಯವಾಗಿ ಅನುಭವಿಸಬೇಕಾಯಿತು. ಆಸ್ಪತ್ರೆ ಮುಖ್ಯಸ್ಥನಿಗೆ ರೋಗಿಗಳ ತೊಂದರೆಯ ಅರಿವು ಆಯಿತು. 'ನೀವು ಹೀಗೆ ಪದೇಪದೇ ಭೇಟಿ ನೀಡುವುದರಿಂದ ಜನಜಂಗುಳಿ ಉಂಟಾಗಿ ರೋಗಗಳಿಗೆ ತೊಂದರೆಯಾಗುತ್ತದೆ' ಎಂದು ದೀದಿಗೆ ಅದೂ ಮುಖ್ಯಮಂತ್ರಿ ದೀದಿಗೆ ಹೇಳೇಬಿಟ್ಟರು!

ಈ ಮುಖ್ಯಸ್ಥನಿಗೆ ಎಲ್ಲೋ 'ಕಮ್ಯುನಿಸ್ಟ್ ಪಿಶಾಚಿ' ಹಿಡಿದಿರಬೇಕು; ಅದಕ್ಕೇ ಈ ರೀತಿ ಬಡಬಡಿಸುತ್ತಿದ್ದಾನೆ ಎನ್ನಿಸಿತು ದೀದಿಗೆ. ಮುಖ್ಯಮಂತ್ರಿಗೇ ಈ ಅಭಿಪ್ರಾಯ ಬಂದಮೇಲೆ ಹೇಳುವುದಕ್ಕೆ, ಕೇಳುವುದಕ್ಕೆ ಏನಿದೆ? ತತ್‌ಕ್ಷಣ ಅವನನ್ನು ಅಮಾನತ್ತಿನಲ್ಲಿಟ್ಟರು!

ಹೀಗೆ ಅಮಾನತ್ತಿನಲ್ಲಿಡುವುದರ ಹಿಂದೆ ಒಂದು ಒಳಗುಟ್ಟೂ ಇದೆಯಂತೆ. ಸಾಮಾನ್ಯವಾಗಿ ಯಾವ ಸರ್ಕಾರಿ ಆಸ್ಪತ್ರೆಯೂ ನಿಯಮದಂತೆ ಕಾರ್ಯನಿರ್ವಹಿಸುವುದಿಲ್ಲ, ಆರೋಗ್ಯ ಸಚಿವರು ಅನಿರೀಕ್ಷಿತ ಭೇಟಿ ಮಾಡುವುದೇ ಕೆಲವರನ್ನು ಅಮಾನತ್ತಿಲ್ಲಿಡುವುದಕ್ಕಂತೆ. ಹೀಗೆ ಮಾಡುವುದರಿಂದ ಪ್ರಚಾರ ಸಿಗುವುದರ ಜೊತೆಗೆ ಸಾಕಷ್ಟು ಕಮಾಯಿಯೂ ಲಭಿಸುವುದಂತೆ. ಯಾಕೆಂದರೆ ಅಮಾನತ್ತಿನಲ್ಲಿಟ್ಟರು ಅಂದತಕ್ಷಣ ಅವರನ್ನೇನು ಕೆಲಸದಿಂದಲೇ ತೆಗೆದು ಹಾಕುತ್ತಾರೆ ಎಂದು ಅಲ್ಲವಲ್ಲಾ. ಹೀಗೆ ಇರಿಸಿಕೊಂಡವರು ಅಮಾನತು ಆದೇಶ ಹಿಂಪಡೆಯಲು 'ಮಂತ್ರಿ ಕಾಣಿಕೆ' ಒಪ್ಪಿಸುತ್ತಾರಂತೆ!

ಆದರೆ ಇಲ್ಲಿ ಹಾಗೆ ಆಗಿರಲಿಲ್ಲ. ಕಮ್ಯುನಿಸ್ಟ್ ಭೂತಗಳನ್ನು ನಿಯಂತ್ರಿಸಲು ದೀದಿ ಈ ಕ್ರಮ ಕೈಗೊಂಡಿದ್ದರು.

ಮೂರನೆ ವಾರ ಬಂತು. ಮತ್ತೊಂದು ಸರ್ಕಾರಿ ಆಸ್ಪತ್ರೆಯಲ್ಲಿ ಹೊಸ ವಾರ್ಡ್‌ನ ಉದ್ಘಾಟನೆ ಆಗಬೇಕಿತ್ತು. ಮುಖ್ಯಮಂತ್ರಿಯೇ ಬರುತ್ತಾರೆಂದು ಸಿಬ್ಬಂದಿ ಖುಷಿಯಾಗಿದ್ದರು. ಅವರ ಮೆಚ್ಚುಗೆ ಗಳಿಸಲು ಕೈಮೀರಿ ಶ್ರಮಿಸಿದರು. ಹೊಸ ವಾರ್ಡಿಗೆ ರೋಗಿಗಳನ್ನು ಹಳೆ ವಾರ್ಡಿನಿಂದ ವರ್ಗಾಯಿಸಿದರು. ಆ ರೋಗಿಗಳಿಗೂ ದೀದಿಯೇ ಬರುತ್ತಾರೆ, ಬಂದು ನಮ್ಮ ಆರೋಗ್ಯ ವಿಚಾರಿಸುತ್ತಾರೆ ಎಂದು ಖುಷಿಯಾಗಿದ್ದರು. ಆ ದಿನವೂ ಬಂದಿತ್ತು, ಇದು ನಿರೀಕ್ಷಿತ ಭೇಟಿ ಆದುದರಿಂದ ದೀದಿಯನ್ನು ನೋಡುವ ಕುತೂಹಲದಿಂದ ನೂರಾರು ಜನರು ಆಸ್ಪತ್ರೆ ಆವರಣದಲ್ಲಿ ಜಮಾಯಿಸಿದ್ದರು. ದೀದಿ ಬಂದರು. ಜನಜಾತ್ರೆ ನೋಡಿದಾಗ 'ಕಮ್ಯುನಿಸ್ಟ್ ಪಿಶಾಚಿ'ಯ ಮಾತು ನೆನಪಿಗೆ ಬಂದು ಬೆದರಿದರು. ಪೀಕಲಾಟಕ್ಕೆ ಬಿದ್ದ ದೀದಿ ಕೆಳಕ್ಕೆ ಇಳಿಯಲೇ ಇಲ್ಲ, ಕಾರನ್ನು ಹಿಂತಿರುಗಿಸಲು ಹೇಳಿ 'ಅಧಿಕೃತ ಉದ್ಘಾಟನೆ ಇಲ್ಲದೆ ಕಾರ್ಯ ಆರಂಭ ಮಾಡಲಿ, ಎಂಬ ಸೂಚನೆ ನೀಡಿದರು! ಇದರಿಂದ ನಿರಾಶೆಗೊಂಡ ಸಿಬ್ಬಂದಿ, ರೋಗಿಗಳು ದೀದಿಗೆ ಹಿಡಿಹಿಡಿ ಶಾಪ ಹಾಕುತ್ತಿದ್ದಾರಂತೆ!

ನನ್ನ ಶಾಲೆಯ ನೆನಪುಗಳನ್ನು ಕೆರಳಿಸಿತು



ಪ್ರೀತ್ಯಾದರಗಳಿಂದ ಗೌರಿ ಲಂಕೇಶ್‌ರವರಿಗೆ ನಮಸ್ಕಾರಗಳು. 'The Home School' ಕುರಿತಾದ ಲೇಖನ ಅಥವಾ ತಮ್ಮ ಎಡಿಟೋರಿಯಲ್ ಓದಿದೆ ತುಂಬಾ ಖುಷಿಯಾಯ್ತು, ಏಕಂದ್ರೆ ನಾನೊಂದು ಶಾಲೆಯಲ್ಲಿ ಓದಿದ್ದೆ, ಆದರ ಅವಸ್ಥೆಯೂ ಇದೇ ರೀತಿಯಾಗಿದ್ದರಿಂದ, ನನ್ನಂತವರು ತುಂಬಾ ಜನ ಈ ರೀತಿಯ ಅನುಭವ ಅನುಭವಿಸಿರುತ್ತಾರೆ. ಅಂತವರಿಗೆಲ್ಲರಿಗೂ ತಮ್ಮ ಹಳೆಯ ನೆನಪು ಮಾಡಿಕೊಂಡಿರುತ್ತಾದ್ದರಿಂದ. ಶ್ರೀ ಲಂಕೇಶ್ ಒಂದು ಸಾರಿ ಅವರು ಭಾನುವಾರ ಹೇಗೆ ಕಳೆಯುತ್ತೇನೆಂದು ಬರೆಯುವಾಗ ತಮ್ಮ ದಿನನಿತ್ಯ ಹಾಕುವ ಬಟ್ಟೆಗಳನ್ನೆಲ್ಲ ಗುಡ್ಡೆ ಹಾಕಿಕೊಂಡು, ಚಡ್ಡಿಗಳ ಹರಿದ ಲಾಡಿ ರಿಪೇರಿ, ಒಡೆದು ಹೋದ ಪ್ಯಾಂಟು, ಅಂಗಿಯ ಗುಂಡಿ ಹಾಕಿಕೊಳ್ಳುವುದು ಚೂರು ಚೂರು ಬಾಟಂ ಹೋದ ಪ್ಯಾಂಟನ್ನು ದಾರದಿಂದ ಹೊಲಿದುಕೊಳ್ಳುವುದು, ಅವನ್ನೆಲ್ಲ ಸರಿಪಡಿಸಿ (ಹರಿದವನ್ನು ತಳಪೆ ಹಾಕಿ) ಜೋಪಾನವಾಗಿ ಬೀರುವಿನಲ್ಲಿ ಕೂಡಿಟ್ಟುಕೊಳ್ಳುವ ಕೆಲ್ಸ ಮಾಡಿಕೊಳ್ಳುತ್ತೇನೆಂದು ಬರಕೊಂಡಿದ್ದರು. ಲಂಕೇಶ್ ಓದುವ ನನ್ನಂತವರಿಗೆ ಅದೊಂದು ತುಂಬಾ ಉಪಯುಕ್ತ ಪಾಠವೆನಿಸಿತ್ತು, ಆದೊಂದು ಉತ್ತಮ ಸಂಪಾದಕೀಯವೂ ಎನ್ನಿಸಿಕೊಂಡಿತ್ತು, ನಿಮ್ಮ 'ಕುಸಿಯುಲಿರುವ ಶಾಲೆಯೊಂದಿಗಿನ ನನ್ನ ನೆನಪುಗಳು' ಸಂಪಾದಕೀಯ ಶ್ರೀ ಲಂಕೇಶರ 'ಹಳೆ ಬಟ್ಟೆ ರಿಪೇರಿ' ಸಂಪಾದಕೀಯ ನೆನಪಿಸಿತು. ತುಂಬಾ ಖುಷಿ ಕೊಟ್ಟಿತು.

-ಕದಿದಾಳು ಶಾಮಣ್ಣ, ಭಗವತಿಕೆರೆ

'ಮಂಗನ ಬ್ಯಾಟೆ' ಬರಹವನ್ನು ಮೊದಲಿನಿಂದ ಹದಿನಾಲ್ಕನೇ ಸರಣಿಯವರೆಗೆ ಓದಿ, ಮೆಚ್ಚಿ ಈ ಮಾತುಗಳನ್ನು ಬರೆಯುತ್ತಿದ್ದೇನೆ.

ಈ ಲೇಖನ ಅನೇಕ ಕಾರಣಗಳಿಂದ ಮೆಚ್ಚುಗೆಗೆ ಅರ್ಹವಾಗಿದೆ. ಇದು ಕೇವಲ ವರದಿ ಬರಹದಂತಿರದೆ, ಕತೆಯ ಗುಣವನ್ನು ಹೊಂದಿ ಕುತೂಹಲಕಾರಿಯಾಗಿ ಓದಿಸಿಕೊಂಡು ಹೋಗುತ್ತದೆ. ಅದು ಕಂಬಳಿ ವಿವರ, ಉರ್‌ಚಟ್ಟೆ, ನಾಗರಹಾವು, ನಂಬಿಕೆ, ಪುರಾಣ, ಬೇಟೆ, ಬದುಕು ಇತ್ಯಾದಿ ಅನೇಕ ಸಾಂಸ್ಕೃತಿಕ ವಿವರಗಳನ್ನು ಒಳಗೊಂಡು ಅದಕ್ಕೊಂದು ಸಾಮಾಜಿಕ ಮಹತ್ವವನ್ನು ತಂದುಕೊಟ್ಟಿದೆ.


-ವಸಾಹತುಶಾಹಿಯ ಅನಾಹುತಗಳು, ಅದು ದೇಸಿ ಲೋಕ ವಿಚಾರಗಳನ್ನು ನಾಶಗೊಳಿಸಿದ್ದು, ಅದು ಇಲ್ಲಿ ಬಳಕೆಗೆ ತಂದ ಕಾನೂನು ವಿದ್ಯೆ ಇವುಗಳ ಪರಿಮಿತಿಗಳೂ ಮುಂತಾದ, ವೈಚಾರಿಕ ವಿಚಾರಗಳು ನೆಲದಿಂದ ಬಂದು ಇದೊಂದು ವಸಾಹತೋತ್ತರದ ಉತ್ತಮ ಬರವಣಿಗೆ ಎನಿಸಿದೆ. ಇದರೊಂದಿಗೆ ಜಾತಿ ಸಮಸ್ಯೆ, ಬ್ರಾಹ್ಮಣಶಾಹಿಯ ಅಮಾನವೀಯತೆ ಮುಂತಾದವುಗಳನ್ನು ವ್ಯಂಗ್ಯವಾಗಿ ನಿರೂಪಿಸಿ ಬರಹ ಸೂಕ್ಷ್ಮತೆಯನ್ನು ಪಡೆದುಕೊಂಡಿದೆ.

ಲೇಖನ ಸಿದ್ಧ ಪ್ಯಾಟೆ ಮುಂತಾದವರ ಸಮುದಾಯ ಚರಿತ್ರೆಗಳು ಸಿಗುವುದರೊಂದಿಗೆ ಅವರ ವಿಶ್ವಾತ್ಮಕ ಗುಣವನ್ನು ಲೇಖಕರು ಗ್ರಹಿಸಿದ್ದಾರೆ. ಅವರ ಬದುಕು ಆಧುನಿಕತೆ, ಜಾಗತೀಕರಣಗಳ ಹೊಡೆತಗಳಿಂದ ಜರ್ಜರಿತವಾಗಿರುವುದು ಇಲ್ಲಿ ಚಿತ್ರಿತವಾಗಿದೆ. ಅವರ ಕಾಡಿನ ನಂಟು, ಅದರ ಅವಶ್ಯಕತೆ ಮುಂತಾದ ವಿವರಗಳ ಮೂಲಕ ಇದೊಂದು ಪರಿಸರ ಕತೆಯಾಗಿಯೂ ನಿರೂಪಿತವಾಗಿದೆ.

ಒಟ್ಟಿನಲ್ಲಿ ಈ ಬರಹ ಕಥನಗುಣ, ವೈಚಾರಿಕತೆ, ಸಾಂಸ್ಕೃತಿಕ ಅಂಶಗಳಿಂದ ಕೂಡಿದ ರಾಜಕೀಯ ಸಂಕಥನ ಎಂದು ಹೇಳಬಹುದು. ಇದನ್ನು ಬರೆದ ಲೇಖಕ ಕಲ್ಕುಳಿ ವಿಠಲ ಹೆಗ್ಡೆ ಅವರಿಗೆ ಮತ್ತು ಪ್ರಕಟಿಸಿದ ಪತ್ರಿಕಾ ತಂಡಕ್ಕೆ ಗೌರವವನ್ನು ಪ್ರೀತಿಯಿಂದ ಸಲ್ಲಿಸುತ್ತಾ ಇಂತಹ ಸಮೃದ್ಧ ಲೇಖನಗಳು ಇನ್ನಷ್ಟು ಬರಲಿ ಎಂದು ಆಶಿಸುತ್ತೇನೆ.

- ಪ್ರೊ. ಎಚ್.ಟಿ. ಕೃಷ್ಣಮೂರ್ತಿ, ಶಿವಮೊಗ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ನಿರ್ದೇಶನಕ್ಕಿಳಿದ ಹಂಸ!

ಹಂಸಲೇಖ ಅವರ ಬಹುದಿನದ ಕನಸು ನನಸಾಗುವ ಕಾಲ ಕೂಡಿಬಂದಿದೆ. ಅದೇನೆಂದರೆ ಅವರ ನಿರ್ದೇಶನದ ಚಿತ್ರ ಒಂದು ಸದ್ಯದಲ್ಲೇ ಸೆಟ್ಟೇರಲಿದೆ. ಈ ಚಿತ್ರ ಹೆಸರು 'ಬಾಗಿನ'.

ಇದನ್ನು ಸ್ವತಃ ಹಂಸಲೇಖ ಅವರೇ ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದ್ದಾರೆ. ಆದರೆ ಗಾಂಧಿನಗರ ಜನ ಈ ಘೋಷಣೆಗೆ ತಣ್ಣಗಿನ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಒಂದು ಕಾಲದಲ್ಲಿ ಹಂಸಲೇಖ ಏನೇ ಮಾಡಿದರೂ ಇಡೀ ಗಾಂಧಿನಗರ ಕುತೂಹಲದಿಂದ ನೋಡುತ್ತಾ ಬೆಚ್ಚಿ ಬೀಳುತ್ತಿತ್ತು, ಆದರೆ ಇತ್ತೀಚೆಗೆ ಹಂಸಲೇಖ 'ಪ್ರೇಮಲೋಕ' ದಿನಗಳ ತಾರಾ ವರ್ಚಸ್ಸು ಮತ್ತು ಇಮೇಜನ್ನು ಹೊಂದಿಲ್ಲ ಎಂಬುದು ನಿಜ.

ಹಾಗೆ ನೋಡಿದರೆ ರಂಗಭೂಮಿಯಿಂದ ಸಿನಿಮಾ ರಂಗಕ್ಕೆ ಕಾಲಿಟ್ಟಾಗ ಹಂಸಲೇಖ ಅವರಿಗಿದ್ದ ಆಸೆ ತಾವೊಂದು ಚಿತ್ರವನ್ನು ನಿರ್ದೇಶಿಸಬೇಕು ಎಂಬುದು. ಆದರೆ ಅವರು ಸುಮಾರು ಒಂದು ದಶಕಗಳ ಕಾಲ ಜನಪ್ರಿಯ ಸಂಗೀತ ನಿರ್ದೇಶಕರಾಗಿ ವಿಜೃಂಭಿಸಿದರು. ಹಾಗೆಯೇ ಅವರ ಸಾಹಿತ್ಯ ಕೂಡ ಸಿನಿಮಾ ಲೋಕದಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸಿತ್ತು, ಆದರೂ ಚಿತ್ರ ನಿರ್ದೇಶಿಸುವ ಅವರ ಕನಸು ಈಡೇರಿರಲಿಲ್ಲ.

ಇದೇ 'ಬಾಗಿನ' ಚಿತ್ರವನ್ನು ಕೆಲವು ವರ್ಷಗಳ ಹಿಂದೆ ಶಿವರಾಜ್‌ಕುಮಾರ್ ಮತ್ತು ರಮ್ಯಾ ಜೋಡಿಯನ್ನು ಹಾಕಿ ಹಂಸಲೇಖ ಮಾಡಬೇಕಾಗಿತ್ತು, ಈ ಬಗ್ಗೆ ಪ್ರಕಟಣೆ ಮತ್ತು ಪ್ರಚಾರವೂ ಆಗಿತ್ತು, ಆದರೆ ಅದೇನೋ ಕಾರಣಕ್ಕೆ ಆಗ ಈ ಚಿತ್ರ ಆರಂಭವಾಗಲೇ ಇಲ್ಲ.

ಈಗ ಐದು ವರ್ಷಗಳ ಬಳಿಕ ಅದೇ ಕಥಾವಸ್ತುವನ್ನು ಇಟ್ಟುಕೊಂಡು ಆದರೆ ಹೊಸ ನಾಯಕ-ನಾಯಕಿಯನ್ನು ಹಾಕಿಕೊಂಡು ಮಾಡಲು ಹಂಸಲೇಖ ಹೊರಟಿದ್ದಾರೆ. "ನಾಯಕ ನಾಯಕಿ ಹೊಸಬರಾದರೂ ಚಿತ್ರದಲ್ಲಿ ಅನೇಕ ಖ್ಯಾತ ನಟ-ನಟಿಯರು ನಟಿಸುತ್ತಿದ್ದಾರೆ, 'ಪ್ರೇಮಲೋಕ'ದ ಮಾದರಿಯಲ್ಲಿ ಚಿತ್ರರಂಗದ ಅನೇಕರು ಸಿನಿಮಾದಲ್ಲಿ ಬಂದುಹೋಗುತ್ತಾರೆ" ಎನ್ನುತ್ತಾರೆ ಹಂಸಲೇಖ.

ಅದೇನೇ ಇರಲಿ ಕನ್ನಡ ಚಿತ್ರರಂಗ ಕಂಡ ಪ್ರತಿಭಾವಂತ ತಂತ್ರಜ್ಞ ಹಂಸಲೇಖ ಎಂಬದರಲ್ಲಿ ಎರಡು ಮಾತಿಲ್ಲ, ಈ ಹಿಂದೆ ಹಂಸಲೇಖ ಅವರ ಸಂಗೀತದ ಬಲದಿಂದಲೇ ಅನೇಕ ನಿರ್ದೇಶಕರು ಗಾಂಧಿನಗರದಲ್ಲಿ ಗೆದ್ದಿದ್ದಾರೆ ಎಂದರೆ ತಪ್ಪಾಗಲಾರದು. ಆದರೆ ಸ್ವತಃ ಹಂಸಲೇಖ ಅವರೇ ನಿರ್ದೇಶನ ಮಾಡಲು ಇಷ್ಟು ಸುದೀರ್ಘವಾದ ಸಮಯ ತೆಗೆದುಕೊಂಡಿರುವುದು, ಅಥವಾ ಉದ್ಯಮದ ನಾಯಕ ನಾಯಕಿಯರು ಅವರಿಗೆ ಕಾಲ್‌ಶೀಟ್ ನೀಡಲು ಹಿಂದೆಮುಂದೆ ನೋಡುತ್ತಿರುವುದು ವಿಚಿತ್ರವಾಗಿದೆ.

ಈಗ ಹಂಸಲೇಖ ನಿರ್ದೇಶಕರಾಗಿಯೂ ಹೊಸ ಅಧ್ಯಾಯವನ್ನು ಸೃಷ್ಟಿಸುತ್ತಾರೋ ನೋಡೋಣ.

ಪುಟ್ಟಕ್ಕನ ಸಂಕಟ

ಮೊನ್ನೆಯಷ್ಟೆ ರಾಷ್ಟ್ರ ಪ್ರಶಸ್ತಿ ಪಡೆದ 'ಪುಟ್ಟಕ್ಕನ ಹೈವೆ' ಚಿತ್ರ ಒಂದೇ ವಾರಕ್ಕೆ ಥಿಯೇಟರ್‌ಗಳಿಂದ ಎತ್ತಂಗಡಿಯಾಗಿದೆ. ...ನರ ನೀರಸವಾದ ಪ್ರತಿಕ್ರಿಯೆ ನೋಡಿ ನಿರ್ದೇಶಕ ಬಿ. ಸುರೇಶ್ ಬೇಸರಗೊಂಡಿದ್ದಾರೆ.

'ಪುಟ್ಟಕ್ಕನ ಹೈವೆ'ಗೆ ಸಿಕ್ಕಿದ ನೀರಸ ಪ್ರತಿಕ್ರಿಯೆಯಿಂದ ಬೆಚ್ಚಿ ಬಿದ್ದ ಮತ್ತೊಬ್ಬ ನಿರ್ದೇಶಕ ಎಂದರೆ ಪಿ. ಶೇಷಾದ್ರಿ. ...ವರ ನಿರ್ದೇಶನದ 'ಬೆಟ್ಟದ ಹೂ' ಚಿತ್ರವೂ ಮೊನ್ನೆ ರಾಷ್ಟ್ರ ಮಟ್ಟದಲ್ಲಿ ಪರಿಸರ ವಿಭಾಗದಲ್ಲಿ ಪ್ರಶಸ್ತಿಯನ್ನು ...ಾಚಿಕೊಂಡಿತ್ತು, 'ಪುಟ್ಟಕ್ಕನ ಹೈವೆ' ಬಿಡುಗಡೆಯಾದ ನಂತರ ತಮ್ಮ ಚಿತ್ರವನ್ನು ಬಿಡುಗಡೆ ಮಾಡಲು ಶೇಷಾದ್ರಿ ...ುತ್ತು ನಿರ್ಮಾಪಕ ಬಸಂತ್‌ಕುಮಾರ್ ಪಾಟೀಲ್ ಸಕಲ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಈಗ ಪರಿಸ್ಥಿತಿ ...ಂಭೀರವಾಗಿರುವುದರಿಂದ ಪಾಟೀಲರು ಇದರ ...ಡುಗಡೆಗೆ ಹೊಸ ಮುಹೂರ್ತವನ್ನು ಹುಡುಕುತ್ತಿದ್ದಾರಂತೆ.



ಅಂದಹಾಗೆ ಪಾಟೀಲರ ನಿರ್ಮಾಣದ ಎರಡು ...ತ್ರಗಳು ಈ ವರ್ಷ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಯನ್ನು ...ಡೆದಿರುವುದರಿಂದ ಅವರು ಎರಡೂ ಚಿತ್ರಗಳ ...ಡುಗಡೆಗೆ ಪ್ಲಾನ್ ಮಾಡುತ್ತಿದ್ದಾರಂತೆ. ಮಕ್ಕಳ ಚಿತ್ರಕ್ಕೆ ...ರ್ಣಕಮಲ ಪ್ರಶಸ್ತಿ ಪಡೆದ ರಾಮ್‌ದಾಸ್‌ನಾಯ್ಡು ...ರ್ದೇಶನದ 'ಹೆಜ್ಜೆಗಳು' ಕೂಡ ಪಾಟೀಲರು ...ರ್ಮಿಸಿರುವ ಚಿತ್ರ.

ಈಗ ಪಾಟೀಲರೇ ಫಿಲಂ ಛೇಂಬರ್‌ನ ಅಧ್ಯಕ್ಷರಾಗಿರು...ುದರಿಂದ ಅವರ ಎರಡೂ ಚಿತ್ರಗಳ ಬಿಡುಗಡೆಗೆ ಯಾವುದೇ ಥಿಯೇಟರ್ ಸಮಸ್ಯೆ ಆಗುವುದಿಲ್ಲ, ಅವರು ಹೇಳಿದ ...ಯೇಟರ್‌ಗಳು ಅವರಿಗೆ ಸಿಕ್ಕೇ ಸಿಗುತ್ತದೆ. ಆದರೆ ಅವರಿಗೆ ಸಮಸ್ಯೆ ಇರುವುದು ಪ್ರೇಕ್ಷಕರದ್ದು ಮಾತ್ರ ಎಂದು ...ಂಧಿನಗರದಲ್ಲಿ ಪಾಟೀಲರ ವಿರೋಧಿ ಗುಂಪು ಕುಹಕವಾಡುತ್ತಿದೆ. ಆದರೂ ಪಾಟೀಲರು ಮಾತ್ರ ಇದರಿಂದ ...ದೆಗುಂದದೆ "ನನ್ನ ನಿರ್ಮಾಣದ ಚಿತ್ರಗಳನ್ನು ಖಂಡಿತವಾಗಿ ಬಿಡುಗಡೆ ಮಾಡೇ ತೀರುತ್ತೇನೆ" ಎಂದು ಹೇಳುತ್ತಿದ್ದಾರಂತೆ.

ರಿಮೇಕೆಂದರೆ ಕಿಚ್ಚನಿಗೆ ವಾಕರಿಕೆಯಂತೆ!

ಅತಿಯಾದರೆ ಅಮೃತವೂ ವಿಷವಾಗುತ್ತದಂತೆ. ಅದರಂತೆ ಕಿಚ್ಚ ಸುದೀಪ್‌ಗೆ ಬಲುಪ್ರಿಯವಾಗಿದ್ದ ರಿಮೇಕ್ ಸಿನಿಮಾಗಳೆಂದರೆ ಈಗ ವಾಕರಿಕೆ ತರಿಸುತ್ತಿವೆಯಂತೆ.

ಸುದೀಪ್ ಕನ್ನಡ ಚಿತ್ರರಂಗದ ಪ್ರತಿಭಾವಂತ ನಟ ನಿಜ. ಆದರೆ ಸುದೀಪ್ ಆರಂಭದಿಂದಲೂ ಯಥೇಚ್ಛವಾಗಿ ನಂಬಿಕೊಂಡು ಬಂದಿದ್ದು ರಿಮೇಕ್ ಚಿತ್ರಗಳನ್ನೇ. ಮೊದಮೊದಲು ತಮಿಳಿನಲ್ಲಿ ವಿಕ್ರಂ ಮತ್ತು ಅಜಿತ್ ನಟಿಸಿದ್ದ ಬಹಳಷ್ಟು ಸಿನಿಮಾಗಳ ಕನ್ನಡ ಅವತರಣಿಕೆಯಲ್ಲಿ ಯಥಾವತ್ತಾಗಿ ನಟಿಸಿದ್ದ ಸುದೀಪ್ ಆಗ ರಿಮೇಕ್ ಸ್ಟಾರ್ ಆಗಿಯೇ ರಾರಾಜಿಸಿದರು. ನಿರ್ದೇಶನಕ್ಕೆ ಇಳಿದ ನಂತರವಂತೂ 'ಮೈ ಆಟೋಗ್ರಾಫ್'ನಿಂದ ಹಿಡಿದು ಇತ್ತೀಚೆಗೆ ಬಂದ 'ವೀರ ಮದಕರಿ' ಮತ್ತು 'ಕೆಂಪೇಗೌಡ' ತನಕ ಸಾಲುಸಾಲು ಚಿತ್ರಗಳನ್ನು ನಕಲು ಮಾಡಿದ್ದರು.

ಆದರೀಗ ಈ ರಿಮೇಕ್ ಚಿತ್ರಗಳ ಬಗ್ಗೆ ಸುದೀಪ್‌ಗೆ ಅಲರ್ಜಿ ಶುರುವಾಗಿದೆಯಂತೆ. ಸದ್ಯದಲ್ಲೇ ಎಸ್.ಕುಮಾರ್ ಅವರು 'ಕಿಕ್' ಎಂಬ ಚಿತ್ರವನ್ನು ರಿಮೇಕ್ ಮಾಡಲು ಸರ್ವಸಿದ್ಧತೆ ನಡೆಸಿದ್ದು ಅದರಲ್ಲಿ ಸುದೀಪ್ ಅಭಿನಯಿಸಬೇಕಿತ್ತು, ಆದರೆ ಸುದೀಪ್ ಕೊನೆ ಗಳಿಗೆಯಲ್ಲಿ 'ರಿಮೇಕ್ ಬೇಡ' ಎಂದರು. ಈಗ ಕುಮಾರ್ ಸುದೀಪ್‌ಗಾಗಿ ಒಂದು ಒಳ್ಳೆ ಕಥೆ ಹಾಗೂ ನಿರ್ದೇಶಕನ ಅನ್ವೇಷಣೆಯಲ್ಲಿದ್ದಾರೆ.




ಮಹೇಶ್ ಬಾಬು ನಟಿಸಿದ್ದ 'ಅತಡು' ಎಂಬ ತೆಲುಗು ಚಿತ್ರದ ಕನ್ನಡ ರೀಮೇಕ್‌ನಲ್ಲೂ ಸುದೀಪ್ ನಟಿಸಬೇಕಿತ್ತು. ಈಗ ಸುದೀಪ್ ಅದಕ್ಕೂ ಅಡ್ಡಡ್ಡ ತಲೆಯಲ್ಲಾಡಿಸಿ ಒಲ್ಲೆ ಎಂದಿದ್ದಾರೆ. ಸದ್ಯ 'ವಿಷ್ಣುವರ್ಧನ' ಹಾಗೂ ತೆಲುಗಿನ 'ಈಗ' ಚಿತ್ರದ ರೀಮೇಕ್‌ಗಳಲ್ಲಿ ನಟಿಸುತ್ತಿರುವ ಸುದೀಪ್ ಆ ಚಿತ್ರಗಳ ಶೂಟಿಂಗ್ ಮುಗಿದ ಮೇಲೆ ತಮಗೆ ಹೊಂದುವಂತಹ ಹೊಸ ಕಥೆ ರಚಿಸಲು ನಿರ್ಮಾಪಕರಿಗೆ ಹೆಗಲು ನೀಡಲಿದ್ದಾರಂತೆ.

ನಿರ್ದೇಶಕ ಎಸ್. ನಾರಾಯಣ್ ಸುದೀಪ್‌ಗಾಗಿ ವಿಕ್ರಂ-ತ್ರಿಷಾ ನಟಿಸಿದ್ದ 'ಸಾಮಿ' ಚಿತ್ರವನ್ನು ಭಟ್ಟಿ ಇಳಿಸಲು ಸಕಲ ಸಿದ್ಧತೆಗಳನ್ನು ನಡೆಸಿದ್ದರು. ಆದರೆ ಸುದೀಪ್ ಕೋರಿಕೆ ಮೇರೆಗೆ ನಾರಾಯಣ್ 'ವೀರ ಪರಂಪರೆ' ಎಂಬ ರೀಮಿಕ್ಸ್ ಸಿನಿಮಾವನ್ನು ಮಾಡಬೇಕಾಗಿ ಬಂದಿತ್ತು,

'ಕೆಂಪೇಗೌಡ' ಸಿನಿಮಾ ಬಿಡುಗಡೆಗೊಂಡು ಸೂಪರ್ ಹಿಟ್ ಆಗಿ ನಿರ್ಮಾಪಕ ಶಂಕರೇಗೌಡರ ಜೇಬು ಭರ್ತಿಯಾಗುತ್ತಿದ್ದಂತೇ ಕಾಲಿಪೀಲಿ ಪ್ರೊಡ್ಯೂಸರುಗಳು ತಮಿಳು, ತೆಲುಗು ಚಿತ್ರಗಳ ಒರಿಜಿನಲ್ ಸಿಡಿ ಹಿಡಿದು ಸುದೀಪ್ ಮನೆ ಮುಂದೆ ಬಿಡಾರ ಹಾಕಿದರು. ಇದೆಲ್ಲದರಿಂದ ಬೇಸತ್ತ ಸುದೀಪ್ ಸದ್ಯಕ್ಕೆ ರಿಮೇಕ್ ಚಿತ್ರಗಳಿಗೆ ಅಲ್ಪವಿರಾಮ ಹಾಕಿ ಹೊಸದೇನನ್ನಾದರೂ ಸೃಷ್ಟಿಸುವ ಆಶಯದಲ್ಲಿದ್ದಾರೆ.

'ಜೋಗಯ್ಯ'ನ ಗಾನ ಜೋರು!



ನಿರ್ದೇಶಕ ಪ್ರೇಮ್ ಮೊದಲ ಸುತ್ತಿನಲ್ಲಿ ಜಯ ಗಳಿಸಿದ್ದಾರೆ.

ಅರ್ಥಾತ್ ಅವರ ನಿರ್ದೇಶನದ 'ಜೋಗಯ್ಯ' ಚಿತ್ರದ ಹಾಡುಗಳು ಈಗಾಗಲೇ ಜನಪ್ರಿಯವಾಗಿವೆ. ಒಂದು ಕಡೆ ಪಡ್ಡೆ ಹುಡುಗರೂ ಮತ್ತೊಂದು ಕಡೆ ಚಿಕ್ಕ ಮಕ್ಕಳೂ 'ಜೋಗಯ್ಯ' ಚಿತ್ರದ ಹಾಡುಗಳನ್ನು ಗುನುಗುತ್ತಿದ್ದಾರೆ.

ಸಾಮಾನ್ಯವಾಗಿ ಚಿತ್ರದ ಹಾಡುಗಳ ಧ್ವನಿಮುದ್ರಿಕೆ ಬಿಡುಗಡೆಯಾದ ಕೂಡಲೆ ಆ ಚಿತ್ರದ ಹಣೆಬರೆಹವನ್ನು ಪಂಡಿತರು ನಿರ್ಧರಿಸುತ್ತಾರೆ. ಶಿವರಾಜ್‌ಕುಮಾರ್ ಅವರ ನಟನೆಯ ನೂರನೇ ಚಿತ್ರವಾದ 'ಜೋಗಯ್ಯ'ದ ಬಗ್ಗೆ ಗಾಂಧಿನಗರದವರೂ ಅತ್ಯಂತ ಕುತೂಹಲವನ್ನು ತಾಳಿದ್ದರು. ಇದೀಗ ಚಿತ್ರದ ಹಾಡುಗಳು ಹಿಟ್ ಆಗಿರುವುದರಿಂದ ಹಂಚಿಕೆದಾರರೆಲ್ಲಾ ಈ ಚಿತ್ರವನ್ನು ಖರೀದಿಸಲು ಉತ್ಸಾಹ ತೋರಿಸುತ್ತಿದ್ದಾರೆ.

ಚಿತ್ರದ ಹಾಡುಗಳು ಹಿಟ್ ಆಗಿರುವುದರಿಂದ ಉತ್ಸಾಹಗೊಂಡಿರುವ ನಿರ್ಮಾಪಕ ಪ್ರೇಮ್ ಈ ಚಿತ್ರದ ಬಿ.ಕೆ.ಟಿ. ವಲಯದ ಪ್ರದರ್ಶನದ ಹಕ್ಕಿಗಾಗಿ ಆರು ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರಂತೆ. ಅಷ್ಟು ದೊಡ್ಡ ಮೊತ್ತಕ್ಕೆ ಚಿತ್ರ ಮಾರಾಟವಾದರೆ ಅದು ಕನ್ನಡ ಚಿತ್ರರಂಗದಲ್ಲಿ ಖಂಡಿತವಾಗಿಯೂ ಒಂದು ದಾಖಲೆಯಾಗಲಿದೆ. ಒಂದಂತೂ ನಿಜ, 'ಜೋಗಯ್ಯ' ಚಿತ್ರದ ಅಬ್ಬರಕ್ಕೆ ಹೆದರಿ ಅನೇಕ ನಿರ್ಮಾಪಕರು ತಮ್ಮ ಚಿತ್ರದ ಬಿಡುಗಡೆ ದಿನಾಂಕವನ್ನು ಮುಂದೂಡುತ್ತಿದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ಏನಿದ್ದರೂ 'ಜೋಗಯ್ಯ'ನದೇ ಜಮಾನ.

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 15-6-2011 RNI No. KARKAN2005/



ಡೈಸಿಯ ಸ್ಪೈಸಿ ಮದುವೆ

ಕನ್ನಡ ಚಿತ್ರರಂಗದಲ್ಲಿ 'ಸ್ಪೈಸಿ ಹುಡುಗಿ' ಎಂದೇ ಖ್ಯಾತಳಾಗಿದ್ದ ಕೊಡಗಿನ ಸುಂದರಿ ಡೈಸಿ ಬೋಪಣ್ಣ ಸದ್ದುಗದ್ದಲವಿಲ್ಲದೆ ಮುಂಬೈಯಲ್ಲಿ ಹಸೆಮಣೆಯನ್ನು ಏರಿದ್ದಾರೆ.

ಕನ್ನಡದ ಹಲವು ನಾಯಕಿಯರಂತೆ ಡೈಸಿ ಬೋಪಣ್ಣ ಕೂಡ ಇಲ್ಲಿ ಕೆಲವು ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದ ನಂತರ ಹೆಚ್ಚಿನ ಅವಕಾಶಕ್ಕಾಗಿ ಅದೃಷ್ಟವನ್ನು ಅರಸುತ್ತಾ ಬಾಲಿವುಡ್ಡಿಗೆ ಪ್ರಯಾಣ ಬೆಳೆಸಿದ್ದಳು. ಅಲ್ಲಿ ಅಕ್ಷಯ್ ಖನ್ನಾ ಜೊತೆ ಚಿತ್ರವೊಂದರಲ್ಲಿ ಮಸಾಲೆ ದೃಶ್ಯದಲ್ಲಿ ಕಾಣಿಸಿಕೊಂಡ ನಂತರ ಈಕೆ ಅಲ್ಲಿಯೇ ಠಿಕಾಣಿ ಹೂಡುತ್ತಾಳೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಆನಂತರ ಆಕೆ ಬಾಲಿವುಡ್ಡಿನಲ್ಲಿ ಹೆಚ್ಚಿನ ಅವಕಾಶಗಳು ಸಿಗಲಿಲ್ಲ, ಇತ್ತ ಕನ್ನಡ ಚಿತ್ರರಂಗದಲ್ಲೂ ಅಂತಹ ಅವಕಾಶಗಳು ಆಕೆಯನ್ನು ಅರಸಿ ಬರಲಿಲ್ಲ.

ಈ ಮಧ್ಯೆ ಒಮ್ಮೆ ಬಿದ್ದು ಸೊಂಟ ಮುರಿದುಕೊಂಡ ಡೈಸಿ ಸುಮಾರು ಒಂದು ವರ್ಷ ಕಾಲ ಹಾಸಿಗೆಯಲ್ಲೇ ಇದ್ದರು. ಇನ್ನೇನು ಆಕೆಯ ಬಣ್ಣದ ಜೀವನ ಮುಗಿದೇ ಹೋಯಿತು ಎಂದು ಭಾವಿಸಿದಾಗ ಆಕೆ ಪವಾಡ ಸದೃಶ್ಯಳಾಗಿ ಸುಧಾರಿಸಿಕೊಂಡಳು. ಆನಂತರ ತನ್ನ ವೃತ್ತಿಜೀವನದ ಎರಡನೇ ಇನ್ನಿಂಗ್ಸ್‌ನ್ನು ಕನ್ನಡ ಚಿತ್ರ ರಂಗದಲ್ಲಿ ಆರಂಭಿಸಿದಳು. ರಮೇಶ್ ಮತ್ತು ಆದಿತ್ಯನಿಗೆ ಜೋಡಿಯಾಗಿ ಈಕೆ ಸದ್ಯಕ್ಕೆ ಎರಡು ಕನ್ನಡ ಚಿತ್ರಗಳಲ್ಲಿ ನಟಿಸುತ್ತಿದ್ದಾಳೆ.

ಈ ಮಧ್ಯೆ ಮೇ 29ರಂದು ಸದ್ದುಗದ್ದಲವಿಲ್ಲದೆ ಸರಳವಾಗಿ ಮತ್ತು ಅಷ್ಟೇ ಸಾಂಪ್ರದಾಯಕವಾಗಿ ಮದುವೆಯಾಗುವ ಮುಖಾಂತರ ಆಕೆ ಚಿತ್ರರಂಗದವರನ್ನು ಅಚ್ಚರಿಪಡಿಸಿದ್ದಾರೆ. ಈಕೆಯ ಕೈ ಹಿಡಿದವನು ಹಿಂದಿ ಚಿತ್ರರಂಗದ ಜನಪ್ರಿಯ ನಾಯಕಿ ಪ್ರಿಯಾಂಕ ಚೋಪ್ರಳ ಮ್ಯಾನೇಜರ್ ಆಗಿದ್ದವರ ಮಗ ಎಂದು ತಿಳಿದುಬಂದಿದೆ. ಇವರಿಬ್ಬರ ನಡುವೆ ಯಾವಾಗ ಪ್ರೇಮಾಂಕುರವಾಯಿತು ಎಂಬಿತ್ಯಾದಿ ಡೀಟೇಲ್ಸ್ ಇನ್ನು ಸಿಕ್ಕಿಲ್ಲ.


ಕವಿತಾ ಲಂಕೇಶ್ ಅವರ 'ಬಿಂಬ' ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಡೈಸಿ ಬೋಪಣ್ಣ ಕನ್ನಡ ಚಿತ್ರರಂಗದಲ್ಲಿ ಆರಕ್ಕೆ ಏರದ ಮೂರಕ್ಕೆ ಇಳಿಯದ ನಟಿಯಾಗಿ ಗುರುತಿಸಿಕೊಂಡರೇ ವಿನಃ ಎಲ್ಲೂ ದೊಡ್ಡ ನಾಯಕಿಯಾಗಿ ಕಾಣಿಸಿಕೊಳ್ಳಲೇ ಇಲ್ಲ. ಅದೇನೇ ಇರಲಿ ಸಂಸಾರ ಜೀವನಕ್ಕೆ ಕಾಲಿಟ್ಟ ಈ ಸುಂದರಿಗೆ ನಮ್ಮ ಶುಭಕಾಮನೆಗಳು.



ವಾರ್ತಾ ಇಲಾಖೆಗೆ ವಾಸಿಯಾಗದ ರೋಗ!

ವಾರ್ತಾ ಇಲಾಖೆಯ ಅಧಿಕಾರಿಗಳ ಅಜ್ಞಾನ ಮತ್ತೊಮ್ಮೆ ಬಹಿರಂಗವಾಗಿದೆ. ಈ ಬಾರಿ ಅವರ ಅಜ್ಞಾನವನ್ನು ಬಹಿರಂಗಗೊಳಿಸಿದ್ದು ಹಿರಿಯ ಕಲಾವಿದೆ ಭಾರತಿ ವಿಷ್ಣುವರ್ಧನ್.


ಭಾರತಿ ಅವರನ್ನು ಸರ್ಕಾರವು 2010ನೇ ವರ್ಷದ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಗೆ ಅಧ್ಯಕ್ಷೆಯಾಗಿ ಆಯ್ಕೆಮಾಡಿತ್ತು, ಆದರೆ ಸರ್ಕಾರದ ಈ ಆಹ್ವಾನವನ್ನು ಭಾರತಿಯವರು ನಯವಾಗಿ ತಿರಸ್ಕರಿಸಿದ್ದಾರೆ. ಅದಕ್ಕೆ ಕಾರಣ ವಿಷ್ಣುವರ್ಧನ್ ನಟಿಸಿರುವ ಎರಡು ಚಿತ್ರಗಳು ಪ್ರಶಸ್ತಿಯ ಸ್ಪರ್ಧಾಕಣದಲ್ಲಿ ಇರುವುದು. ಇಂತಹ ಒಂದು ಸಿಂಪಲ್ ವಿಷಯ ವಾರ್ತಾ ಇಲಾಖೆಯ ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲವೆಂದರೆ ಅವರ ಅಜ್ಞಾನಕ್ಕೆ ಏನೆನ್ನಬೇಕು?



ಭಾರತಿ ವಿಷ್ಣುವರ್ಧನ್ ಅವರ ದಿವಂಗತ ಪತಿ ವಿಷ್ಣುವರ್ಧನ್ ನಟಿಸಿರುವ 'ಆಪ್ತರಕ್ಷಕ' ಚಿತ್ರ ಕನಿಷ್ಠ ಕೆಲವು ಪ್ರಶಸ್ತಿಗಳನ್ನಾದರೂ ಪಡೆಯುವ ಅರ್ಹತೆ ಹೊಂದಿದೆಯಂತೆ. "ಇಂತಹ ಸಂದರ್ಭದಲ್ಲಿ ನಾನೇ ಆ ಸಮಿತಿಯ ಅಧ್ಯಕ್ಷೆಯಾದರೆ ಚೆನ್ನಾಗಿರುತ್ತದಾ?" ಎಂದು ಭಾರತಿ ಅವರು ಪ್ರಶ್ನಿಸುತ್ತಾರೆ.

ಸಾಧಾರಣವಾಗಿ ಆಯ್ಕೆ ಸಮಿತಿಯ ಸದಸ್ಯರನ್ನು ಆಯ್ಕೆಮಾಡು[illegible] ಅವರ ಸಂಬಂಧಿಕರು ನಟಿಸಿದ ಅಥವಾ ಇನ್ನಾವುದೇ ರೀತಿ[illegible] ಭಾಗಿಯಾಗಿರುವ ಚಿತ್ರಗಳು ಸ್ಪರ್ಧಾಕಣದಲ್ಲಿ ಇರಬಾರದೆಂಬ ನಿಯಮ[illegible] ಈ ಕಾರಣಕ್ಕಾಗಿ ಈ ಹಿಂದೆ ಹಲವಾರು ವಿವಾದಗಳು ಕ[illegible] ಉಂಟಾಗಿದ್ದವು. ಆದರೂ ಇಂತಹ ತಪ್ಪುಗಳನ್ನು ಸರಿಪಡಿಸುವ ಬದ[illegible] ಮತ್ತೆ ಅದೇ ತಪ್ಪುಗಳನ್ನು ಮಾಡುವ ವಾರ್ತಾ ಇಲಾಖೆಯ ಅಧಿಕಾರಿ[illegible] ಕಾರ್ಯತತ್ಪರತೆಗೆ ಏನೆನ್ನಬೇಕು ಅರ್ಥವಾಗುತ್ತಿಲ್ಲ.

'ಅ'ಕಾರದ ಮಹಿಮೆ ಅಪಾರ!



'ಆಪ್ತ ರಕ್ಷಕ' ಮತ್ತು 'ಆಪ್ತ ಮಿತ್ರ' ಚಿತ್ರಗಳ ನಿರ್ದೇಶಕ ಪಿ. ವಾಸು ಹೊಸ ಚಿತ್ರವನ್ನು ನಿರ್ದೇಶಿಸಲಿರುವ ಸುದ್ದಿ ಈಗಾಗಲೇ ನಿಮಗೆ ಗೊತ್ತಿರಬೇಕು. ಈ ಚಿತ್ರದಲ್ಲಿ ಉಪೇಂದ್ರ ನಾಯಕ ನಟನಾಗಿ ನಟಿಸುತ್ತಿರುವುದು ಕೂಡ ಹೊಸ ಸುದ್ದಿಯೇನಲ್ಲ. ಹೊಸ ಸುದ್ದಿ ಏನೆಂದರೆ ಈ ಚಿತ್ರಕ್ಕೆ 'ಆರಕ್ಷಕ' ಎಂದು ಹೆಸರಿಡಲಾಗಿದೆಯಂತೆ.



ಹೇಳಿಕೇಳಿ ಸಿನಿಮಾದವರು ಮೂಢನಂಬಿಕೆಗಳಿಗೆ ಜೋತು ಬೀಳುವುದು ನಿಮಗೆ ಗೊತ್ತೇ ಇದೆ. ಇದಕ್ಕೆ ಪ್ರತಿಭಾನ್ವಿತ ನಿರ್ದೇಶಕ ಪಿ. ವಾಸು ಕೂಡ ಅಪವಾದವಲ್ಲ. ಅವರ ಪ್ರಕಾರ 'ಆ' ಅಕ್ಷರದಿಂದ ಆರಂಭವಾಗುವ ಚಿತ್ರಗಳು ಅವರಿಗೆ ಅಪಾರವಾದ ಜನಪ್ರಿಯತೆ ಮತ್ತು ಹಣವನ್ನು ತಂದುಕೊಟ್ಟಿದೆಯಂತೆ. ಇದಕ್ಕೆ ಉದಾಹರಣೆ 'ಆಪ್ತ ಮಿತ್ರ' ಮತ್ತು 'ಆಪ್ತ ರಕ್ಷಕ' ಬಾಕ್ಸ್ ಆಫೀಸ್‌ನಲ್ಲಿ ಹಣವನ್ನು ಕೊಳ್ಳೆ ಹೊಡೆದದ್ದು ಎನ್ನುತ್ತಾರೆ ವಾಸು. ಅದೇ ಕಾರಣಕ್ಕಾಗಿ ಈಗ ತಮ್ಮ ಹೊಸ ಚಿತ್ರಕ್ಕೆ ವಾಸು 'ಆರಕ್ಷಕ' ಎಂದು ಹೆಸರಿಟ್ಟಿದ್ದಾರೆಂತೆ. ಈ ಹಿಂದಿನ ಚಿತ್ರಗಳಂತೆ ಈ ಚಿತ್ರವೂ ವಾಸು ಅವರಿಗೆ ರಕ್ಷಣೆ ನೀಡುತ್ತದೋ ನೋಡಬೇಕು. ಅದಕ್ಕಿಂತಲೂ ಮುಖ್ಯವಾಗಿ ವಾಸು ಮತ್ತು ಉಪ್ಪಿ ಸಂಗಮದ ಸುದ್ದಿ ಹಂಚಿಕೆದಾರರು ಮತ್ತು ನಿರ್ಮಾಪಕರಲ್ಲಿ ಹೊಸ ಚೇತನವನ್ನು ಮೂಡಿಸಿದೆ ಎಂಬುದು ನಿಜ. ವಾಸು-ಉಪ್ಪಿ ಜೋಡಿ ವಾಸು-ವಿಷ್ಣು ಜೋಡಿಯಂತೆ ಬಾಕ್ಸ್‌ಆಫೀಸ್‌ನ್ನು ಮೋಡಿಮಾಡುತ್ತಾ??

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...